# ಚಮಕಾಧ್ಯಾಯಭಾಷ್ಯ

(ಕನ್ನಡ ವಿವರಣೆ)



ಅಧ್ಯಾತ್ಮಪ್ರಕಾಶ ಕಾರ್ಯಾಲಯ

ಹೊಳೆನರಸೀಪುರ - 573 211

www.adhyatmaprakasha.org

2010

ಸ್ಥಾಪನೆ : 1920 ದೂ. : 08175-273820

# ಅಧ್ಯಾತ್ಮ ಪ್ರಕಾಶ ಕಾರ್ಯಾಲಯ

## (ಪಬ್ಲಿಕ್ ಛಾರಿಟಬಲ್ ಟ್ರಸ್ಟ್)

ಹೊಳೆನರಸೀಪುರ-573 211

ವೇ || ಹೆಚ್.ಎಸ್. ಲಕ್ಷ್ಮೀನರಸಿಂಹಮೂರ್ತಿಗಳಿಂದ ರಚಿಸಲ್ಪಟ್ಟು

ಪ್ರಕಾಶನಗೊಂಡಿರುವ ಗ್ರಂಥಗಳು

### I. ವೇದಸಾಹಿತ್ಯಪ್ರಿಯರಿಗೆ : (ಕರ್ಮಕಾಂಡದಲ್ಲಿ ಶ್ರದ್ಧಾವಂತರಿಗೆ)

ಪುಟಗಳು

1. ರುದ್ರಭಾಷ್ಯಪ್ರಕಾಶನ : (ನಮಸ್ತೇ ರುದ್ರ – ಎಂಬ ವೇದಭಾಗದ – ಲಲಿತವಾದ ಕನ್ನಡ ವಿವರಣೆ ) 154
2. ಚಮಕಾಧ್ಯಾಯಭಾಷ್ಯ : (ಚ.ಮೇ – ಎಂಬ ವೇದಭಾಗಗಳ ಸರಳ ವ್ಯಾಖ್ಯಾನ) 96
3. ಪುರುಷಸೂಕ್ತಭಾಷ್ಯ : (ಸಹಸ್ರಶೀರ್ಷಾ– ಎಂಬ ಸೂಕ್ತದ ಅರ್ಥವಿವರಣೆ ) 86
4. ಶ್ರೀಸೂಕ್ತಭಾಷ್ಯ : (ಹಿರಣ್ಯವರ್ಣಾಂ– ಎಂಬ ಸೂಕ್ತದ ಅರ್ಥ ) 64
5. ವಿಷ್ಣುಸೂಕ್ತಭಾಷ್ಯ : (ಋಗ್ವೇದದ ವಿಷ್ಣುಸೂಕ್ತದ 45 ಋಕ್ಕುಗಳ ಅರ್ಥ ವಿವರಣೆ – ನಾರಾಯಣ ಸೂಕ್ತಭಾಷ್ಯ ಸಮೇತ ) 103
6. ಸೌರಸೂಕ್ತಭಾಷ್ಯ :(ಋಗ್ವೇದದ ಸೌರಸೂಕ್ತದ 64 ವಾಕ್ಕುಗಳ ಅರ್ಥವಿವರಣೆ) 86

### II. ಪುರಾಣಸ್ತೋತ್ರಪ್ರಿಯರಿಗೆ (ಭಕ್ತಿಪ್ರಧಾನರಾದ ಸಾಧಕರಿಗೆ)

7. ಅಧ್ಯಾತ್ಮರಾಮಾಯಣ : (ಸಂಪೂರ್ಣ ಮೂಲ, ಭಾವಾರ್ಥ ಸಹಿತ ) 620
8. ಅಧ್ಯಾತ್ಮ ಶಂಕರವಿಜಯ : (ಶಂಕರಾಚಾರ್ಯರ ಚರಿತ್ರೆ ) 188
9. ಶ್ರೀಗುರುಚರಿತಾಮೃತ : (ಶ್ರೀ ಶ್ರೀಗಳವರ ಜೀವನ ಚರಿತ್ರೆ ಮತ್ತು ಕಾರ್ಯಾಲಯದ ಇತಿಹಾಸ ) 234
10. ಸ್ತೋತ್ರಮಾಲಾ – ಭಾಗ 1 ಪಂಚರತ್ನಗಳು : 1) ಭೀಷ್ಮಸ್ತವರಾಜ 2) ಹರಿಶರಣಾಷ್ಟಕ 3) ಅನುಸ್ಮೃತಿ 4) ಗಜೇಂದ್ರಮೋಕ್ಷ 5) ಆದಿತ್ಯಹೃದಯ 120
11. ಸೋತ್ರಮಾಲಾ – ಭಾಗ 2 : 4 ಗಣಪತಿ ಸ್ತೋತ್ರಗಳು, 11 ಶಿವಸ್ತೋತ್ರಗಳು, 2 ವಿಶ್ವಸ್ತೋತ್ರಗಳು – ಪಾಂಡುಗೀತೆ ಸಹಿತ) 84
12. ಶಿವಾಪರಾಧಕ್ಷಮಾಪಣಾ ಸ್ತೋತ್ರ : (ವಿವರಣೆ ಸಹಿತ) 38

(ರಕ್ಷಾಪುಟದ ಮೂರನೆಯ ಪುಟದಲ್ಲಿ ಮುಂದುವರೆದಿದೆ)

ಅಧ್ಯಾತ್ಮಗ್ರಂಥಾವಳಿ

# ಚಮಕಾಧ್ಯಾಯಭಾಷ್ಯ

(ಕನ್ನಡ ವಿವರಣೆ)

ಲೇಖಕರು :

ಅಧ್ಯಾತ್ಮಪ್ರವೀಣ, ವೇದವಿದ್ಯಾಭೂಷಣ

**ಹೆಚ್.ಎಸ್.ಲಕ್ಷ್ಮೀನರಸಿಂಹಮೂರ್ತಿ**

ಕ್ರಮಾಂಕ : 191

ಪ್ರಕಾಶಕರು :

ಅಧ್ಯಾತ್ಮಪ್ರಕಾಶಕಾರ್ಯಾಲಯ

ಹೊಳೆನರಸೀಪುರ– 573211

ದೂರವಾಣಿ : 08175 273820

www.adhyatmaprakasha.org.

2010

CHAMAKAADYAYA BHASHYA-
Written by H.S. LAKSHMINARASIMHAMURTHY
Published by Adhyatma Prakasha Karyalaya, Public Charitable Trust, Holenarasipur - 573211(INDIA)
Phone : 08175-273820 www.adhyatmaprakasha.org.

| | | | |
|---|---|---|---|
| ಮೊದಲನೆಯ ಮುದ್ರಣ | I | 1981 | (1000 ಪ್ರತಿಗಳು) |
| ಎರಡನೆಯ ಮುದ್ರಣ | II | 1985 | (2000 ಪ್ರತಿಗಳು) |
| ಮೂರನೆಯ ಮುದ್ರಣ | III | 1995 | (2000 ಪ್ರತಿಗಳು) |
| ನಾಲ್ಕನೆಯ ಮುದ್ರಣ | IV | 2000 | (2000 ಪ್ರತಿಗಳು) |
| ಐದನೆಯ ಮುದ್ರಣ | V | 2010 | (2000 ಪ್ರತಿಗಳು) |

ಪುಟಗಳು : 12+84 = 96

ಬೆಲೆ : ರೂ. 25/

ಇದರ ಹಕ್ಕುಗಳೆಲ್ಲವೂ ಅಧ್ಯಾತ್ಮಪ್ರಕಾಶಕಾರ್ಯಾಲಯದವು
**All Rights Reserved**

**ಅಕ್ಷರ ಜೋಡಣೆ :**
ಪ್ರಶಾಂತ್ ಎಂಟರ್‌ಪ್ರೈಸಸ್
ನಂ. 45, 3ನೇ ಮುಖ್ಯರಸ್ತೆ, ಟಿ.ಆರ್.ನಗರ ಪೋಸ್ಟ್
ನಾಗಸಂದ್ರ, ಬೆಂಗಳೂರು - 560 028 , ದೂರವಾಣಿ: 26761529

**ಮುದ್ರಣಸ್ಥಾನ :**
ಶ್ರೀರಾಮ ಪ್ರಿಂಟರ್ಸ್
ನಂ. 25, 15ನೇ ಕ್ರಾಸ್,
ಶ್ರೀನಿಧಿ ಲೇಔಟ್, ಬೆಂಗಳೂರು - 560 062
ದೂ. 98453 46197

# ಪ್ರಕಾಶಕರ ಬಿನ್ನಹ

ಅಧ್ಯಾತ್ಮವಿದ್ಯೆಯು ಪ್ರಧಾನವಾಗಿ ವೈದಿಕಸಾಹಿತ್ಯದ ಉಪನಿಷದ್ಭಾಗಗಳಲ್ಲಿ ಪ್ರತಿಪಾದಿತವಾಗಿದ್ದರೂ ಕರ್ಮಕಾಂಡಭಾಗದಲ್ಲಿಯೂ ಇರುವ ಕೆಲವು ಮಂತ್ರಗಳಲ್ಲಿಯೂ ಸೂಕ್ತಗಳಲ್ಲಿಯೂ ಅದು ಪ್ರಸ್ತಾಪಿಸಲ್ಪಟ್ಟಿದೆ. ಈ ತತ್ತ್ವವನ್ನು ಆಸ್ತಿಕರಿಗೆ ತಿಳಿಸುವ ಉದ್ದೇಶದಿಂದ ಬಹುಜನಪ್ರಿಯವಾಗಿರುವ ಚಮಕಾಧ್ಯಾಯ ಭಾಷ್ಯವನ್ನು ಕನ್ನಡಭಾಷೆಯಲ್ಲಿ ಬರೆದು ವಾಚಕರಿಗೆ ಅರ್ಪಿಸಲಾಗಿದೆ.

ಚಮಕಾಧ್ಯಾಯವನ್ನು ರುದ್ರಾಧ್ಯಾಯದೊಡನೆ ವೈದಿಕರು ಪಠಿಸಿ ಈಶ್ವರನಿಗೆ ಅಭಿಷೇಕಮಾಡುವದು ಎಲ್ಲರಿಗೂ ತಿಳಿದಿದೆ. ಆದರೆ ಈ ಮಂತ್ರ ಭಾಗದ ಅರ್ಥವೇನೆಂದು ತಿಳಿದು ಅನುಷ್ಠಾನಮಾಡಿದಲ್ಲಿ ದೇವಪೂಜಾ ಹೋಮಾದಿಗಳಿಗೆ ಹೆಚ್ಚಿನ ಶಕ್ತಿಯುಂಟಾಗಿ ಸಾಧಕನು ತನ್ನ ಆತ್ಮನೇ ಆದ ರುದ್ರನನ್ನು ತಿಳಿಯಲು ತಕ್ಕ ಯೋಗ್ಯತೆಯನ್ನು ಹೊಂದುವದರಲ್ಲಿ ಸಂಶಯವಿಲ್ಲ. ಇದು ಮುಂದೆ ಅವನಿಗೆ ಮುಕ್ತಿಗೆ ದಾರಿಯಾಗುವದು. ಹೀಗೆ ಈ ಮಂತ್ರಭಾಗದ ವಿವರಣೆಯು ಸಪ್ರಯೋಜನವೆಂದು ಕಂಡುಬಂದದ್ದರಿಂದ ಈ ಗ್ರಂಥವನ್ನು ಪ್ರಕಟಿಸಲಾಗಿದೆ.

ನಾಲ್ಕು ವೇದಗಳಿಗೂ ಸಂಸ್ಕೃತಭಾಷೆಯಲ್ಲಿ ಭಾಷ್ಯವನ್ನು ಬರೆದು ಅನುಗ್ರಹಿಸಿರುವ ಶ್ರೀ ಸಾಯಣಾಚಾರ್ಯರು ವೇದಪುರುಷನ ಮತ್ತೊಂದು ಅವತಾರವೆಂದೇ ಹೇಳಲಡ್ಡಿಯಿಲ್ಲ. ಇಂಥ ಮಹನೀಯರ ಭಾಷ್ಯಾನುಗುಣ ವಾಗಿಯೂ ಹಾಗೂ ಶ್ರೀ ಶಂಕರಭಾಷ್ಯದಲ್ಲಿ ಪ್ರತಿಪಾದಿತವಾಗಿರುವ ವೇದಾಂತ ಸಿದ್ಧಾಂತಾನುಗುಣವಗಿಯೂ ಈ ಕನ್ನಡ ವಿವರಣೆಯನ್ನು ಸಿದ್ಧಗೊಳಿಸಲಾಗಿದೆ. ಈ ಗ್ರಂಥಕ್ಕೆ ಶ್ರೀವಿಷ್ಣುಸೂರಿಗಳೆಂಬ ಮಹನೀಯರ ಭಾಷ್ಯದಲ್ಲಿನ ವಿಷಯಗಳನ್ನೂ ಹೆಚ್ಚಾಗಿ ಬಳಸಿಕೊಳ್ಳಲಾಗಿದೆ.

ಕಾರ್ಯಾಲಯದ ಪುಸ್ತಕಗಳೆಲ್ಲಾ ಮುಗಿದು ಹೋದಾಗಲೆಲ್ಲಾ ಪುನಃ ಮುದ್ರಣಮಾಡಿ ಓದುಗರಿಗೆ ಸುಲಭ ಬೆಲೆಯಲ್ಲಿ ದೊರಕಿಸಿಕೊಡುವುದೇ ಮುಖ್ಯಧ್ಯೇಯ. ಜನಪ್ರಿಯವಾಗಿದ್ದ ನಾಲ್ಕನೆ ಪುನರ್ಮುದ್ರಣದ ಪುಸ್ತಕಗಳು ಮಾರಾಟವಾದ್ದರಿಂದ ಮುದ್ರಣದ ತಪ್ಪುಗಳನ್ನೆಲ್ಲಾ ತಿದ್ದಿ ಗ್ರಂಥಶರೀರದಲ್ಲಿ ಯಾವ ಬದಲಾವಣೆಯಿಲ್ಲದೆ ಐದನೆಯ ಬಾರಿಗೆ ಮುದ್ರಿಸಿ ಹೊರತರಲಾಗಿದೆ. ವಾಚಕರು ಎಂದಿನಂತೆ ಈ ಗ್ರಂಥವನ್ನು ಸ್ವಾಗತಿಸಿ ಗ್ರಂಥಪ್ರಕಟನೆಗೆ ಪ್ರೋತ್ಸಾಹಿಸಬೇಕೆಂದು ಪ್ರಾರ್ಥನೆ.

**28.12.2010** ಪ್ರಕಾಶಕರು

# 4

# ಪೀಠಿಕೆ

## ಚಮಕಾಧ್ಯಾಯ

ಈ ಭಾಗವು ಕೃಷ್ಣಯಜುರ್ವೇದದ ತೈತ್ತಿರೀಯಸಂಹಿತೆಯ ನಾಲ್ಕನೆಯ ಅಷ್ಟಕದ ಏಳನೆಯ ಪ್ರಪಾಠವಾಗಿದೆ. ಇದಕ್ಕೆ ಸಾಯಣಾಚಾರ್ಯರ ಭಾಷ್ಯವಿದೆ. ಕರ್ಮಕಾಂಡಕ್ಕೆ ಸೇರಿರುವ ಈ ಮಂತ್ರಭಾಗವು ವಸೋರ್ಧಾರಾನುವಾಕ ಗಳೆಂದು ಕರೆಯಲ್ಪಟ್ಟಿವೆ. ಯಜ್ಞದ ಸಮಾಪ್ತಿಯಲ್ಲಿ ಈ ಅನುವಾಕಗಳಿಂದ ಹೋಮಮಾಡುತ್ತಾರೆ. ಆದರೆ ರುದ್ರಾಧ್ಯಾಯದ ಜೊತೆಗೆ ಈ ಅನುವಾಕಗಳನ್ನು ಪಾರಾಯಣಮಾಡುವ ಕ್ರಮವು ಈಗಲೂ ರೂಢಿಯಲ್ಲಿದೆ. ಇದಕ್ಕೆ ಕಾರಣ ವೇನೆಂಬುದು ಸರಿಯಾಗಿ ತಿಳಿದಿಲ್ಲ. ಅರ್ಥದೃಷ್ಟಿಯಿಂದ ನೋಡುವಾಗಲೂ ಈ ಮಂತ್ರಗಳಲ್ಲಿ ಯಾವದೇ ದೇವತಾಸ್ತುತಿಗಳಿರುವದಿಲ್ಲ. ಆದರೂ ಇದರ ಪಠನವು ರುದ್ರಾಧ್ಯಾಯದೊಡನೆ ತಪ್ಪದೆ ನಡೆಯುತ್ತದೆ. ಹೇಗೆ ಇರಲಿ – ಈ ಮಂತ್ರಗಳ ಅರ್ಥವನ್ನು ವಿಚಾರಿಸಲು ಪ್ರಾರಂಭಿಸಿದಾಗ ಮೊದಲು ಕರ್ಮಪರವಾದ ಅರ್ಥಗಳು ಗೋಚರವಾಗುವದಾದರೂ ಶ್ರೀವಿಷ್ಣು ಸೂರಿಗಳೆಂಬ ಭಾಷ್ಯಕಾರರ ವಿವರಣೆಯಂತೆ ನೋಡಿದಾಗ ಅಧ್ಯಾತ್ಮ ಪರವಾಗಿಯೂ ಅಭಿಪ್ರಾಯಗಳು ಕಂಡುಬರುತ್ತವೆ. ರುದ್ರಾಧ್ಯಾಯವು ಸರ್ವವ್ಯಾಪಿಯಾದ ರುದ್ರನ ಮಹಿಮೆಯನ್ನು ತಿಳಿಸುವ ಮೂಲಕ ಬ್ರಹ್ಮ ವಸ್ತುವಿನಲ್ಲಿ ಸಮನ್ವಯವನ್ನು ಹೊಂದಿರುವಂತೆಯೇ ಚಮಕಾಧ್ಯಾಯವು 'ಯಜ್ಞೇನಕಲ್ಪತಾಂ'ಎಂಬ ಪಲ್ಲವಿಯಿಂದ ಜಗತ್ತಿನಲ್ಲಿರುವ ಎಲ್ಲಾ ವಸ್ತುಗಳೂ ಭಗವದಾರಾಧನೆಗೆ ಒದಗಲಿ ! ಎಂಬ ಸಮನ್ವಯವನ್ನುಹೊಂದಿರುವದು ತಿಳಿದು ಬರುತ್ತದೆ. ಹೀಗೆ ರುದ್ರ–ಚಮಕಗಳಲ್ಲಿ ವೇದಾಂತಸಿದ್ಧಾಂತಸಾಧನಗಳ ರಹಸ್ಯಗಳು ಅಡಗಿರುವದು ಗೋಚರವಾಗುವದು. ಆದ್ದರಿಂದಲೇ ಶಿಷ್ಟರು ಇವುಗಳ ಪಠನವನ್ನು ಭಗವದರ್ಥವಾದ ಕರ್ಮಗಳ ಸಂದರ್ಭದಲ್ಲಿ ಒಟ್ಟಿಗೆ ಏರ್ಪಡಿಸುತ್ತಾರೆಂದು ಹೇಳಬಹುದಾಗಿದೆ.

ಚಮಕಾಧ್ಯಾಯದ ಹನ್ನೊಂದು ಅನುವಾಕಗಳಲ್ಲಿಯೂ ಮುಖ್ಯವಾಗಿ ಮೇ–ನನಗೆ ಎಂಬ ಶಬ್ದವು ಮತ್ತೆಮತ್ತೆ ಪುನರುಕ್ತಿಯಾಗಿರುವದು ಕಂಡು

ಬರುತ್ತದೆ. ಮನುಷ್ಯನ ಬಯಕೆಗಳ ಸಂಗ್ರಹವೆಲ್ಲ ಇಲ್ಲಿದೆ- ಎಂದರೂ ತಪ್ಪಾಗುವದಿಲ್ಲ. ಈ ಬಯಸಲ್ಪಡುವ ಪದಾರ್ಥಗಳು ಮಾನವನ ಶರೀರವನ್ನು ಅವಧಿಯಾಗಿಟ್ಟುಕೊಂಡು ಒಳಗೆ ಆಧ್ಯಾತ್ಮವಾಗಿ ಪ್ರಾಣ, ಇಂದ್ರಿಯಗಳು, ಮನಸ್ಸು , ಬುದ್ಧಿ- ಮುಂತಾದವುಗಳ ಗುಂಪಾಗಿಯೂ ಭೌತಿಕವಾಗಿ ಭೂಮಿ, ಜಲ, ಲೋಹಗಳು, ವನಸ್ಪತಿಗಳು- ಮುಂತಾದವುಗಳ ಗುಂಪಾಗಿಯೂ, ಆಮುಷ್ಮಿಕಫಲಗಳಾದ ಹಿರಣ್ಯಗರ್ಭಾದಿಲೋಕಗಳೇ ಮುಂತಾದವುಗಳಲ್ಲಿರುವ ಭೋಗ್ಯಪದಾರ್ಥಗಳ ಗುಂಪಾಗಿಯೂ ವಿಂಗಡವಾಗಿ ಪಠಿಸಲ್ಪಟ್ಟಿವೆ. ಈ ಎಲ್ಲಾ ಪದಾರ್ಥಗಳನ್ನೂ ಯಜ್ಞಕ್ಕಾಗಿ ಉಂಟಾಗಲೆಂದೇ ಬಯಸಲಾಗಿದೆ. ಅಂತೂ ಪುರುಷನೆಂದರೆ ಯಜ್ಞನೇ ಎಂಬ ವೇದೋಕ್ತಿಯನ್ನು ಈ ಮಂತ್ರಗಳು ನೆನಪಿಗೆ ತರುತ್ತಿವೆ. ಆದರೆ ಇಲ್ಲಿ ಬಯಸಲ್ಪಟ್ಟಿರುವ ಕಾಮಗಳು ಲೌಕಿಕದೃಷ್ಟಿಯಿಂದ ನೋಡಿದರೆ ಬಹಳ ಮಹತ್ತ್ವವುಳ್ಳವುಗಳಾಗಿವೆ. ಸಾಮಾನ್ಯಮನುಷ್ಯನಿಗಂತೂ ಇಲ್ಲಿರುವ ಕೆಲವು ಕಾಮಗಳ ಹೆಸರೂ ತಿಳಿದಿರಲಾರದು. ಕೆಲವು ಪ್ರಸಿದ್ಧವಾದ ಅನ್ನ, ನಿದ್ರೆ, ಆಯಸ್ಸು, ಆರೋಗ್ಯ- ಮುಂತಾದವುಗಳು ಗೊತ್ತಿರಬಹುದಾದರೂ ಅಲೌಕಿಕವಾದ ಹಾಗೂ ಅಪ್ರಾಕೃತವಾದ ಕೆಲವು ಕಾಮಗಳು ಖಂಡಿತವಾಗಿಯೂ ಅಪರಿಚಿತವೇ ಆಗಿರುವವು. ಇಂಥ ವಿಷಯಗಳನ್ನು ವಾಚಕರು ಗ್ರಂಥಶರೀರದಲ್ಲಿ ಕಾಣಬಹುದು. ಹೀಗೆ ಉತ್ಕೃಷ್ಟವಾದ ಕಾಮಗಳನ್ನೇ ಪ್ರಸ್ತಾಪಿಸಿ ಅವುಗಳ ಬಯಕೆಯು ಯಜ್ಞಕ್ಕಾಗಿಯೇ ಆಗಿದೆ –ಎಂಬ ಸಮನ್ವಯವು ಇಲ್ಲಿ ರಮಣೀಯವಾಗಿ ಪ್ರತಿಪಾದಿತವಾಗಿದೆ.

ಇಲ್ಲಿ ಒಂದು ಪ್ರಶ್ನೆ. ಕಾಮಗಳು ಯಾವಾಗಲೂ ಮಾನವನಿಗೆ ಹಿತಕಾರಿಗಳಲ್ಲವಾದ್ದರಿಂದ ವೇದವು ಅವುಗಳನ್ನೇಕೆ ಪಟ್ಟಿಮಾಡಿ ಕರ್ತೃವು ಬಯಸುವಂತೆ ಬೋಧಿಸುತ್ತಿವೆ ? ಇದೊಂದು ಉಪಕಾರವೆ ? ಎನಿಸಬಹುದು. ಆದರೆ ವೇದದ ಅಭಿಪ್ರಾಯವು ಹೀಗಿಲ್ಲ. ಕಾಮಗಳು ಹಿತಕರವಲ್ಲವಾದರೂ ಅವುಗಳು ಅಜ್ಞರಾದ ಜನರಿಗೆ ಭಗವಂತನಿಗಿಂತ ಬೇಗನೆ ಎಟುಕುವಂಥವಾಗಿದ್ದು ಅವುಗಳ ಬಗ್ಗೆ ಶ್ರದ್ಧೆಯಿಂದ ಪ್ರವರ್ತಿಸುವದು ಪ್ರಸಿದ್ಧವಾಗಿದೆಯಷ್ಟೆ! ಈ ಸಂದರ್ಭಗಳಲ್ಲಿ ಕಾಮಗಳ ಮೇಲಿನ ಪ್ರೀತಿಯಿಂದಲೇ ಪ್ರಾರಂಭಕ್ಕೆ ಮನುಷ್ಯನು ಯಜ್ಞಾದಿಸತ್ಕರ್ಮಗಳಲ್ಲಿ ಪ್ರವರ್ತಿಸಿದರೂ- ಅವುಗಳನ್ನು ಭಗವದರ್ಪಣವಾಗಿ ಮಾಡಿದಾಗ ಅವೇ

ಕಾಮಪ್ರೇರಿತಕರ್ಮಗಳು ಅಖಿಲಕಾಮಪ್ರದನಾದ ಭಗವಂತನಲ್ಲಿ ಪ್ರೇಮವನ್ನು ಬೆಳೆಸಲೂ ಸಹಾಯಕವಾಗುವವು. ಕಹಿಯಾದ ಔಷಧಿಯನ್ನು ಸಿಹಿಯಾದ ಹೊದಿಕೆಯಲ್ಲಿ ಅಡಗಿಸಿ ರೋಗಿಗೆ ನುಂಗಿಸುವಂತೆ ಕಾಮಗಳ ನೆಪದಿಂದ ಭಗವಂತನೆಡೆಗೆ ಬಳಿಸಾರಲು ಸಾಮಾನ್ಯನಿಗೂ ಸಾಧ್ಯವಾಗುವದು. ಮತ್ತು ಕಾಮಾದಿಗಳು ಭಗವಂತನ ಹೊರತಾದ ಅನಾತ್ಮವಿಷಯಗಳಲ್ಲಿ ಮಾಡಲ್ಪಟ್ಟಾಗಲೇ ಮಾನವನ ಅಧಃಪತನಕ್ಕೆ ಕಾರಣಗಳಾಗುವವೇ ಹೊರತು ಭಗವಂತನ ವಿಷಯದಲ್ಲಿಯೇ ಮಾಡಿದಾಗ ಅವು ಮುಕ್ತಿಗೇ ಸಾಧನವಾಗುವವು. ಆದ್ದರಿಂದ ಭಗವತ್‌ಪ್ರಾಪ್ತಿಗೆ ಒಂದು ರೀತಿಯಿಂದ ಕಾಮಗಳೂ ದ್ವಾರವಾಗುವವು. ಈ ನ್ಯಾಯವನ್ನನುಸರಿಸಿಯೇ ಇಲ್ಲಿ ಕಾಮಗಳನ್ನು ಪ್ರಾಸ್ತಾಪಿಸಿ, 'ಯಜ್ಞೇನ ಕಲ್ಪತಾಮ್' ಎಂದು ಉಪಸಂಹಾರ ಮಾಡಿದೆ.

ಈಗ ಕಾಮಗಳ ವಿಷಯಕ್ಕೆ ವೇದವನ್ನೇ ಓದಿ ತಿಳಿದುಕೊಳ್ಳಬೇಕೆ ? ಎಂದು ವಿಚಾರಿಸೋಣ. ಕಾಮಗಳೇನೊ ಮನುಷ್ಯನ ಅಂತಃಕರಣ ವೃತ್ತಿಗಳಾಗಿದ್ದು ಯಾರೂ ಹೇಳಿಕೊಡದೆ ಸ್ವಾಭಾವಿಕವಾಗಿಯೇ ಅವನಲ್ಲಿದ್ದು ಕೊಂಡಿರುತ್ತವೆ. ಇದು ನಿಜ. ಇವುಗಳನ್ನು ದೋಷಗಳೆಂದು ಅಧ್ಯಾತ್ಮಶಾಸ್ತ್ರವೂ ತಿಳಿಸುತ್ತಿದೆ. ಆದರೆ ವೇದದಲ್ಲಿ ಹೆಸರಿಸಿರುವ ಕಾಮಗಳು ಸತ್ಕಾಮಗಳೆಂದು ಪರಿಗಣಿಸಲ್ಪಟ್ಟಿವೆ. ಮತ್ತು ಅವುಗಳನ್ನು ಪುರುಷಾರ್ಥಗಳ ಪಟ್ಟಿಯಲ್ಲಿಯೂ ಅಳವಡಿಸಿರುತ್ತಾರೆ. ಭಗವಂತನು ಗೀತೆಯಲ್ಲಿ 'ಧರ್ಮಕ್ಕೆ ವಿರೋಧವಿಲ್ಲದ ಕಾಮನು ನಾನೇ' ಎಂದೂ ತಿಳಿಸಿದ್ದಾನೆ. ಹೀಗಿರುವಲ್ಲಿ ಮನುಷ್ಯನು ಒಮ್ಮೆಗೇ ನಿಷ್ಕಾಮನಾಗುವದು ಕಷ್ಟಸಾಧ್ಯವಾಗಿರುವದರಿಂದ ಪ್ರಾರಂಭಕ್ಕೆ ಅತಿಯಾದ ಹಾಗೂ ಶಾಸ್ತ್ರ ವಿರುದ್ಧವಾದ ದುಷ್ಕಾಮಗಳನ್ನು ಬಿಟ್ಟು ಸತ್ಕಾಮಗಳನ್ನು ಬಯಸುವದರಲ್ಲಿ ದೋಷವೇನೂ ಇರುವದಿಲ್ಲ. ಈ ಚಮಕಾಧ್ಯಾಯದಲ್ಲಿ ಸೂಚಿಸಿರುವ ಕಾಮಗಳು ಮನುಷ್ಯನಿಗೆ ವ್ಯವಹಾರದೃಷ್ಟಿಯಿಂದ ಅತ್ಯವಶ್ಯ ವಾದವುಗಳಾಗಿದ್ದು ಅವುಗಳನ್ನು ಭಗವದನುಗ್ರಹದಿಂದ ಪಡೆದುಕೊಂಡಾಗ ಮನಶ್ಶಾಂತಿಯೂ ದೊರಕಿ ಮುಂದೆ ಆಪ್ತಕಾಮನೂ ಪರಿಪೂರ್ಣಕಾಮನೂ ಆದ ಭಗವಂತನನ್ನು ಪಡೆದು ಕೃತಾರ್ಥನಾಗಬೇಕೆಂಬ ಮೆಟ್ಟಿಲನ್ನೇರಲು ಸಹಾಯಕವಾಗುವವು. ಈ ಅಭಿಪ್ರಾಯದಂತೆ ಚಮಕಾಧ್ಯಾಯವು ಸಪ್ರಯೋಜನವಾಗಿದೆ ಎಂದು ಹೇಳಬಹುದು.

ಈಗ ವೇದಾಧಿಕಾರಿಗಳಲ್ಲದವರಿಗೂ, ಅಧಿಕಾರವಿದ್ದರೂ ಅಧ್ಯಯನಾದಿಗಳ ಮೂಲಕ ವೇದವನ್ನು ಪಠಿಸುವ ಅವಕಾಶವು ದೊರಕದೆ ಇರುವವರಿಗೂ ಈ ಚಮಕಭಾಷ್ಯಪಠನೆಯಿಂದ ಪ್ರಯೋಜನವುಂಟೆ? ಎಂದು ವಿಚಾರಿಸೋಣ. ನಿಜವಾಗಿ ನೋಡಿದರೆ ವೇದಗಳು ಕೇವಲ 'ಪ್ರಮಿತಿಜನಕ' (ಜ್ಞಾನವನ್ನುಂಟುಮಾಡುವವು) ಗಳಾದ್ದರಿಂದ ತಿಳಿವಳಿಕೆಯನ್ನು ಹಿಗ್ಗಿಸಿಕೊಳ್ಳುವ ಇಚ್ಛೆಯುಳ್ಳವರೆಲ್ಲರೂ ವೇದಭಾಗಗಳ ಅರ್ಥಾನುಸಂಧಾನವನ್ನು ಧಾರಾಳವಾಗಿ ಮಾಡಬಹುದು. ಪಾಶ್ಚಾತ್ತ್ಯರುಗಳು ಕೂಡ ವೇದಭಾಷ್ಯಗಳನ್ನೋದಿ ತಮ್ಮ ತಿಳಿವಳಿಕೆಯನ್ನು ಬೆಳೆಯಿಸಿಕೊಂಡು ಸಂಶೋಧನಾದಿಗಳಿಂದ ಅಪಾರವಾದ ವಿದ್ವತ್ತನ್ನು ಸಂಪಾದಿಸಿ ಜೀವನದಲ್ಲಿ ಆನಂದವನ್ನೂ ತೃಪ್ತಿಯನ್ನೂ ಹೊಂದಿರುವಾಗ ಭಾರತೀಯರಾದ ನಾವೇಕೆ ಈ ವೈದಿಕವಾದ ಜ್ಞಾನದಿಂದ ವಂಚಿತರಾಗಬೇಕು? ವೇದಾಧ್ಯಯನಕ್ಕೆ ಒಂದುವೇಳೆ ಅಧಿಕಾರಾಪೇಕ್ಷೆಯು ಇರಬಹುದಾರೂ ಅರ್ಥಜ್ಞಾನಕ್ಕೂ ತತ್ತ್ವಾನುಸಂಧಾನಕ್ಕೂ ಯಾವ ಸಂಪ್ರದಾಯಗಳೂ ಅಡ್ಡಬರಲಾರವು. ಸಂಗೀತಕಚೇರಿಯನ್ನೇ ಮಾಡಿ ಜನರನ್ನು ಮೆಚ್ಚಿಸಲು ಅಧಿಕಾರವೂ ವಿದ್ವತ್ತೂ ಬೇಕೆನಿಸಿದರೂ ಸಂಗೀತವನ್ನು ಕೇಳಿ ರಸಾಸ್ವಾದನೆಯನ್ನು ಮಾಡಲು ಹೆಚ್ಚಿನ ಶಾಸ್ತ್ರಜ್ಞಾನವು ಬೇಕಿರುವುದಿಲ್ಲ. ಹಾಗೆಯೇ ಇಲ್ಲಿಯೂ ಜಿಜ್ಞಾಸೆಯೊಂದಿದ್ದರೆ ವೇದಗಳ ಚಿಂತನೆಗೂ ಮನನಕ್ಕೂ ಅಧಿಕಾರವು ದೊರತಂತೆಯೇ ಸರಿ. ಈ ದೃಷ್ಟಿಯಲ್ಲಿ ವಿದ್ಯಾಪಕ್ಷಪಾತಿಗಳೆಲ್ಲರೂ ಜ್ಞಾನಾಭಿವೃದ್ಧಿಗಾಗಿ ವೇದಗಳ ಅಂತರಂಗಪರಿಚಯವನ್ನು ಮಾಡಿಕೊಳ್ಳಲೇ ಬೇಕು. ಚಮಕಾಧ್ಯಾಯದ ಈ ಅರ್ಥವಿವರಣೆಯು ಕೇವಲ ಕುತೂಹಲಮತಿಗಳಿಗಾದರೂ ಕಿಂಚಿತ್‌ಪ್ರಯೋಜನವನ್ನುಂಟುಮಾಡಬಹುದೆಂತ ಆಶಿಸಿದೆ.

ಇಂಥ ಗ್ರಂಥರಚನಾಸಾಮರ್ಥ್ಯವನ್ನು ದಯಪಾಲಿಸಿರುವ ನನ್ನ ಪೂಜ್ಯ ಸದ್ಗುರುಗಳಾದ ಬ್ರಹ್ಮೀಭೂತ ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀ ಮಹಾಸ್ವಾಮಿಗಳವರ ಅಡಿದಾವರೆಗಳಲ್ಲಿ ನನ್ನ ಪ್ರಣಾಮಗಳನ್ನು ಅರ್ಪಿಸಿ ಈ ಪೀಠಿಕೆಯನ್ನು ಪೂರ್ಣಗೊಳಿಸುತ್ತೇನೆ.

ಲೇಖಕ

# ವಿಷಯಾನುಕ್ರಮಣಿಕೆ


| | | ಪುಟಸಂಖ್ಯೆ |
|---|---|---|
| 1. | ಪೀಠಿಕೆ | 1 |
| 2. | ವಾಜಶ್ಚ ಮೇ ಪ್ರಸವಶ್ಚ ಮೇ | 4 |
| 3. | ಪರೂಗ್ಂಷಿ ಚ ಮೇ ಶರೀರಾಣಿ ಚ ಮೇ | 6 |
| 4. | ಸತ್ಯಂ ಚ ಮೇ ಶ್ರದ್ಧಾ ಚ ಮೇ | 10 |
| 5. | ಮತಿಶ್ಚ ಮೇ ಸುಮತಿಶ್ಚ ಮೇ | 14 |
| 6. | ಭದ್ರಂ ಚ ಮೇ ಶ್ರೇಯಶ್ಚ ಮೇ | 20 |
| 7. | ಋತಂ ಚ ಮೇಽಮೃತಂ ಚ ಮೇ | 25 |
| 8. | ಊರ್ಕ್ ಚ ಮೇ ಸೂನೃತಾ ಚ ಮೇ | 30 |
| 9. | ಅನ್ನಂ ಚ ಮೇ ಕ್ಷುಚ್ಚಮೇ | 35 |
| 10. | ಅಶ್ಮಾ ಚ ಮೇ ಮೃತ್ತಿಕಾ ಚ ಮೇ | 38 |
| 11. | ಕರ್ಮ ಚ ಮೇ ಶಕ್ತಿಶ್ಚಮೇ | 41 |
| 12. | ಅಗ್ನಿಶ್ಚ ಮ ಇಂದ್ರಶ್ಚ ಮೇ | 46 |
| 13. | ಅಗ್ಂಶುಶ್ಚ ಮೇ ರಶ್ಮಿಶ್ಚ ಮೇ | 51 |
| 14. | ಅತಿಗ್ರಾಹ್ಯಾಶ್ಚ ಮ ಐಂದ್ರಾಗ್ನಶ್ಚ ಮೇ | 56 |
| 15. | ಇಧ್ಮಶ್ಚ ಮೇ ಬರ್ಹಿಶ್ಚ ಮೇ | 60 |
| 16. | ಅಗ್ನಿಶ್ಚ ಮೇ ಘರ್ಮಶ್ಚ ಮೇ | 65 |
| 17. | ಗರ್ಭಾಶ್ಚ ಮೇ ವತ್ಸಾಃ | 70 |
| 18. | ಏಕಾ ಚ ಮೇ ತಿಸ್ರಃ | 75 |
| 19. | ಮೇ ಚತಸ್ರಶ್ಚಮೇ | 78 |
| 20. | ಇಡಾ ದೇವಹೂಃ | 81 |

# ಚಮಕಾಧ್ಯಾಯ

## (ಮೂಲಪಾಠ)

||ಶ್ರೀ ಗುರುಭ್ಯೋ ನಮಃ ಹರಿಃ ಓಂ||

ಹರಿಃ ಓಂ || ಅಗ್ನಾವಿಷ್ಣೂ ಸಜೋಷಸೇಮಾ ವರ್ಧಂತು ವಾಂ ಗಿರಃ |ದ್ಯುಮ್ನೈರ್ವಾಜೇಭಿರಾಗತಮ್ ||

ವಾಜಶ್ಚ ಮೇ ಪ್ರಸವಶ್ಚ ಮೇ ಪ್ರಯತಿಶ್ಚ ಮೇ ಪ್ರಸಿತಿಶ್ಚ ಮೇ ಧೀತಿಶ್ಚ ಮೇ ಕ್ರತುಶ್ಚ ಮೇ ಸ್ವರಶ್ಚ ಮೇ ಶ್ಲೋಕಶ್ಚ ಮೇ ಶ್ರಾವಶ್ಚ ಮೇ ಶ್ರುತಿಶ್ಚ ಮೇ ಜ್ಯೋತಿಶ್ಚ ಮೇ ಸುವಶ್ಚ ಮೇ ಪ್ರಾಣಶ್ಚ ಮೇಽಪಾನಶ್ಚ ಮೇ ವ್ಯಾನಶ್ಚ ಮೇಽಸುಶ್ಚ ಮೇ ಚಿತ್ತಂ ಚ ಮ ಆಧೀತಂ ಚ ಮೇ ವಾಕ್ಚ ಮೇ ಮನಶ್ಚ ಮೇ ಚಕ್ಷುಶ್ಚ ಮೇ ಶ್ರೋತಂ ಚ ಮೇ ದಕ್ಷಶ್ಚ ಮೇ ಬಲಂ ಚ ಮ ಓಜಶ್ಚ ಮೇ ಸಹಶ್ಚ ಮ ಆಯುಶ್ಚ ಮೇ ಜರಾ ಚ ಮ ಆತ್ಮಾ ಚ ಮೇ ತನೂಶ್ಚ ಮೇ ಶರ್ಮ ಚ ಮೇ ವರ್ಮ ಚ ಮೇಽಙ್ಗಾನಿ ಚ ಮೇಽಸ್ಥಾನಿ ಚ ಮೇ ಪರೂಗ್ಂಷಿ ಚ ಮೇ ಶರೀರಾಣಿ ಚ ಮೇ ||1||

ಜ್ಯೈಷ್ಠ್ಯಂ ಚ ಮ ಆಧಿಪತ್ಯಂ ಚ ಮೇ ಮನ್ಯುಶ್ಚ ಮೇ ಭಾಮಶ್ಚ ಮೇಽಮಶ್ಚ ಮೇಽಂಭಶ್ಚ ಮೇ ಜೇಮಾ ಚ ಮೇ ಮಹಿಮಾ ಚ ಮೇ ವರಿಮಾ ಚ ಮೇ ಪ್ರಥಿಮಾ ಚ ಮೇ ವರ್ಷ್ಮಾ ಚ ಮೇ ದ್ರಾಘುಯಾ ಚ ಮೇ ವೃದ್ಧಂ ಚ ಮೇ ವೃದ್ಧಿಶ್ಚ ಮೇ ಸತ್ಯಂ ಚ ಮೇ ಶ್ರದ್ಧಾ ಚ ಮೇ ಜಗಚ್ಚ ಮೇ ಧನಂ ಚ ಮೇ ವಶಶ್ಚ ಮೇ ತ್ವಿಷಿಶ್ಚ ಮೇ ಕ್ರೀಡಾ ಚ ಮೇ ಮೋದಶ್ಚ ಮೇ ಜಾತಂ ಚ ಮೇ ಜನಿಷ್ಯಮಾಣಂ ಚ ಮೇ ಸೂಕ್ತಂ ಚ ಮೇ ಸುಕೃತಂ ಚ ಮೇ ವಿತ್ತಂ ಚ ಮೇ ವೇದ್ಯಂ ಚ ಮೇ ಭೂತಂ ಚ ಮೇ ಭವಿಷ್ಯಚ್ಚ ಮೇ ಸುಗಂ ಚ ಮೇ ಸುಪಥಂ ಚ ಮ ಋದ್ಧಂ ಚ ಮ ಋದ್ಧಿಶ್ಚ ಮೇ ಕ್ಲ್ಪ್ತಂ ಚ ಮೇ ಕ್ಲ್ಪ್ತಿಶ್ಚ ಮೇ ಮತಿಶ್ಚ ಮೇ ಸುಮತಿಶ್ಚ ಮೇ ||2||

ಶಂ ಚ ಮೇ ಮಯಶ್ಚ ಮೇ ಪ್ರಿಯಂ ಚ ಮೇಽನುಕಾಮಶ್ಚ ಮೇ ಕಾಮಶ್ಚ ಮೇ ಸೌಮನಸಶ್ಚ ಮೇ ಭದ್ರಂ ಚ ಮೇ ಶ್ರೇಯಶ್ಚ ಮೇ ವಸ್ಯಶ್ಚ ಮೇ ಯಶಶ್ಚ

ಮೇ ಭಗಶ್ಚ ಮೇ ದ್ರವಿಣಂ ಚ ಮೇ ಯಂತಾ ಚ ಮೇ ಧರ್ತಾ ಚ ಮೇ ಕ್ಷೇಮಶ್ಚ ಮೇ ಧೃತಿಶ್ಚ ಮೇ ವಿಶ್ವಂ ಚ ಮೇ ಮಹಶ್ಚ ಮೇ ಸಂವಿಚ್ಚ ಮೇ ಜ್ಞಾತ್ರಂ ಚ ಮೇ ಸೂಶ್ಚ ಮೇ ಪ್ರಸೂಶ್ಚ ಮೇ ಸೀರಂ ಚ ಮೇ ಲಯಶ್ಚ ಮ ಋತಂ ಚ ಮೇಽಮೃತಂ ಚ ಮೇಽಯಕ್ಷ್ಮಂ ಚ ಮೇಽನಾಮಯಚ್ಚ ಮೇ ಜೀವಾತುಶ್ಚ ಮೇ ದೀರ್ಘಾಯುತ್ವಂ ಚ ಮೇಽನಮಿತ್ರಂ ಚ ಮೇಽಭಯಂ ಚ ಮೇ ಸುಗಂ ಚ ಮೇ ಶಯನಂ ಚ ಮೇ ಸೂಷಾ ಚ ಮೇ ಸುದಿನಂ ಚ ಮೇ ॥3॥

ಊರ್ಕ್ ಚ ಮೇ ಸೂನೃತಾ ಚ ಮೇ ಪಯಶ್ಚ ಮೇ ರಸಶ್ಚ ಮೇ ಘೃತಂ ಚ ಮೇ ಮಧು ಚ ಮೇ ಸಗ್ಧಿಶ್ಚ ಮೇ ಸಪೀತಿಶ್ಚ ಮೇ ಕೃಷಿಶ್ಚ ಮೇ ವೃಷ್ಟಿಶ್ಚ ಮೇ ಜೈತ್ರಂ ಚ ಮ ಔದ್ಭಿದ್ಯಂ ಚ ಮೇ ರಯಿಶ್ಚ ಮೇ ರಾಯಶ್ಚ ಮೇ ಪುಷ್ಟಂ ಚ ಮೇ ಪುಷ್ಟಿಶ್ಚ ಮೇ ವಿಭು ಚ ಮೇ ಪ್ರಭು ಚ ಮೇ ಬಹು ಚ ಮೇ ಭೂಯಶ್ಚ ಮೇ ಪೂರ್ಣಂ ಚ ಮೇ ಪೂರ್ಣತರಂ ಚ ಮೇಽಕ್ಷಿತಿಶ್ಚ ಮೇ ಕೂಯವಾಶ್ಚ ಮೇಽನ್ನಂ ಚ ಮೇಽಕ್ಷುಚ್ಚ ಮೇ ವ್ರೀಹಯಶ್ಚ ಮೇ ಯವಾಶ್ಚ ಮೇ ಮಾಷಾಶ್ಚ ಮೇ ತಿಲಾಶ್ಚ ಮೇ ಮುದ್ಗಾಶ್ಚ ಮೇ ಖಲ್ವಾಶ್ಚ ಮೇ ಗೋಧೂಮಾಶ್ಚ ಮೇ ಮಸುರಾಶ್ಚಮೇ ಪ್ರಿಯಂಗವಶ್ಚ ಮೇಽಣವಶ್ಚ ಮೇ ಶ್ಯಾಮಾಕಾಶ್ಚ ಮೇ ನೀವಾರಾಶ್ಚ ಮೇ ॥4॥

ಅಶ್ಮಾ ಚ ಮೇ ಮೃತ್ತಿಕಾ ಚ ಮೇ ಗಿರಿಯಶ್ಚ ಮೇ ಪರ್ವತಾಶ್ಚ ಮೇ ಸಿಕತಾಶ್ಚ ಮೇ ವನಸ್ಪತಯಶ್ಚ ಮೇ ಹಿರಣ್ಯಂ ಚ ಮೇಽಯಶ್ಚ ಮೇ ಸೀಸಂ ಚ ಮೇ ತ್ರಪುಶ್ಚ ಮೇ ಶ್ಯಾಮಂ ಚ ಮೇ ಲೋಹಂ ಚ ಮೇಽಗ್ನಿಶ್ಚ ಮ ಆಪಶ್ಚ ಮೇ ವೀರುಧಶ್ಚಮ ಓಷಧಯಶ್ಚ ಮೇ ಕೃಷ್ಟಪಚ್ಯಂ ಚ ಮೇಽಕೃಷ್ಟಪಚ್ಯಂ ಚ ಮೇ ಗ್ರಾಮ್ಯಾಶ್ಚ ಮೇ ಪಶವ ಆರಣ್ಯಾಶ್ಚ ಯಜ್ಞೇನ ಕಲ್ಪಂತಾಂ ವಿತ್ತಂ ಚ ಮೇ ವಿತ್ತಿಶ್ಚ ಮೇ ಭೂತಂ ಚ ಮೇ ಭೂತಿಶ್ಚ ಮೇ ವಸು ಚ ಮೇ ವಸತಿಶ್ಚ ಮೇ ಕರ್ಮ ಚ ಮೇ ಶಕ್ತಿಶ್ಚ ಮೇಽರ್ಥಶ್ಚ ಮ ಏಮಶ್ಚ ಮ ಇತಿಶ್ಚ ಮೇ ಗತಿಶ್ಚ ಮೇ ॥5॥

ಅಗ್ನಿಶ್ಚ ಮ ಇಂದ್ರಶ್ಚ ಮೇ ಸೋಮಶ್ಚ ಮ ಇಂದ್ರಶ್ಚ ಮೇ ಸವಿತಾ ಚ ಮ ಇಂದ್ರಶ್ಚ ಮೇ ಸರಸ್ವತೀ ಚ ಮ ಇಂದ್ರಶ್ಚ ಮೇ ಪೂಷಾ ಚ ಮ ಇಂದ್ರಶ್ಚ

ಮೇ ಬೃಹಸ್ಪತಿಶ್ಚ ಮ ಇಂದ್ರಶ್ಚ ಮೇ ಮಿತ್ರಶ್ಚ ಮ ಇಂದ್ರಶ್ಚ ಮೇ ವರುಣಶ್ಚ ಮ ಇಂದ್ರಶ್ಚ ಮೇ ತ್ವಷ್ಟಾ ಚ ಮ ಇಂದ್ರಶ್ಚ ಮೇ ಧಾತಾ ಚ ಮ ಇಂದ್ರಶ್ಚ ಮೇ ವಿಷ್ಣುಶ್ಚ ಮ ಇಂದ್ರಶ್ಚ ಮೇಽಶ್ವಿನೌ ಚ ಮ ಇಂದ್ರಶ್ಚ ಮೇ ಮರುತಶ್ಚಮ ಇಂದ್ರಶ್ಚ ಮೇ ವಿಶ್ವೇ ಚ ಮೇ ದೇವಾ ಇಂದ್ರಶ್ಚ ಮೇ ಪೃಥಿವೀ ಚ ಮ ಇಂದ್ರಶ್ಚ ಮೇಽಂತರಿಕ್ಷಂ ಚ ಮ ಇಂದ್ರಶ್ಚ ಮೇ ದ್ಯೌಶ್ಚಮ ಇಂದ್ರಶ್ಚ ಮೇ ದಿಶಶ್ಚ ಮ ಇಂದ್ರಶ್ಚ ಮೇ ಮೂರ್ಧಾ ಚ ಮ ಇಂದ್ರಶ್ಚ ಮೇ ಪ್ರಜಾಪತಿಶ್ಚ ಮ ಇಂದ್ರಶ್ಚ ಮೇ ॥6॥

ಅಗ್ಂಶುಶ್ಚ ಮೇ ರಶ್ಮಿಶ್ಚ ಮೇಽದಾಭ್ಯಶ್ಚ ಮೇಽಧಿಪತಿಶ್ಚ ಮ ಉಪಾಗ್ಂಶುಶ್ಚ ಮೇಽನ್ತರ್ಯಾಮಶ್ಚ ಮ ಐಂದ್ರವಾಯವಶ್ಚ ಮೇ ಮೈತ್ರಾವರುಣಶ್ಚಮ ಆಶ್ವಿನಶ್ಚ ಮೇ ಪ್ರತಿಪ್ರಸ್ಥಾನಶ್ಚ ಮೇ ಶುಕ್ರಶ್ಚ ಮೇ ಮಂಥೀ ಚ ಮ ಆಗ್ರಯಣಶ್ಚ ಮೇ ವೈಶ್ವದೇವಶ್ಚ ಮೇ ಧ್ರುವಶ್ಚ ಮೇ ವೈಶ್ವಾನರಶ್ಚ ಮ ಋತುಗ್ರಹಾಶ್ಚ ಮೇಽತಿಗ್ರಾಹ್ಯಾಶ್ಚ ಮ ಐಂದ್ರಾಗ್ನಶ್ಚ ಮೇ ವೈಶ್ವದೇವಶ್ಚ ಮೇ ಮರುತ್ವತೀಯಾಶ್ಚ ಮೇ ಮಾಹೇಂದ್ರಶ್ಚಮ ಆದಿತ್ಯಶ್ಚ ಮೇ ಸಾವಿತ್ರಶ್ಚ ಮೇ ಸಾರಸ್ವತಶ್ಚ ಮೇ ಪೌಷ್ಣಶ್ಚ ಮೇ ಪಾತ್ನೀವತಶ್ಚ ಮೇ ಹಾರಿಯೋಜನಶ್ಚ ಮೇ ॥7॥

ಇಧ್ಮಶ್ಚ ಮೇ ಬರ್ಹಿಶ್ಚ ಮೇ ವೇದಿಶ್ಚ ಮೇ ಧಿಷ್ಣಿಯಾಶ್ಚ ಮೇ ಸ್ರುಚಶ್ಚ ಮೇ ಚಮಸಾಶ್ಚ ಮೇ ಗ್ರಾವಾಣಶ್ಚ ಮೇ ಸ್ವರವಶ್ಚ ಮ ಉಪರವಾಶ್ಚ ಮೇಽಧಿಷವಣೇ ಚ ಮೇ ದ್ರೋಣಕಲಶಶ್ಚ ಮೇ ವಾಯವ್ಯಾನಿ ಚ ಮೇ ಪೂತಭೃಚ್ಚ ಮ ಆಧವನೀಯಶ್ಚ ಮ ಆಗ್ನೀಧ್ರಂ ಚ ಮೇ ಹವಿರ್ಧಾನಂ ಚ ಮೇ ಗೃಹಾಶ್ಚ ಮೇ ಸದಶ್ಚ ಮೇ ಪುರೋಡಾಶಾಶ್ಚ ಮೇ ಪಚತಾಶ್ಚ ಮೇಽವಭೃಥಶ್ಚ ಮೇ ಸ್ವಗಾಕಾರಶ್ಚಮೇ ॥8॥

ಅಗ್ನಿಶ್ಚ ಮೇ ಘರ್ಮಶ್ಚ ಮೇಽರ್ಕಶ್ಚ ಮೇ ಸೂರ್ಯಶ್ಚ ಮೇ ಪ್ರಾಣಶ್ಚ ಮೇಽಶ್ವಮೇಧಶ್ಚ ಮೇ ಪೃಥಿವೀ ಚ ಮೇಽದಿತಿಶ್ಚ ಮೇದಿತಿಶ್ಚ ಮೇ ದ್ಯೌಶ್ಚ ಮೇ ಶಕ್ವರೀರಂಗುಲಯೋ ದಿಶಶ್ಚ ಮೇ ಯಜ್ಞೇನ ಕಲ್ಪಂತಾಮೃಕ್ ಚ ಮೇ ಸಾಮ ಚ ಮೇ ಸ್ತೋಮಶ್ಚ ಮೇ ಯಜುಶ್ಚ ಮೇ ದೀಕ್ಷಾ ಚ ಮೇ ತಪಶ್ಚ ಮ ಋತುಶ್ಚ ಮೇ ವ್ರತಂ ಚ ಮೇಽಹೋರಾತ್ರಯೋರ್ವೃಷ್ಟ್ಯಾ ಬೃಹದ್ರಥಂತರೇ ಚ ಮೇ ಯಜ್ಞೇನ ಕಲ್ಪೇತಾಮ್ ॥9॥

ಗರ್ಭಾಶ್ಚ ಮೇ ವತ್ಸಾಶ್ಚ ಮೇ ತ್ರ್ಯವಿಶ್ಚ ಮೇ ತ್ರ್ಯವೀಚ ಮೇ ದಿತ್ಯವಾಟ್ ಚ ಮೇ ದಿತ್ಯೌಹೀ ಚ ಮೇ ಪಂಚಾವಿಶ್ಚ ಮೇ ಪಂಚಾವೀ ಚ ಮೇ ತ್ರಿವತ್ಸಶ್ಚ ಮೇ ತ್ರಿವತ್ಸಾ ಚ ಮೇ ತುರ್ಯವಾಟ್ ಚ ಮೇ ತುರ್ಯೌಹೀ ಚ ಮೇ ಷಷ್ಠವಾಚ್ಚ ಮೇ ಪಷ್ಠೌಹೀ ಚ ಮ ಉಕ್ಷಾ ಚ ಮೇ ವಶಾ ಚ ಮ ಋಷಭಶ್ಚ ಮೇ ವೇಹಚ್ಚ ಮೇಽನಡ್ವಾಂ ಚ ಮೇ ಧೇನುಶ್ಚ ಮ ಆಯುರ್ಯಜ್ಞೇನ ಕಲ್ಪತಾಂ ಪ್ರಾಣೋ ಯಜ್ಞೇನ ಕಲ್ಪತಾಮಪಾನೋ ಯಜ್ಞೇನ ಕಲ್ಪತಾಂ ವ್ಯಾನೋ ಯಜ್ಞೇನ ಕಲ್ಪತಾಂ ಚಕ್ಷುರ್ಯಜ್ಞೇನ ಕಲ್ಪತಾಗ್ಂ ಶ್ರೋತ್ರಂ ಯಜ್ಞೇನ ಕಲ್ಪತಾಂ ಮನೋ ಯಜ್ಞೇನ ಕಲ್ಪತಾಂ ವಾಗ್ಯಜ್ಞೇನ ಕಲ್ಪತಾಮಾತ್ಮಾ ಯಜ್ಞೇನ ಕಲ್ಪತಾಂ ಯಜ್ಞೋ ಯಜ್ಞೇನ ಕಲ್ಪತಾಮ್ ॥10॥

ಏಕಾ ಚ ಮೇ ತ್ರಿಸ್ರಶ್ಚ ಮೇ ಪಂಚ ಚ ಮೇ ಸಪ್ತ ಚ ಮೇ ನವ ಚ ಮ ಏಕಾದಶ ಚ ಮೇ ತ್ರಯೋದಶ ಚ ಮೇ ಪಂಚದಶ ಚ ಮೇ ಸಪ್ತದಶ ಚ ಮೇ ನವದಶ ಚ ಮ ಏಕವಿಗ್ಂಶತಿಶ್ಚ ಮೇ ತ್ರಯೋವಿಗ್ಂಶತಿಶ್ಚ ಮೇ ಪಂಚವಿಗ್ಂಶತಿಶ್ಚ ಮೇ ಸಪ್ತವಿಗ್ಂಶತಿಶ್ಚ ಮೇ ನವವಿಗ್ಂಶತಿಶ್ಚ ಮ ಏಕ ತ್ರಿಗ್ಂಶಚ್ಚ ಮೇ ತ್ರಯಸ್ತ್ರಿಗ್ಂಶಚ್ಚ ಮೇ ಚತಸ್ರಶ್ಚ ಮೇಽಷ್ಟೌ ಚ ಮೇ ದ್ವಾದಶ ಚ ಮೇ ಷೋಡಶ ಚ ಮೇ ವಿಗ್ಂಶತಿಶ್ಚ ಮೇ ಚತುರ್ವಿಂಗ್ಂಶತಿಶ್ಚ ಮೇಽಷ್ಟಾವಿಂಗ್ಂಶತಿಶ್ಚ ಮೇ ದ್ವಾತ್ರಿಗ್ಂಶಚ್ಚ ಮೇ ಷಟ್ತ್ರಿಗ್ಂಶಚ್ಚ ಮೇ ಚತ್ವಾರಿಗ್ಂಶಚ್ಚ ಮೇ ಚತುಶ್ಚತ್ವಾರಿಗ್ಂ ಶಚ್ಚ ಮೇಽಷ್ಟಾಚತ್ವಾರಿಗ್ಂಶಚ್ಚ ಮೇ ವಾಜಶ್ಚ ಪ್ರಸವಶ್ಚಾಪಿಜಶ್ಚ ಕ್ರತುಶ್ಚ ಸುವಶ್ಚ ಮೂರ್ಧಾ ಚ ವ್ಯಶ್ನಿಯಶ್ಚಾನ್ತ್ಯಾಯ ನಶ್ಚಾನ್ತ್ಯಶ್ಚ ಭೌವನಶ್ಚ ಭುವನಶ್ಚಾಧಿಪತಿಶ್ಚ ॥11॥

ಇಡಾ ದೇವಹೂರ್ಮನುರ್ಯಜ್ಞನೀರ್ಬೃಹಸ್ಪತಿರುಕ್ಥಾಮದಾನಿ ಶಗ್ಂಸಿಷದ್ ವಿಶ್ವೇದೇವಾಃ ಸೂಕ್ತವಾಚಃ ಪೃಥಿವಿಮಾತರ್ಮಾ ಮಾ ಹಿಗ್ಂಸೀರ್ಮಧು ಮನಿಷ್ಯೇ ಮಧು ಜನಿಷ್ಯೇ ಮಧು ವಕ್ಷ್ಯಾಮಿ ಮಧು ವದಿಷ್ಯಾಮಿ ಮಧುಮತೀಂ ದೇವೇಭ್ಯೋ ವಾಚಮುದ್ಯಾಸಗ್ಂ ಶುಶ್ರೂಷೇಣ್ಯಾಂ ಮನುಷ್ಯೇಭ್ಯಸ್ತಂ ಮಾ ದೇವಾ ಅವನ್ತು ಶೋಭಾಯೈ ಪಿತರೋಽನು ಮದನ್ತು।

ಓಂ ಶಾಂತಿಃ ಶಾಂತಿಃ ಶಾಂತಿಃ

॥ಹರಿಃ ಓಂ॥

||ಓಮ್||

# ಚಮಕಾಧ್ಯಾಯಭಾಷ್ಯ

## 1. ಪೀಠಿಕೆ

**ವೃಷಸ್ಕಂಧಸಮಾರೂಢಂ ಉಮಾದೇಹಾರ್ಧಧಾರಿಣಮ್ ।**
**ಅಮೃತೇನಾಪ್ಲುತಂ ಹೃಷ್ಟಂ ಶಂಕರಂ ಶ್ರೀಕರಂ ಭಜೇ ॥**

ಭಗವಾನ್ ರುದ್ರನ ಕೃಪೆಯಿಂದಲೂ ವೇದಪುರುಷನ ಪ್ರಸಾದದಿಂದಲೂ ರುದ್ರಾಧ್ಯಾಯದ ವಿವರಣೆಯನ್ನು ಯಥಾಮತಿಯಾಗಿ ಬರೆದು ವಾಚಕರಿಗೆ ಹಿಂದೆ ಅರ್ಪಿಸಿರುತ್ತೇನೆ. ಈಗ ಚಮಕಾಧ್ಯಾಯದ ವಿವರಣೆಯನ್ನು ಪ್ರಾರಂಭಿಸಿರುತ್ತೇನೆ. ಅನೇಕ ಮಹನೀಯರು ರುದ್ರಾಧ್ಯಾಯ ಭಾಷ್ಯವನ್ನು ಓದಿ ತೃಪ್ತರಾಗಿ ಇದೇ ರೀತಿಯಾಗಿ ಚಮಕಾಧ್ಯಾಯಕ್ಕೂ ವ್ಯಾಖ್ಯಾನವನ್ನು ಬರೆಯಬೇಕೆಂದು ಸೂಚಿಸಿದ್ದರಿಂದ ಈ ಗ್ರಂಥವು ಹೊರಟಿದೆ. ವೈದಿಕರು ರುದ್ರಪಠನದ ಅನಂತರ ಚಮಕವನ್ನು ನಿಯತವಾಗಿ ಪಠಿಸುತ್ತಾರೆ. ಮಹಾನ್ಯಾಸದ 'ಶಿವಸಂಕಲ್ಪ'ವೆಂಬ ಭಾಗದ ಕೊನೆಯ ಪದ್ಯದಲ್ಲಿ ಹೀಗಿದೆ:–

**ನಮಕಂ ಚಮಕಂ ಚೈವ ಪುರುಷಸೂಕ್ತಂ ಚ ಯದ್ವಿದುಃ।**
**ಮಹಾದೇವಂ ಚ ತತ್ತುಲ್ಯಂ ತನ್ಮೇ ಮನಃ ಶಿವಸಂಕಲ್ಪಮಸ್ತು॥**

ರುದ್ರಾಧ್ಯಾಯ (ನಮಕ), ಚಮಕ, ಪುರುಷಸೂಕ್ತ– ಇವುಗಳನ್ನು ಮಹಾದೇವನಿಗೆ ಸರಿಸಮಾನವೆಂದು ತಿಳಿಯಬೇಕೆಂಬುದು ಈ ವಾಕ್ಯದ ಅಭಿಪ್ರಾಯ. ಆದ್ದರಿಂದ ಚಮಕಾಧ್ಯಾಯವೂ ರುದ್ರಾಧ್ಯಾಯದಷ್ಟೇ ಪ್ರಾಶಸ್ತ್ಯವನ್ನು ಪಡೆದಿದೆ. ಇದರಲ್ಲಿ ದೇವತಾಸ್ತುತಿ ಭಾಗವೇನೂ ಇಲ್ಲವಾದರೂ ಯಜ್ಞಕ್ಕಾಗಿಯೇ ಎಲ್ಲವೂ ನನಗೆ ಉಂಟಾಗಲಿ! ಎಂಬ ಸುಂದರವಾದ

ಪ್ರಾರ್ಥನೆಯಿದೆ. ಆ ಮೂಲಕ ಮಹಾದೇವನ ಸಂಬಂಧವನ್ನು ಈ ಭಾಗವು ಹೊಂದಿರುತ್ತದೆ. ಈ ಚಮಕಾಧ್ಯಾಯಕ್ಕೆ 'ಅಭಿನವಶಂಕರರ ಭಾಷ್ಯ'ವಿಲ್ಲ. ಸಾಯಣಾಚಾರ್ಯರ ಮತ್ತು ವಿಷ್ಣುಸೂರಿಗಳ ಭಾಷ್ಯಗಳು ಇವೆ. ನಾನು ರುದ್ರಾಧ್ಯಾಯಕ್ಕೆ ವಿವರಣೆಯನ್ನು ಬರೆಯುವಾಗ ಅಭಿನವಶಂಕರಭಾಷ್ಯವನ್ನು ಅನುಸರಿಸಿದ್ದೆನು. ಇಲ್ಲಿ ಸಾಯಣಭಾಷ್ಯಾನುಸಾರವಾಗಿಯೂ ವಿಷ್ಣುಸೂರಿಗಳ ಭಾಷ್ಯಾನುಗುಣವಾಗಿಯೂ ಹಾಗೂ ಸ್ವತಂತ್ರವಾಗಿಯೂ ಕೆಲವು ವಿಷಯಗಳನ್ನು ವಾಚಕರ ಮುಂದಿಡುವೆನು.

ಚಮಕ– ಎಂದರೇನು? ಎಂಬಿದನ್ನು ಮೊದಲು ವಿಚಾರಮಾಡೋಣ. ಈ ಅಧ್ಯಾಯದಲ್ಲಿ ಚ– ಮೇ– ಎಂಬೆರಡು ಪದಗಳು ಬಹಳ ಸಲ ಪುನರುಕ್ತಿಯಾಗಿರುವದರಿಂದ ಈ ಭಾಗಕ್ಕೆ 'ಚಮೇ' ಎಂಬ ಹೆಸರೇ ರೂಢಿಗೆ ಬಂದಿದೆ. ಚ–ಮತ್ತು; ಮೇ–ನನಗೆ– ಎಂಬುದು ಈ ಶಬ್ದಗಳ ಸಾಮಾನ್ಯಾರ್ಥವು. ವಾಜ– ಮುಂತಾದವು ದ್ರವ್ಯಗಳ ಹೆಸರುಗಳು. ಹತ್ತನೆಯ ಅನುವಾಕದಲ್ಲಿ ಬರುವ **ಯಜ್ಞೇನ ಕಲ್ಪತಾಂ** ಎಂಬ ವಾಕ್ಯದೊಡನೆ ಈ ಪ್ರತಿಯೊಂದನ್ನೂ ಅನ್ವಯಮಾಡಿಕೊಳ್ಳಬೇಕು. ಉದಾಹರಣೆಗೆ: "ವಾಜಃ ಮೇ ಯಜ್ಞೇನ ಕಲ್ಪತಾಂ । ಪ್ರಸವಶ್ಚ ಮೇ ಯಜ್ಞೇನ ಕಲ್ಪತಾಂ" ಇತ್ಯಾದಿಯಾಗಿ ತಿಳಿಯಬೇಕು. ಯಜ್ಞದಲ್ಲಿ ಈ ಮಂತ್ರಭಾಗವನ್ನು ವಸೋರ್ಧಾರಾ ಎಂಬ ಹೋಮಕ್ಕೆ ಉಪಯೋಗಿಸುತ್ತಾರೆ. ಇದನ್ನು ಪ್ರಚಲಿತಭಾಷೆಯಲ್ಲಿ ಪೂರ್ಣಾಹುತಿ– ಎಂದು ಕರೆಯುವರು. ವಸು–ಎಂಬವನಿಗೆ ಉಪರಿಚರವಸು– ಎಂಬುದು ಮತ್ತೊಂದು ಹೆಸರು. ಈತನ ಕಥೆಯು ಮಹಾಭಾರತದಲ್ಲಿದೆ. ಹೀಗೆ ವಸೋರ್ಧಾರಾನುವಾಕವೆಂದು ಪ್ರಸಿದ್ಧವಾಗಿರುವ ಈ ಚಮಕವು ಬಹಳಮಟ್ಟಿಗೆ ವೈದಿಕಕರ್ಮಗಳಿಗೆ ಅವಶ್ಯವಾದ ವಸ್ತುಗಳನ್ನೂ ಯಜ್ಞದಲ್ಲಿ ಉಪಯೋಗಿಸುವ ಪದಾರ್ಥಗಳನ್ನೂ ದೇವತೆಗಳ ಕೃಪೆಯನ್ನೂ ತನಗೆ ದೊರಕುವಂತೆ ಆಗಲೆಂದು ಪ್ರಾರ್ಥಿಸುವ ಭಾಗವಾಗಿದೆ. ಆದ್ದರಿಂದ ಅಧ್ಯಾತ್ಮವಿಚಾರಗಳು ಇಲ್ಲಿ ಗೌಣವಾಗಿರುವವು. ವೈದಿಕಕರ್ಮಗಳ

ರಹಸ್ಯವನ್ನು ತಿಳಿದುಕೊಳ್ಳುವದಕ್ಕೂ ವೇದಸಾಹಿತ್ಯದ ವಿಷಯದಲ್ಲಿ ಕುತೂಹಲವನ್ನು ಬೆಳೆಯಿಸಿಕೊಳ್ಳುವದಕ್ಕೂ ಈ ಮೀಮಾಂಸೆಯು ಉಪಯೋಗ ವಾಗಬಹುದೆಂತ ಭಾವಿಸಲಾಗಿದೆ. ಇನ್ನು ಮಂತ್ರಾರ್ಥವನ್ನು ವಿಚಾರ ಮಾಡೋಣ. ಮೊದಲನೆಯ ಮಂತ್ರವು ಹೀಗಿದೆಃ–

**ಹರಿಃ ಓಂ ॥ ಅಗ್ನಾವಿಷ್ಣೂ ಸಜೋಷಸೇಮಾ ವರ್ಧಂತು**
**ವಾಂ ಗಿರಃ । ದ್ಯುಮ್ನೈರ್ವಾಜೇಭಿರಾಗತಮ್ ॥**

"ಎಲೈ ಅಗ್ನಿ ಮತ್ತು ವಿಷ್ಣುದೇವತೆಗಳಿರಾ, ನೀವುಗಳು ಸಮಾನ ಪ್ರೀತಿಯುಳ್ಳವರಾಗಿರಿ, ನಿಮ್ಮನ್ನು ಕುರಿತ ಈ ಸ್ತುತಿರೂಪವಾದ ವಾಕ್ಕುಗಳು ವೃದ್ಧಿಯನ್ನು ಹೊಂದಲಿ! ನೀವಿಬ್ಬರೂ ಧನ, ಅನ್ನಗಳೊಡನೆ ಇಲ್ಲಿಗೆ ಬನ್ನಿರಿ"

ಇದು ಪ್ರಾರ್ಥನಾಮಂತ್ರವು. ಇಲ್ಲಿ ಅಗ್ನಿಯನ್ನೂ ವಿಷ್ಣುವನ್ನೂ ಸ್ತುತಿಸಿರುವದರ ಉದ್ದೇಶವೇನೆಂದರೆಃ ಅಗ್ನಿಯು ದೇವತೆಗಳಲ್ಲೆಲ್ಲ ಕಿರಿಯನು. ವಿಷ್ಣುವು ಹಿರಿಯನು. ಇವರಿಬ್ಬರನ್ನು ಪ್ರಾರ್ಥಿಸಿದಲ್ಲಿ ಉಳಿದ ಎಲ್ಲಾ ದೇವತೆಗಳನ್ನೂ ಪ್ರಾರ್ಥಿಸಿದಂತೆಯೇ–ಎಂದರ್ಥ. 'ಅಗ್ನಿಸ್ಸರ್ವಾ ದೇವತಾಃ' (ಅಗ್ನಿಯೇ ಎಲ್ಲಾ ದೇವತೆಗಳೂ ಆಗಿದ್ದಾನೆ) ಎಂದು ಒಂದು ಕಡೆ ವೇದದಲ್ಲಿ ಹೊಗಳಿಯೂ ಇರುತ್ತದೆ. ವಿಷ್ಣುವು ಸರ್ವದೇವಾತ್ಮಕನೆಂಬುದೂ ಸುಪ್ರಸಿದ್ಧವು. ಆದ್ದರಿಂದಲೂ ಈ ಇಬ್ಬರು ದೇವತೆಗಳನ್ನೂ ಇಲ್ಲಿ ಪರಾಮರ್ಶಿಸಿದೆ ಎಂದು ಹೇಳಬಹುದು. ಈ ದೇವತೆಗಳನ್ನು ಕುರಿತು ಯಜಮಾನನು 'ನೀವುಗಳು ನನ್ನ ವಿಷಯಕ್ಕೆ ಒಂದೇ ರೀತಿಯ ಪ್ರೀತಿಯುಳ್ಳವರಾಗಬೇಕು'–ಎಂದು ಬೇಡಿರುತ್ತಾನೆ. ದೇವತೆಗಳ ಪ್ರಸಾದವಿಲ್ಲದೆ ಮನುಷ್ಯನು ಯಾವ ಸುಖವನ್ನೂ ಪಡೆಯಲಾರನು. ವಸ್ತುಗಳನ್ನು ಕೂಡಿಹಾಕುವದು ಈಗ ಮನುಷ್ಯನಿಗೆ ಹವ್ಯಾಸವಾಗಿದೆ. ಆದರೆ ಅವುಗಳಿಂದ ಎಷ್ಟರಮಟ್ಟಿನ ಸುಖವನ್ನು ಅವನು ಪಡೆಯುತ್ತಾನೆಂದು ವಿಚಾರಿಸಿದರೆ ಅದು ಮಾತ್ರ ಅಲ್ಪವೇ ಆಗಿರುವದು.

ಉದಾಹರಣೆಗೆ ಒಬ್ಬ ಮನುಷ್ಯನು ನೂರಾರುಖಂಡುಗಗಳ ಭತ್ತವನ್ನು ಬೆಳೆಯುತ್ತಾನೆಂದಿಟ್ಟು ಕೊಳ್ಳೋಣ. ಅವನಿಗೆ ಹೊಟ್ಟೆನೋವೊ, ಸಕ್ಕರೆಖಾಯಿಲೆಯೊ–ಇದ್ದುಬಿಟ್ಟರೆ ಅವನು ಆ ಅನ್ನವನ್ನು ಭೋಗಿಸುವದೆಲ್ಲಿ ಬಂತು? ಆದ್ದರಿಂದ ಅನ್ನದ ಜೊತೆಗೆ ದೇವಾನುಗ್ರಹದಿಂದ ಆರೋಗ್ಯವೂ ಇರಬೇಕಲ್ಲವೆ? ದೇವತಾಪ್ರಸಾದವಿಲ್ಲದೆ ಯಾವನುತಾನೆ ಸುಖಪಡಲಾದೀತು? ಆದ್ದರಿಂದ ನಾವು ದೇವತೆಗಳನ್ನು ಸ್ತುತಿರೂಪವಾದ ವಾಕ್ಕುಗಳಿಂದ ಸೇವಿಸಿದಲ್ಲಿ ಮಾತ್ರ ಅವರು ನಮ್ಮಲ್ಲಿ ಪ್ರಿತಿಯುಳ್ಳವರಾಗಿಯೂ ಭೋಗಪ್ರದರಾಗಿಯೂ ಆಗುವರು. ದೇವತೆಗಳು ನಮ್ಮಲ್ಲಿಗೆ ಬರುತ್ತಾರೆ–ಎಂದರೆ ಬರಿಗೈಯಲ್ಲಿ ಮನುಷ್ಯನಂತೆ ಎಂದಿಗೂ ಬರುವದಿಲ್ಲ. ಅವರು ಧಾರಾಳವಾಗಿ ಸಮೃದ್ಧಿಯಾಗಿ ಧನಧಾನ್ಯಗಳನ್ನು ಅನುಗ್ರಹಿಸಿಯೇ ದರ್ಶನವನ್ನು ನೀಡುತ್ತಾರೆ. ಹಾಗೆ ಬನ್ನಿರಿ–ಎಂದು ಇಲ್ಲಿ ಪ್ರಾರ್ಥಿಸಲಾಗಿದೆ.

## 2. ವಾಜಶ್ಚ ಮೇ ಪ್ರಸವಶ್ಚ ಮೇ

ಈಗ ಚಮಕಾಧ್ಯಾಯದ ಮೊದಲನೆಯ ಅನುವಾಕವನ್ನು ವಿಚಾರಮಾಡೋಣ.

**ವಾಜಶ್ಚ ಮೇ ಪ್ರಸವಶ್ಚ ಮೇ ಪ್ರಯತಿಶ್ಚ ಮೇ ಪ್ರಸಿತಿಶ್ಚ ಮೇ ಧೀತಿಶ್ಚ ಮೇ ಕ್ರತುಶ್ಚ ಮೇ ಸ್ವರಶ್ಚ ಮೇ ಶ್ಲೋಕಶ್ಚ ಮೇ ಶ್ರಾವಶ್ಚ ಮೇ ಶ್ರುತಿಶ್ಚ ಮೇ ಜ್ಯೋತಿಶ್ಚ ಮೇ ಸುವಶ್ಚ ಮೇ ಪ್ರಾಣಶ್ಚ ಮೇಽಪಾನಃ ||**

"ಅನ್ನವೂ ಅನ್ನದ ಒಡೆತನವೂ, ಅದರ ಶುದ್ಧಿಯೂ ಅದರ ಪ್ರಸಿತಿ (ಕುತೂಹಲ) ಯೂ ಧಾರಣೆಯೂ ಯಜ್ಞವೂ ಸ್ವರವೂ ಶ್ಲೋಕವೂ ಶ್ರಾವವೂ ಶ್ರುತಿಯೂ ಜ್ಯೋತಿಯೂ ಸ್ವರ್ಗಲೋಕವೂ ಪ್ರಾಣಾಪಾನಾದಿಗಳೂ ನನಗೆ ಯಜ್ಞಕ್ಕಾಗಿ ಉಂಟಾಗಲಿ!"

ಈಗ ಯಜಮಾನನು ತನಗೆ ದೇವತಾರಾಧನೆಗೆ ಬೇಕಾದ ಪದಾರ್ಥಗಳನ್ನು ಬೇಡುತ್ತಿದ್ದಾನೆ. ಇದರಲ್ಲಿ ಅನ್ನವೇ ಮೊದಲನೆಯದು.

ವಾಜ–ಎಂಬ ಹೆಸರಿನಿಂದ ಇದನ್ನು ವೇದದಲ್ಲಿ ಕರೆಯಲಾಗಿದೆ. ಯಜ್ಞದಲ್ಲಿ ಅನ್ನದಾನವೇ ಪ್ರಧಾನವು. ಸಂತರ್ಪಣೆ, ತದೀಯಾರಾಧನೆ, ದಾಸೋಹ–ವೆಂದು ಬೇರೆಬೇರೆಯವರು ಹೇಳುವದೆಲ್ಲವೂ ಅನ್ನದಾನವೇ ಆಗಿದೆ. ಅನ್ನವಿಲ್ಲದೆ ಮಾಡಿದ ಯಜ್ಞವು ತಾಮಸವೆಂದೇ ಗೀತೆಯಲ್ಲಿ ನಿಂದಿಸಲ್ಪಟ್ಟಿದೆ. ಆದ್ದರಿಂದ ಅನ್ನವು ಯಜ್ಞಕ್ಕಾಗಿ ನನಗೆ ಉಂಟಾಗಲಿ! ಎಂದು ಅಭಿಪ್ರಾಯ. ಹಿಂದಿನ ಕಾಲಕ್ಕೆ ರಾಜಮಹಾರಾಜರುಗಳು ಅನ್ನಯಜ್ಞವನ್ನೇ ಬ್ರಾಹ್ಮಣರ ಮೂಲಕ ಅತಿಶಯವಾಗಿ ನಡೆಯಿಸುತ್ತಿದ್ದರು. ಅದಕ್ಕಾಗಿ ಜಮೀನುಗಳನ್ನೇ ಕೊಟ್ಟಿದ್ದರು. ಆದರೆ ಈಚೆಗೆ ಬ್ರಾಹ್ಮಣರು ಯಜ್ಞವನ್ನೇ ಕೈಬಿಟ್ಟು ಅನ್ನವನ್ನು ಮಾತ್ರ ಉಳಿಸಿಕೊಳ್ಳಲು ಪ್ರಯತ್ನಿಸಿದರಾದ್ದರಿಂದ ಬೇರೆಬೇರೆಯವರು ಕಿತ್ತುಕೊಂಡರು. ಇದು ನಾವು ದೇವತೆಗಳಿಗೆ ಮಾಡಿದ ಅಪರಾಧದ ಫಲವಲ್ಲದೆ ಮತ್ತೇನು? ಅನ್ನದ ಜೊತೆಗೆ 'ಪ್ರಸವ' ಎಂದರೆ ಅದರ ಯಜಮಾನಿಕೆಯೂ ಬೇಕು. ಹಾಗೆಯೇ **ಪ್ರಯತಿ**– ಅನ್ನದ ಶುದ್ಧಿಯೂ ಅಗತ್ಯ. ಪಾಪಾನ್ನವು ದಾನಯೋಗ್ಯವಲ್ಲ. ಅನ್ನವನ್ನು ಸಂಪಾದಿಸುವ **ಪ್ರಸಿತಿ** (ಕುತೂಹಲವೂ) ಅಗತ್ಯವಾಗಿದೆ. ಅನಂತರ **ದೀತಿ** (ಧಾರಣೆ, ಕಾಪಾಡಿ ಕೊಳ್ಳುವದು) ಇಷ್ಟು ಅನ್ನದ ಜೊತೆಗೆ ಬೇಕಾದ ಸಾಮುಗ್ರಿಗಳು–ಎಂದಭಿಪ್ರಾಯ.

ಈಗ ಕ್ರತು–ಎಂದರೆ ಯಜ್ಞಕ್ಕೆ ಬೇಕಾದ ವಸ್ತುಗಳನ್ನು ತಿಳಿಸುತ್ತಾರೆ: **ಸ್ವರ** ಎಂದರೆ ಮಂತ್ರದಲ್ಲಿರುವ ಉದಾತ್ತಾದಿಸ್ವರಗಳು, **ಶ್ಲೋಕ**ವೆಂದರೆ ಸ್ತುತಿಗಳು, **ಶ್ರಾವ**–ಎಂದರೆ ಮತ್ತೊಬ್ಬರಿಗೆ ಕೇಳಿಸುವಂತೆ ಹೇಳುವ ಶಕ್ತಿ, **ಶ್ರುತಿ**–ಎಂದರೆ ಕೇಳುವ ಅರ್ಹತೆ, ಇವುಗಳೂ ಬೇಕು. ಜೊತೆಗೆ **ಜ್ಯೋತಿ**–ಬೆಳಕು **ಸುವಃ**– ಸ್ವರ್ಗಲೋಕ, ಪ್ರಾಣಾಪಾನಾದಿವೃತ್ತಿಗಳು ಇವುಗಳೂ ಬೇಕು–ಎಂದು ಪ್ರಾರ್ಥಿಸಲಾಗಿದೆ. ಎಲ್ಲವೂ ಯಜ್ಞಕ್ಕಾಗಿ ಎಂಬ ಪಲ್ಲವಿಯನ್ನು ಮರೆಯಬಾರದು.

## 3. ಪರೂಗ್ಂಷಿ ಚ ಮೇ ಶರೀರಾಣಿ ಚ ಮೇ

ಚಮಕಾಧ್ಯಾಯದ ಒಂದನೆಯ ಅನುವಾಕದ ಉತ್ತರಾರ್ಧದ ಅರ್ಥವನ್ನು ಈಗ ವಿಚಾರ ಮಾಡಬೇಕಾಗಿದೆ.

**ಚ ಮೇ ವ್ಯಾನಶ್ಚ ಮೇಽಸುಶ್ಚ ಮೇ ಚಿತ್ತಂ ಚ ಮ ಆಧೀತಂ ಚ ಮೇ ವಾಕ್ಚ ಮೇ ಮನಶ್ಚ ಮೇ ಚಕ್ಷುಶ್ಚ ಮೇ ಶ್ರೋತ್ರಂ ಚ ಮೇ ದಕ್ಷಶ್ಚ ಮೇ ಬಲಂ ಚ ಮ ಓಜಶ್ಚಮೇ ಸಹಶ್ಚಮ ಆಯುಶ್ಚ ಮೇ ಜರಾ ಚ ಮ ಆತ್ಮಾ ಚ ಮೇ ತನೂಶ್ಚ ಮೇ ಶರ್ಮ ಚ ಮೇ ವರ್ಮ ಚ ಮೇಽಙ್ಗಾನಿ ಚ ಮೇಽಸ್ಥಾನಿ ಚ ಮೇ ಪರೂಗ್ಂಷಿ ಚ ಮೇ ಶರೀರಾಣಿ ಚ ಮೇ ||1||**

'ವ್ಯಾನವೂ ಇದರ ವೃತ್ತಿಯುಳ್ಳ ವಾಯುವೂ ಚಿತ್ತವೂ ಆಧೀತವೂ ವಾಕ್ಕೂ ಮನಸ್ಸೂ, ಕಣ್ಣೂ ಕಿವಿಯೂ ದಕ್ಷವೂ ಬಲವೂ ಓಜಸ್ಸೂ ಸಹವೂ ಆಯುಷ್ಯವೂ ಜರೆಯೂ ಆತ್ಮನೂ ತನುವೂ ಶರ್ಮವೂ ವರ್ಮವೂ ಅಂಗಗಳೂ ಅಸ್ಥಿಗಳೂ ಪರ್ವಗಳೂ ಶರೀರವಯವಗಳೂ ನನಗೆ ಯಜ್ಞಕ್ಕಾಗಿ ಉಂಟಾಗಲಿ!'

ಹಿಂದಿನಂತೆಯೇ ಈ ಎಲ್ಲಾ ಪದಾರ್ಥಗಳೂ ಯಜ್ಞಕ್ಕಾಗಿ ನನಗೆ ಒದಗಲಿ, ಎಂಬರ್ಥದಲ್ಲಿ ಅನ್ವಯಮಾಡಿಕೊಳ್ಳಬೇಕು. ವ್ಯಾನ, ಅಸು– ಎಂಬಿವು ಆಧ್ಯಾತ್ಮಿಕವಾಯುವಿನ ವೃತ್ತಿಗಳು. ವ್ಯಾನವೆಂಬುದು ಸರ್ವಶರೀರ ವ್ಯಾಪಿಯಾದ ವಾಯುವು. ಇದು ಮುನಿಸಿಕೊಂಡರೆ ಶರೀರವು ಅಲುಗಾಡುವದು ಕೂಡ ಕಷ್ಟವಾಗುತ್ತದೆ. ಆದ್ದರಿಂದ ಈ ವ್ಯಾನದೇವತೆಯು ಯಾವಾಗಲೂ ನನ್ನನ್ನು ಅನುಗ್ರಹಿಸುತ್ತಿರಲಿ! ಎಂದು ಅಭಿಪ್ರಾಯ. **ಚಿತ್ತ**ವೆಂಬುದು ಸ್ಮರಣರೂಪವಾದ ಅಂತಃಕರಣವೃತ್ತಿಯು. ಇದರ ಬಲದಿಂದಲೇ **ಆಧೀತ**ವು –ಎಂದರೆ ಓದಿದ್ದು ನಮ್ಮಲ್ಲಿ ಉಳಿದಿರುತ್ತದೆ. ಸಮಯಕ್ಕೆ ಸರಿಯಾಗಿ ನೆನಪಾಗುತ್ತದೆ. ಚಿತ್ತದಲ್ಲಿ ವಿಸ್ಮೃತಿಯುಂಟಾಗಿಬಿಟ್ಟರೆ ಕಲಿತವಿದ್ಯೆಯೆಲ್ಲ ವ್ಯರ್ಥವೇ ಆಗಿಬಿಡುವದು. ಆದ್ದರಿಂದ ವೇದಾಧ್ಯಯನವೇ ಮುಂತಾದ

ಓದುವಿಕೆಯ ಶ್ರಮವು ಸಾರ್ಥಕವಾಗಲು ಆ ದೇವತೆಯು ತನ್ನನ್ನು ಅನುಗ್ರಹಿಸಲೆಂದು ಬೇಡಲಾಗಿದೆ. ವಾಕ್ಕು, ಮನಸ್ಸು, ಚಕ್ಷುಸ್ಸು, ಶ್ರೋತ್ರ–ಈ ನಾಲ್ಕೂ ಪ್ರಸಿದ್ಧವಾದವೇ ಆಗಿವೆ–ಎಂದು ಭಾಷ್ಯಕಾರರು ಸೂಚಿಸಿ ಕೈಬಿಟ್ಟಿರುತ್ತಾರೆ. ವಾಕ್ಕು ಎಂದರೆ ಮಾತು. ಧ್ವನಿ ಎಂದೂ ಅರ್ಥಮಾಡಬಹುದು. ಹೀಗೆ ಧ್ವನಿ ಹಾಗೂ ವರ್ಣರೂಪವಾದ ವಾಕ್ಕು ಮನುಷ್ಯನ ದೊಡ್ಡ ಆಸ್ತಿಯು. ಮಾತು ಬರದೆ ಹೋದವರ ಸ್ಥಿತಿ ಹೇಗಿರಬಹುದೆಂತ ಊಹಿಸಿರಿ. ಯಜ್ಞದಲ್ಲಿ ದೇವತೆಗಳನ್ನು ಸ್ತೋತ್ರ ಮಾಡುವದರಿಂದ ಹಿಡಿದು ಲೌಕಿಕವ್ಯವಹಾರಗಳವರೆಗೂ ವಾಕ್ಕೆ ಪುರುಷನಿಗೆ ಬೆಳಕು, ವಾಕ್ಕಿಗೆ ಅನುಗ್ರಾಹಕದೇವತೆಯು ಅಗ್ನಿಯು. ಹಾಗೆಯೇ ಮನಸ್ಸಿನ ಆಲಂಬನವಿಲ್ಲದೆ–ಎಂದರೆ ಆಲೋಚನೆಯ ಹಿಂತಡಿಕೆಯಿಲ್ಲದೆ ಮಾತು ಶೋಭಿಸುವದಿಲ್ಲ. ಆದ್ದರಿಂದ ಮನೋದೇವತೆಯ ಪ್ರಸಾದವೂ ಅಷ್ಟೇ ಅಗತ್ಯವಾಗಿರುವದು. ಮನಸ್ಸಿಗೆ ಚಂದ್ರನು ಅನುಗ್ರಾಹಕದೇವತೆಯು. ಇನ್ನು ಕಣ್ಣು, ಕಿವಿಗಳ ಅವಶ್ಯಕತೆಯನ್ನು ಕುರಿತು ಹೇಳಬೇಕಾದದ್ದೇ ಇಲ್ಲ. ಇಂದ್ರಿಯಗಳಲ್ಲೆಲ್ಲ ನಯನ(ಕಣ್ಣು)ವೇ ಪ್ರಧಾನವಾದುದು. ಇದಕ್ಕೆ ಅನುಗ್ರಾಹಕದೇವತೆಯಾಗಿ ಸೂರ್ಯನನ್ನೂ ಕಿವಿಗೆ ಅನುಗ್ರಾಹಕದೇವತೆಯಾಗಿ ದಿಕ್ಕುಗಳನ್ನೂ ಹೇಳುತ್ತಾರೆ, ಈ ದೇವತೆಗಳ ಪ್ರಸಾದದಿಂದಲೇ ನಮಗೆ ಇಂದ್ರಿಯಗಳ ಪಾಟವವು ದೊರಕಬೇಕಾಗಿದೆ. ಇವರೆಲ್ಲರೂ ಯಜ್ಞಕ್ಕಾಗಿಯೇ ನನಗೆ ಕೃಪೆಮಾಡಲಿ–ಎಂದು ಪ್ರಾರ್ಥಿಸಲಾಗಿದೆ.

ಈಗ ದಕ್ಷ, ಬಲ–ಇವುಗಳನ್ನು ವಿಚಾರಮಾಡೋಣ. ದಕ್ಷತೆ ಎಂದರೆ ಜ್ಞಾನೇಂದ್ರಿಯಗಳಲ್ಲಿರುವ ಕೌಶಲವು ಅಥವಾ ಚತುರತೆಯು–ಎಂದು ಹೇಳಬಹುದು. ಬಲವೆಂದರೆ ಕರ್ಮೇಂದ್ರಿಯಗಳಲ್ಲಿರುವ ಶಕ್ತಿಯು. ಯಾವನಿಗೆ ಇವೆರಡೂ ಇದ್ದುಕೊಂಡಿರುವವೋ ಅಂಥವನು ಉಳಿದವರನ್ನೆಲ್ಲ ಹಿಂದಕ್ಕೆ ಹಾಕುವನು. ಆದರೆ ಈ ದಕ್ಷಬಲಗಳು ದುರುಪಯೋಗವಾದರೆ ಸಮಾಜಕ್ಕೂ ತನಗೂ ಕೇಡಾದೀತು. ಆದ್ದರಿಂದ ಇವು ಯಜ್ಞಕ್ಕಾಗಿ ನನಗೆ ಒದಗಲಿ! ಎಂದು ಪ್ರಾರ್ಥನೆ ಮಾಡಿದಲ್ಲಿ ಕ್ಷೇಮಕರವಾಗಿರುವವು. ಇಲ್ಲದಿದ್ದರೆ ಕಳ್ಳರ

ಬುದ್ಧಿಕೌಶಲವೂ ಆನೆಯ ಬಲವೂ ನಮಗೆ ಉಂಟಾದರೂ ಯಾವ ಪ್ರಯೋಜನವಾದೀತು? ಇವುಗಳ ಬದಲು ಋಷಿಮುನಿಗಳ ಬುದ್ಧಿಕೌಶಲವೂ ಭೀಮನ ಬಲವೂ ಇದ್ದಲ್ಲಿ ಪುರುಷಾರ್ಥಕಾರಿಗಳಾಗುವವು. ಓಜಸ್ಸು ಎಂದರೆ ಬಲಾದಿಗಳಿಗೆ ಕಾರಣವಾದ ಎಂಟನೆಯ ಧಾತುವು. ಧಾತು ಎಂದರೆ ಶರೀರದ ಸಾರವು. ಸಹವೆಂದರೆ ಶತ್ರುಗಳು ಹಾಗೂ ಆಧ್ಯಾತ್ಮಕಾಧಿಭೌತಿಕಾಧಿ ದೈವಿಕವಾದ ಪ್ರತಿಕ್ರಿಯೆಗಳನ್ನು ತಡೆದುಕೊಳ್ಳುವ ಶಕ್ತಿಯು. ಇದು ಬಹು ಮುಖ್ಯ. ದುಃಖಸಂಕಟಗಳನ್ನೂ ಶತ್ರುಗಳ ಉಪದ್ರವಗಳನ್ನೂ ಶೀತೋಷ್ಣಾದಿಗಳನ್ನೂ ಸಹಿಸಬಲ್ಲವನಿಗೆ ಪ್ರಪಂಚದಲ್ಲಿ ಉನ್ನತ ಸ್ಥಾನವುಂಟು. ಹೇಡಿಗಳಿಗೆ ಇರುವದಿಲ್ಲ.

ಹೀಗೆಯೇ **ಆಯುಸ್ಸು, ಜರೆ**–ಇವುಗಳೂ ಯಜ್ಞಕ್ಕಾಗಿ ಬೇಕೆಂಬ ಪ್ರಾರ್ಥನೆಯನ್ನು ನೋಡೋಣ. ನೂರು ವರ್ಷಗಳ ಆಯುಷ್ಯವನ್ನೂ ಕರ್ಮಕ್ಕಾಗಿ ಬಯಸಬೇಕು– ಎಂಬುದು ಪ್ರಸಿದ್ಧವಾದ ವೇದೋಕ್ತಿಯಾಗಿದೆ. ಜರೆ(ಮುಪ್ಪು) ಯು ಏತಕ್ಕಾಗಿ ಬೇಕು? ಎಂಬಿದು ಪ್ರಶ್ನೆಯಾಗಿದೆ. ಆದರೆ ಸ್ವಲ್ಪ ವಿಚಾರಮಾಡಿದಲ್ಲಿ ಅದೂ ಬೇಕೆಂದೇ ಹೇಳಬಹುದು. ಹೇಗೆಂದರೆ: ವಯಸ್ಸಾಗುತ್ತಾಬಂದಂತೆಲ್ಲ ಶರೀರದಲ್ಲಿ ಅದರ ಪರಿಣಾಮಗಳು ತೋರಿಕೊಳ್ಳುವವು. ನರೆಗೂದಲು, ಸುಕ್ಕು–ಮುಂತಾಗಿ ಶರೀರದ ವಿಕಾರಗಳು ಮಾನವನಿಗೆ ಆಯುಷ್ಯವು ಮುಗಿಯುತ್ತಿದೆ–ಎಂದು ಎಚ್ಚರಿಕೆಯನ್ನು ಕೊಡುವವು. ವೃದ್ಧನಾದಂತೆಲ್ಲ ಕರ್ಮಾನುಷ್ಠಾನಗಳಲ್ಲಿಯೂ ಅಲ್ಪಸ್ವಲ್ಪ ರಿಯಾಯಿತಿಗಳು ದೊರೆಯುವವು. ಸಮಾಜದಲ್ಲಿಯೂ ವೃದ್ಧರಿಗೂ ಅನುಭವಿಗಳಿಗೂ ಗೌರವವುಂಟು. ಅವರ ಅನುಭವಗಳು ಇತರರಿಗೆ ಮಾರ್ಗದರ್ಶಕವಾಗುವವು. ಸಭೆಗಳಲ್ಲಿಯಂತೂ ವೃದ್ಧರಿಲ್ಲದಿದ್ದರೆ ಶೋಭೆಯೇ ಇರುವದಿಲ್ಲ. ಕೇವಲ ಯುವಕರೇ ಆಗಿಬಿಟ್ಟರೆ 'ಹುಡುಗಪಾಳ್ಯ' ಎಂದೇ ಕರೆಯುತ್ತಾರೆ. ಈ ವಾರ್ಧಕ್ಯವು ಕೇವಲ ಶರೀರಕ್ಕೆ ಮಾತ್ರ ಸೀಮಿತವಲ್ಲ. ಜ್ಞಾನದಿಂದ, ಆಚಾರದಿಂದ, ಶೀಲದಿಂದ, ಅನುಷ್ಠಾನದಿಂದ–ಬರುವ ವಾರ್ಧಕ್ಯವು ದೊಡ್ಡ ಗೌರವದ ಸೂಚಕವೇ ಆಗಿದೆ. ಇಂಥ ಜರೆಯು

ಅಪೇಕ್ಷಣೀಯವೆಂದೇ ಭಾವ. ಪ್ರತಿಯೊಬ್ಬನೂ ವಾರ್ಧಕ್ಯವನ್ನು ಪಡೆಯಲೇ ಬೇಕಾದುದು ಅನಿವಾರ್ಯವಾದ್ದರಿಂದ ಅದು ಬರುವ ವೇಳೆಗೆ ತಾನು ಗೌರವಸ್ಥಾನವನ್ನು ಸಂಪಾದಿಸಿದ್ದಲ್ಲಿ ಮನುಷ್ಯನು ಪೂಜ್ಯನೇ ಆಗುವನು. ಹೀಗೆ ಜರೆಯು ಒಂದು ದೇವತೆಯ ಪ್ರಸಾದವೆಂದೇ ಭಾವಿಸಲಾಗಿದೆ.

**ಆತ್ಮ**ನೆಂದರೆ– ಪ್ರಸಿದ್ಧನಾದ ಪರಮಾತ್ಮನು. ಆತ್ಮನು ಎಲ್ಲರ ಹೃದಯದಲ್ಲಿಯೂ ಇರುತ್ತಾನೆ. **ತನು** ಎಂದರೆ ಮಂಗಳಕರವಾದ ಲಕ್ಷಣಯುಕ್ತವಾದ ಅವಯವಗಳಿಂದ ಕೂಡಿದ ಶರೀರವು. **ಶರ್ಮ**ವೆಂದರೆ ಸುಖವು. **ವರ್ಮ**ವೆಂದರೆ ಶರೀರರಕ್ಷಕವಾದ ಕವಚವು. ಇವುಗಳೆಲ್ಲ ಯಜ್ಞಕ್ಕಾಗಿ ಉಂಟಾಗಲಿ–ಎಂದು ಪ್ರಾರ್ಥಿಸಿದೆ. ಹಾಗೆಯೇ **ಅಂಗ**ಗಳೂ ಬೇಕು ಎಂದು ಕೇಳಲಾಗಿದೆ. ಅವಯವಗಳು ಪರಿಪೂರ್ಣವಾಗಿಲ್ಲದಿದ್ದರೆ ಯಜ್ಞವನ್ನು ಮಾಡುವದಾದರೂ ಹೇಗೆ ಸಾಧ್ಯ? ಹೀನಾಂಗನಿಗೆ ಕರ್ಮಾಧಿಕಾರವಿಲ್ಲವೆಂತ ಶಾಸ್ತ್ರಗಳು ತಿಳಿಸುತ್ತವೆ. ನಮ್ಮ ಅವಯವಗಳು ಕರ್ಮಸಮರ್ಥವಾಗಿಯೂ ಚುರುಕಾಗಿಯೂ ಉಪಯುಕ್ತವಾಗಿಯೂ ಇರುವಂತೆ ಆಯಾ ದೇವತೆಗಳು ಅನುಗ್ರಹಿಸಬೇಕೆಂಬುದೇ ಇಲ್ಲಿ ಮಾಡಿರುವ ಪ್ರಾರ್ಥನೆಯ ಸಾರವಾಗಿದೆ. **ಅಸ್ಥಾನಿ** (ವೈದಿಕಶಬ್ದ) ಎಂದರೆ ಅಸ್ಥಿಗಳು–ಮೂಳೆಗಳು ಎಂದರ್ಥ. ಇವೇ ನಮ್ಮ ಶರೀರದ ರಚನೆಗೆ ಆಧಾರವಾಗಿರುವವು. **ಪರೂಂಷಿ** ಎಂದರೆ ಪರ್ವಗಳು–ಬೆರಳುಗಳಲ್ಲಿರುವ ಗೆಣ್ಣುಗಳು ಎಂದರ್ಥ. **ಶರೀರಾಣಿ**–ಎಂಬ ಕೊನೆಯ ಮಾತು ಶರೀರಾವಯವಗಳನ್ನೇ ತಿಳಿಸುತ್ತದೆ. ಅಂತೂ ಮನುಷ್ಯನ ಶರೀರಾಂತವರ್ತಿಗಳಾದ ಮಾಂಸ, ಎಲುಬು–ಮುಂತಾದವುಗಳ ಸಮೇತವಾದ ಎಲ್ಲಾ ಭಾಗಗಳೂ, ಹೆಚ್ಚೇಕೆ? ಆತ್ಮನಿಂದ ಅಧಿಷ್ಠಿತವಾದ **ಇಡಿಯ ಶರೀರವೇ ಯಜ್ಞದ ನಿಮಿತ್ತವಾಗಿ ಸಜ್ಜಾಗಲಿ!** ಎಂಬಿದು ಈ ಪ್ರಾರ್ಥನೆಯ ಅಭಿಪ್ರಾಯ. ಇದನ್ನು ನೋಡಿದರೆ ಮಾನವಶರೀರದ ಸಾರ್ಥಕತೆಯು ಯಜ್ಞದಲ್ಲಿಯೇ ಅಡಕವಾಗಿದೆ–ಎಂಬಿದು ಸ್ಪಷ್ಟವಾಗುವದು. ವಾಚಕರೆ, 'ಯಜ್ಞೇನ ಕಲ್ಪತಾಂ' ಎಂಬ ಮಂತ್ರದ ಸ್ವಾರಸ್ಯವು ತಮಗೆ ಈಗ ಸ್ವಲ್ಪ ಮಟ್ಟಿಗೆ ಮನದಟ್ಟಾಗಿರಬಹುದಲ್ಲವೆ?

## 4. ಸತ್ಯಂ ಚ ಮೇ ಶ್ರದ್ಧಾ ಚ ಮೇ

ಚಮಕಾಧ್ಯಾಯದ ಎರಡನೆಯ ಅನುವಾಕವನ್ನು ಈಗ ವಿಚಾರಮಾಡ ಬೇಕಾಗಿದೆ. ಅದರ ಪೂರ್ವಭಾಗವು ಹೀಗಿದೆ:

**ಓಂ ॥ ಜ್ಯೈಷ್ಠ್ಯಂ ಚ ಮ ಆಧಿಪತ್ಯಂ ಚ ಮೇ ಮನ್ಯುಶ್ಚ ಮೇ ಭಾಮಶ್ಚ ಮೇಽಮಶ್ಚ ಮೇಽಂಭಶ್ಚ ಮೇ ಜೇಮಾ ಚ ಮೇ ಮಹಿಮಾ ಚ ಮೇ ವರಿಮಾ ಚ ಮೇ ಪ್ರಥಿಮಾ ಚ ಮೇ ವರ್ಷ್ಮಾ ಚ ಮೇ ದ್ರಾಘುಯಾ ಚ ಮೇ ವೃದ್ಧಂ ಚ ಮೇ ವೃದ್ಧಿಶ್ಚ ಮೇ ಸತ್ಯಂ ಚ ಮೇ ಶ್ರದ್ಧಾ ಚ ಮೇ ಜಗಚ್ಚ ॥**

"ಜ್ಯೈಷ್ಠ್ಯವೂ, ಆಧಿಪತ್ಯವೂ ಮನ್ಯುವೂ ಭಾಮವೂ ಅಮವೂ ಆಂಭವೂ ಜೇಮೆಯೂ ಮಹಿಮೆಯೂ ವರಿಮೆಯೂ ಪ್ರಥಿಮೆಯೂ ವರ್ಷ್ಮವೂ ದ್ರಾಘುಯವೂ ವೃದ್ಧವೂ ವೃದ್ಧಿಯೂ ಸತ್ಯವೂ ಶ್ರದ್ಧೆಯೂ ಜಗತ್ತೂ ನನಗೆ ಯಜ್ಞಕ್ಕಾಗಿ ಒದಗಲಿ!"

ಜ್ಯೈಷ್ಠ್ಯವೆಂದರೆ ಹೆಚ್ಚುಗಾರಿಕೆ ಎಂಬರ್ಥ. ಪ್ರತಿಯೊಬ್ಬನಿಗೂ ತಾನೂ ಯಜಮಾನನಾಗಿರಬೇಕೆಂದೂ ತಾನು ಹೇಳುವಂತೆ ಇತರರು ಕೇಳಬೇಕೆಂದೂ ಬಯಕೆಯಿರುವದು. ಆದರೆ ಈ ಆಸೆಯು ಸರಿಯಾದ ತಿಳಿವಳಿಕೆ ಹಾಗೂ ಕರ್ತವ್ಯದೃಷ್ಟಿಯಿಂದ ಕೂಡಿದ್ದು ಬಹುಜನಹಿತಕ್ಕೂ ಸುಖಕ್ಕೂ ಕಾರಣವಾಗಿರ ಬೇಕು. ಯಜಮಾನನಾದ ಮಾತ್ರಕ್ಕೆ ಹೆಚ್ಚುಗಾರಿಕೆಯು ಬರುವದಿಲ್ಲ. ಎಲ್ಲರಿಗೂ ಮೆಚ್ಚಾಗುವಂತೆ ಅದನ್ನು ನಿರ್ವಹಿಸುವ ಶಕ್ತಿಯಿರಬೇಕು. ಹಾಗೆಯೇ ಅಧಿ ಕಾರವೂ ಎಂದು ತಿಳಿಯಬೇಕು. ಆಧಿಪತ್ಯ–ಎಂಬಿದು ಅಧಿಪತಿಯ ಭಾವವು. ತಾನು ಯಾವದಕ್ಕೆ ಒಡೆಯನೋ ಅದನ್ನು ಸರಿಯಾಗಿ ನಡೆಯಿಸಿ ಸದ್ವಿನಿಯೋಗಮಾಡುವ ಬುದ್ಧಿಯಿರಬೇಕು. ಆಗ್ಗೆ ಜ್ಯೈಷ್ಠ್ಯವೂ ಆಧಿಪತ್ಯವೂ ಸಾರ್ಥಕವಾಗುವವು. ಮನ್ಯುವೆಂದರೆ ಒಳಗೊಳಗೇ ಉಂಟಾಗಿರುವ ಕೋಪ.

ಭಾಮವೆಂದರೆ ಹೊರಗೆ ಮುಖದಲ್ಲಿ ಹಾಗೂ ದೇಹದ ಅಂಗಗಳಲ್ಲಿ ಅದು ಪ್ರಕಟವಾಗುವಿಕೆ. ಈ ಮನ್ಯುಭಾಮಗಳು ನನಗೆ ಉಂಟಾಗಲಿ! ಎಂಬ ಪ್ರಾರ್ಥನೆಯು ವಿಚಿತ್ರವಾಗಿ ತೋರಿದರೂ ಅಗತ್ಯವಾಗಿದೆ. ಒಬ್ಬ ಸಾಧುವು ಒಂದು ಹಾವಿಗೆ ಯಾರನ್ನೂ ಕಚ್ಚಬೇಡ– ಎಂದು ಉಪದೇಶಿಸಿದನಂತೆ. ಅದು ಅವನ ಮಾತಿನಂತೆ ಸುಮ್ಮನೆ ಇದ್ದಾಗ ಹುಡುಗರು ಕಲ್ಲುಹೊಡೆದು ಕೀಟಲೆಮಾಡುತ್ತಿದ್ದರು. ಮತ್ತೊಮ್ಮೆ ಸಾಧುವು ಬಂದಾಗ ಅದು ತನ್ನ ಕಷ್ಟವನ್ನು ಹೇಳಿಕೊಳ್ಳಲಾಗಿ "ಅಯ್ಯಾ ನಾಗರಾಜನೆ, ನೀನು ಯಾರನ್ನೂ ಕಚ್ಚಬೇಡ– ಎಂದು ನಾನು ಹೇಳಿದೆನೇ ಹೊರತು 'ಬುಸ್' ಎನ್ನಬೇಡ' ಎಂತ ಹೇಳಿಲ್ಲವಲ್ಲ? ನಿನ್ನ ಆತ್ಮರಕ್ಷಣೆಗೆ ನೀನು ಕೋಪವನ್ನು ತೋರಿಸಲೇಬೇಕು. ಆದರೆ ಯಾರಿಗೂ ಕೆಡಕು ಮಾಡಬಾರದು" ಎಂದನಂತೆ. ಹಾಗೆಯೇ ನಮಗೂ ಸ್ವಲ್ಪ ಕೋಪತಾಪಗಳು ಮಿತವಾಗಿ ವ್ಯವಹಾರದಲ್ಲಿ ಬೇಕಾಗುತ್ತವೆ– ಎಂದರ್ಥ. ಇನ್ನು ಅಮವೆಂದರೆ ಅಳೆಯಲಸಾಧ್ಯವಾಗಿರುವಿಕೆ. ಯಾವ ಶತ್ರುಗಳಿಗೂ ತನ್ನ ರಹಸ್ಯವನ್ನು ಬಿಟ್ಟುಕೊಡದಿರುವದು. ಅಂಭವೆಂದರೆ ನೀರು. ಇದು ಎಲ್ಲರಿಗೂ ಬೇಕಾದದ್ದೇ ಆಗಿದೆ. ಜೇಮಾ ಎಂದರೆ ಜಯಿಸುವ ಸಾಮರ್ಥ್ಯವು. ಯಾವದೇ ಸನ್ನಿವೇಶದಲ್ಲಿಯಾದರೂ ಎದೆಗುಂದದೆ ಮುನ್ನುಗ್ಗಿ ಕಾರ್ಯಸಾಧನೆ ಮಾಡುವದು. ಹಾಗೆಯೇ ಮಹಿಮಾ ಜಯದಿಂದ ಪ್ರಾಪ್ತವಾದ ಧನಕನಕಾದಿ ಗಳಿಂದ ಕೂಡಿರುವಿಕೆ. ಹಾಗೂ ಅದನ್ನು ಸೂಕ್ತರೀತಿಯಿಂದ ಪ್ರದರ್ಶಿಸಿ ಕೊಳ್ಳುವಿಕೆ. ಇಂಥ ಗುಣಗಳು ಮತ್ತು ಬಾಹ್ಯವಾದ ಭೋಗ್ಯವಸ್ತುಗಳು ಕೂಡ ನನಗೆ ಉಂಟಾಗಲಿ! ಎಂದು ಪ್ರಾರ್ಥನೆಯ ಅಭಿಪ್ರಾಯ.

ಈಗ ವರಿಮಾ– ಪ್ರಥಿಮಾಗಳನ್ನು ವಿಚಾರಮಾಡೋಣ. ವರಿಮಾ ಎಂದರೆ ಪೂಜ್ಯತ್ವವು. ಪ್ರಥಿಮಾ ಎಂದರೆ ಮನೆ, ಹೊಲ ಮುಂತಾದವುಗಳ ಬಡಾವಣೆ. ಅಭಿವೃದ್ಧಿ– ಎಂದರ್ಥ. ಗೃಹಸ್ಥನು ತಾನು ಸಂಪಾದಿಸಿದುದರ ಜೊತೆಗೆ ಅವುಗಳನ್ನು ಬೆಳೆಯಿಸುವದರಲ್ಲಿಯೂ ಪ್ರಯತ್ನಮಾಡ ಬೇಕಾಗುವದು. ಏಕೆಂದರೆ ಕುಟುಂಬವು ಬೆಳೆದಂತೆಲ್ಲ ಆವಶ್ಯಕತೆಗಳು

ಹೆಚ್ಚಾಗುವವು. ಹೀಗೆಯೇ ಪ್ರಥಿಮೆಯೂ ಬಯಸತಕ್ಕದ್ದೇ ಆಗಿದೆ. ವರ್ಷ್ಮವೆಂದರೆ ಮಗ, ಮೊಮ್ಮಗ–ಮುಂತಾದವರ ಶರೀರಗಳೆಂದು ಭಾಷ್ಯಕಾರರು ತಿಳಿಸುತ್ತಾರೆ. ಮತ್ತು ದ್ರಾಘುಯಾ–ಎಂದರೆ ಮುಂದುಮುಂದಿನ ಸಂತತಿರೂಪವಾದ ವಂಶವೃಕ್ಷವೆಂದರ್ಥ. ಇದು ಪರಂಪರೆಯಾಗಿ ಹಿಂದಿನಿಂದ ನಡೆದುಬಂದಿರುವಂತೆ ಮುಂದಕ್ಕೂ ವಂಶಾಭಿವೃದ್ಧಿಯು ಸತತವಾಗಿ ಮುಂದುವರಿಯುವಂತೆ ಕೇಳಿಕೊಂಡಿರುವ ಬಯಕೆಯಾಗಿದೆ. ವೃದ್ಧವೆಂದರೆ ಸವೆಯದೆ ಬೆಳೆಯುತ್ತಿರುವ ಅನ್ನ ಮತ್ತು ಧನವು. ವೃದ್ಧಿಯೆಂದರೆ ವಿದ್ಯೆ, ಜ್ಞಾನ, ಪುಣ್ಯ– ಮುಂತಾದ ಗುಣಗಳ ಉತ್ಕರ್ಷವು. ಇವುಗಳೆಲ್ಲವೂ ಬೇಕಾದವುಗಳೇ ಆಗಿವೆ.

ಇನ್ನು ಸತ್ಯವು. ಇದನ್ನು ಬಯಸುವವರು ಈಗ ಕಡಿಮೆ. ಆದರೆ ಪ್ರತಿಯೊಬ್ಬರೂ ತಮ್ಮ ಹಾಗೂ ತಮ್ಮ ಕುಲದ ಕೀರ್ತಿಪಾಲನೆಗಾಗಿ ಸತ್ಯವನ್ನೇ ಎತ್ತಿಹಿಡಿಯಬೇಕಾದುದು ಅಗತ್ಯ. ಯಾವನು ಸುಳ್ಳನ್ನು ಹೇಳುತ್ತಾನೋ ಆತನು ಬುಡಸಮೇತವಾಗಿ ಒಣಗಿಹೋಗುತ್ತಾನೆಂದೇ ಉಪನಿಷತ್ತಿನಲ್ಲಿ ತಿಳಿಸಿದೆ. ಆದ್ದರಿಂದ ಸತ್ಯವನ್ನು ನಾವು ಅನುಷ್ಠಾನಮಾಡುವದು ಮಾತ್ರವಲ್ಲದೆ ನಮ್ಮ ವಂಶದವರೆಲ್ಲರೂ ಸತ್ಯವ್ರತರಾಗಿಯೇ ಬಾಳುವಂತೆ ಶಿಕ್ಷಣವನ್ನು ಕೊಡಬೇಕು. ಇದಕ್ಕಾಗಿ ಸತ್ಯವನ್ನು ಬಯಸಬೇಕು. ಹಾಗೆಯೇ ಶ್ರದ್ಧೆಯು. ಇದಂತೂ ಕರ್ಮಕ್ಕೆ ಬಹಳ ಮುಖ್ಯವಾದ ಸಾಧನವು. ಶ್ರದ್ಧೆಯಿಲ್ಲದಿದ್ದರೆ ಜೀವನವೇ ಇಲ್ಲವೆಂದರೂ ತಪ್ಪಾಗದು. ಭೂಮಿ, ಅಗ್ನಿ, ಆಕಾಶ, ಸೂರ್ಯ, ಚಂದ್ರಾದಿ ಗಳೆಲ್ಲರೂ ಶ್ರದ್ಧೆಯಿಂದಲೇ ಜೀವಿಸಿರುತ್ತಾರೆಂದೂ ಜಗತ್ತೆಲ್ಲವೂ ಶ್ರದ್ಧಾಮಯ ವೆಂದೂ ವೇದದಲ್ಲಿ ಒಂದು ಕಡೆ ಸ್ತುತಿಸಿದೆ. ವ್ಯವಹಾರದಲ್ಲಿಯೂ ಮನುಷ್ಯನಿಗೆ ನಂಬಿಕೆ–ಎಂಬುದೇ ಒಂದು ದೊಡ್ಡ ಆಸ್ತಿಯು. ಈ ಕಾಲದಲ್ಲಿಯೂ ಕಾಗದಪತ್ರಗಳ ಮೂಲಕ ನಡೆಯುವ ವ್ಯವಹಾರಕ್ಕಿಂತ ಹತ್ತುಪಾಲು ಹೆಚ್ಚು ವ್ಯವಹಾರಗಳು ಶ್ರದ್ಧೆ (ನಂಬಿಕೆ)ಯಿಂದಲೇ ನಡೆಯುವವು. ಯಾರಾದರೂ ನಂಬಿಕೆಗೆ ದ್ರೋಹಮಾಡಿದರೆ ಜನರು ಅಂಥವರನ್ನು ಕೈಬಿಡುತ್ತಾರೆಯೇ

ಹೊರತು ಶ್ರದ್ಧೆಯನ್ನು ಕೈಬಿಡುವದಿಲ್ಲ. ಇದರಿಂದ ಶ್ರದ್ಧೆಯು ಹೆಚ್ಚಿನದೆಂದು ತಿಳಿಯುತ್ತದೆ. ಹೀಗೆ ಎಲ್ಲ ಕಾಲಕ್ಕೂ ಮಾನವನಿಗೆ ಜೀವನಾಧಾರವಾಗಿರುವ ಶ್ರದ್ಧೆಯು ಕರ್ಮಕ್ಕೆ ಕಂಪನ್ನುಂಟುಮಾಡುವ ಒಗ್ಗರಣೆಯಂತಿರುತ್ತದೆ. ಶ್ರದ್ಧಾಹೀನವಾದ ಕರ್ಮಗಳು ಶೋಭಿಸುವದಿಲ್ಲ. ಭಗವಂತನಿಗೆ ಪ್ರೀತಿಯಾಗುವದೂ ಇಲ್ಲ. ಆದ್ದರಿಂದ ಶ್ರದ್ಧೆಯನ್ನು ತನಗೆ ಕೊಡಬೇಕೆಂದು ಭಗವಂತನನ್ನು ಇಲ್ಲಿ ಪ್ರಾರ್ಥಿಸಲಾಗಿದೆ.

ಜಗತ್ತೆಂಬುದು ಸ್ಥಾವರಜಂಗಮಾತ್ಮಕವಾದ ಇಡಿಯ ಪ್ರಪಂಚವನ್ನೇ ಹೇಳುತ್ತದೆ. ಸಮಸ್ತಪ್ರಪಂಚವೂ ನನಗೆ ಶುಭಕರವಾಗಿಯೂ ಸುಖಕರವಾಗಿಯೂ ಉಂಟಾಗಲಿ–ಎಂಬಿದು ಅಭಿಪ್ರಾಯವು.

**ಮೇ ಧನಂ ಚ ಮೇ ವಶಶ್ಚ ಮೇ ತ್ವಿಷಿಶ್ಚ ಮೇ ಕ್ರೀಡಾ ಚ ಮೇ ಮೋದಶ್ಚ ಮೇ ॥**

"ಧನವೂ ವಶವೂ ತ್ವಿಷಿಯೂ ಕ್ರೀಡೆಯೂ ಮೋದವೂ ನನಗೆ ಯಜ್ಞಕ್ಕಾಗಿ ಉಂಟಾಗಲಿ!"

ಧನವು ಪ್ರಸಿದ್ಧವಾಗಿದೆ. ವಶವೆಂಬುದು ಒಂದು ಸಿದ್ಧಿಯು. ಎಲ್ಲವನ್ನೂ ತನ್ನ ಸ್ವಾಧೀನದಲ್ಲಿಟ್ಟುಕೊಳ್ಳುವಿಕೆ. ಆದರೆ ಇದು ಬಲಾತ್ಕಾರದಿಂದಾಗಲಿ ಹಟದಿಂದಾಗಲಿ ಆಗಬಾರದು. ಪ್ರೇಮದಿಂದ ಎಲ್ಲರ ಹೃದಯವನ್ನೂ ಗೆದ್ದು ಜಗತ್ತನ್ನೇ ವ್ಯಾಪಿಸಿಕೊಂಡು ವಶಗೊಳಿಸಿಕೊಳ್ಳುವಂಥ ಉನ್ನತಮಟ್ಟದ್ದಾಗಿರಬೇಕು. ತ್ವಿಷಿಯೆಂದರೆ ಶರೀರಕಾಂತಿಯು. ಸುಂದರವಾದ ಶರೀರವೂ ಅದಕ್ಕೆ ತಕ್ಕ ಲಾವಣ್ಯವೂ ತೇಜಸ್ಸೂ ಇದ್ದಲ್ಲಿ ಎಲ್ಲರನ್ನೂ ತನ್ನ ಕಡೆಗೆ ಸೆಳೆದುಕೊಳ್ಳಬಹುದಾಗಿದೆ. ಆದ್ದರಿಂದ ಇವುಗಳನ್ನು ಕೇಳಿಕೊಳ್ಳಲಾಗಿದೆ. ಕ್ರೀಡೆಯೆಂದರೆ ಆಟಗಳು. ಹಿಂದಿನ ಕಾಲಕ್ಕೆ ಪಗಡೆಯಾಟವೇ ಮುಂತಾದವು ಪ್ರಸಿದ್ಧವಾಗಿದ್ದವು. ಅವುಗಳಲ್ಲಿ ಪರಿಣತರಾದವರೂ ಇದ್ದರು. ಈಗಿನ ಕಾಲಕ್ಕೂ ಕ್ರೀಡಾಪ್ರಪಂಚವೇನೂ ಕಿರಿದಾಗಿಲ್ಲ. ಚಿಕ್ಕಮಕ್ಕಳ ಗೋಲಿ, ಬುಗುರಿ–ಆಟಗಳಿಂದ

ಹಿಡಿದು ಅಂತರರಾಷ್ಟ್ರೀಯ ಖ್ಯಾತಿಯನ್ನು ಪಡೆದಿರುವ ಒಲಂಪಿಕ್ಸ್ ಕ್ರೀಡೆಗಳವರೆಗೂ ಈ ಪ್ರಪಂಚವು ಹರಡಿದೆ. ಪ್ರತಿಯೊಂದು ದೇಶಗಳವರೂ ಕ್ರೀಡೆಗಳಲ್ಲಿ ತಮ್ಮ ತಮ್ಮ ಹೆಚ್ಚುಗಾರಿಕೆಯನ್ನು ಈಗೀಗ ಪ್ರದರ್ಶಿಸುತ್ತಿದ್ದಾರೆ. ಜಗತ್ಪ್ರಸಿದ್ಧವಾದ ಕ್ರಿಕೆಟ್, ಹಾಕಿ–ಮುಂತಾದ ಆಟಗಳೂ, ಜೊತೆಗೆ ಒಬ್ಬೊಬ್ಬರೇ ಆಡುವ ಕೇರಂ, ಚದುರಂಗ–ಮುಂತಾದ ಆಟಗಳೂ ಈಗ ಪ್ರಸಿದ್ಧವಾಗಿವೆ. ಇವುಗಳಲ್ಲಿ ವಿಜೇತರು ಹಾಗು ಪಟುಗಳಾದವರು ಎಲ್ಲರಿಂದಲೂ ಗೌರವ, ಕೀರ್ತಿಗಳನ್ನು ಹೊಂದಿರುತ್ತಾರೆ. ಹೀಗೆ ಸುಪ್ರಸಿದ್ಧರಾಗ ಬೇಕಾದರೆ ಭಗವಂತನ ಅನುಗ್ರಹವು ಬೇಕು. ಇಂಥವರು ತಮ್ಮ ಹಿಂದಿನ ಜನ್ಮಗಳಲ್ಲಿ 'ಕ್ರೀಡಾ ಚ ಮೇ' ಎಂದು ದೇವರಲ್ಲಿ ಪ್ರಾರ್ಥಿಸಿಕೊಂಡಿರಬಹುದು. ಇರಲಿ. ಕ್ರೀಡೆಯನ್ನು ಆಡುವದಕ್ಕಿಂತಲೂ ನೋಡುವದು ತುಂಬ ಖುಷಿಯಾದ ಸನ್ನಿವೇಶವು. ಎಷ್ಟೋ ಜನರು ಮ್ಯಾಚ್‌ಗಳನ್ನು ನೋಡಲು ದೇಶದಿಂದ ದೇಶಕ್ಕೆ ಹೋಗುತ್ತಾರೆ. ಅವುಗಳ ವಾರ್ತೆಯನ್ನು ಟಿ.ವಿ., ರೇಡಿಯೋಗಳ ಮೂಲಕ ನೋಡಿ, ಆಲೈಸಿ ಕೇಳಿ ಆನಂದಪಡುತ್ತಾರೆ. ಇದೇ ಮೋದವು: **ಹೀಗೆ ಕ್ರೀಡೆಯೂ ಮೋದವೂ ವೇದೋಕ್ತವಾದ ಕಾಮುಗಳಾಗಿ ಪರಿಗಣಿಸಲ್ಪಟ್ಟಿವೆ.** ಆದ್ದರಿಂದ ಇವುಗಳನ್ನು ನಾವು ಹಗುರವಾಗಿ ತಿಳಿಯಬಾರದು. ಕ್ರೀಡಾಪಟುಗಳನ್ನೂ ಕ್ರೀಡೆಗಳನ್ನೂ ನಾವು ಭಗವಂತನು ಅನುಗ್ರಹಿಸಿರುವ ಆನಂದದ ಸಾಧನಗಳೆಂದೇ ತಿಳಿದು ನಮಗೂ ದೊರಕಲೆಂದು ಬಯಸಬೇಕು.

---

## 5. ಮತಿಶ್ಚ ಮೇ ಸುಮತಿಶ್ಚ ಮೇ

ಚಮಕಾಧ್ಯಾಯದ ಎರಡನೆಯ ಅನುವಾಕದ ಕಡೆಯಭಾಗವನ್ನು ಈಗ ವಿಚಾರಮಾಡಬೇಕಾಗಿದೆ.

**ಜಾತಂ ಚ ಮೇ ಜನಿಷ್ಯಮಾಣಂ ಚ ಮೇ ಸೂಕ್ತಂ ಚ ಮೇ ಸುಕೃತಂ ಚ ಮೇ ವಿತ್ತಂ ಚ ಮೇ ವೇದ್ಯಂ ಚಮೇ ಭೂತಂ ಚ**

ಮೇ ಭವಿಷ್ಯಚ್ಚ ಮೇ ಸುಗಂ ಚ ಮೇ ಸುಪಥಂ ಚ ಮ ಋದ್ಧಂ ಚ ಮ ಋದ್ಧಿಶ್ಚ ಮೇ ಕ್ಲೃಪ್ತಂ ಚ ಮೇ ಕ್ಲೃಪ್ತಿಶ್ಚ ಮೇ ಮತಿಶ್ಚ ಮೇ ಸುಮತಿಶ್ಚ ಮೇ ||

"ಜಾತವೂ ಜನಿಷ್ಯಮಾಣವೂ ಸೂಕ್ತವೂ ಸುಕೃತವೂ ವಿತ್ತವೂ ವೇದ್ಯವೂ ಭೂತವೂ ಭವಿಷ್ಯತ್ತೂ ಸಹಗಂತವ್ಯವೂ ಸುಪಥವೂ ಋದ್ಧವೂ ಋದ್ಧಿಯೂ ಕ್ಲೃಪ್ತವೂ ಕ್ಲೃಪ್ತಿಯೂ ಮತಿಯೂ ಸುಮತಿಯೂ ಯಜ್ಞಕ್ಕಾಗಿ ನನಗೆ ಉಂಟಾಗಲಿ!"

ಜಾತವೆಂದರೆ ಹುಟ್ಟಿರುವ ಪದಾರ್ಥವು. ಮನೆಯಲ್ಲಿರುವ ದನಕರುಗಳು ಪ್ರಸವಿಸಿದ್ದಲ್ಲಿ ಅವುಗಳ ಹಾಲು ಮುಂತಾದ ವಸ್ತುಗಳು ನನಗೆ ಯಜ್ಞಕ್ಕಾಗಿ ಒದಗಲಿ! ಎಂದಭಿಪ್ರಾಯ. ಏಕೆಂದರೆ ಯಜ್ಞಕ್ಕೆ ದ್ರವ್ಯಗಳು ಬೇಕು. ಹಾಗೂ ಜನರ ಸಹಾಯವೂ ಬೇಕು. ನಮಗೆ ಮಕ್ಕಳಿದ್ದರೆ ಅವರನ್ನೂ ಯಜ್ಞಕ್ಕೆ ಸಹಾಯಕರಾಗುವಂತೆ ಮಾಡಬೇಕೆಂದು ಕೇಳಿಕೊಳ್ಳಲಾಗಿದೆ. ಹಾಗೆಯೇ ಜನಿಷ್ಯಮಾಣ–ಎಂದರೆ ಮುಂದೆ ಹುಟ್ಟುವವುಗಳು ಕೂಡ ಯಜ್ಞಕರ್ಮಕ್ಕೆ ಅನುಕೂಲವಾಗಿರುವಂತೆಯೇ ಹುಟ್ಟಲಿ! ಎಂದರ್ಥ. ಒಬ್ಬ ಮನುಷ್ಯನಿಗೆ ಗರ್ಭಿಣಿಯಾದ ಸೊಸೆಯು ಮನೆಯಲ್ಲಿದ್ದರೆ ಆ ಯಜಮಾನನು ಕೈಗೊಳ್ಳ ಬಹುದಾದ ಶುಭಕಾರ್ಯಗಳಲ್ಲಿ ಸಮಯಕ್ಕೆ ಅಡ್ಡಿಯಾಗದಂತೆ ಪ್ರಸವವಾಗು ವದು ಅಗತ್ಯ. ಅದೇ ಒಂದು ದೊಡ್ಡ ಸಹಾಯವಾದೀತು. ಹಾಗೆಂತ ಪ್ರಾರ್ಥಿಸಿದೆ. ಇನ್ನು ಸೂಕ್ತಗಳು. ಸೂಕ್ತಗಳೆಂದರೆ ದೇವತಾಸ್ತುತಿರೂಪವಾದ ವೇದಮಂತ್ರಗಳು. ಯಜಮಾನನು ದೇವತಾರಾಧನೆ ಮಾಡುವಾಗ ತಾನೇ ಸೂಕ್ತಗಳನ್ನು ಬಲ್ಲವನಾಗಿದ್ದರೆ ಆರಾಧನೆಯು ವೀರ್ಯವತ್ತಾಗುವದು. ಮತ್ತು ಋತ್ವಿಜನಿಗಿಂತ ಹೆಚ್ಚು ಶ್ರದ್ಧೆಯು ಯಜಮಾನನಿಗೆ ಇರುತ್ತದೆಯಾದ್ದರಿಂದ ದೇವತೆಯನ್ನು ಸಂತೋಷಗೊಳಿಸುವದು ಸುಲಭವಾಗುತ್ತದೆ. ಆದ್ದರಿಂದ ಸೂಕ್ತಗಳನ್ನು ಕಾಮ್ಯವಾಗಿಯೇ ಸೂಚಿಸಲಾಗಿದೆ. ಹಾಗೆಯೇ ಸುಕೃತವು– ಎಂದರೆ ಆ ಮಂತ್ರಗಳ ಜಪದಿಂದ ದೊರಕುವ ಪುಣ್ಯವು. ಅಪಮೃತ್ಯು

ಪರಿಹಾರವನ್ನು ಬಯಸುವ ಯಜಮಾನನು ತಾನೇ ಸ್ವತಃ ಮೃತ್ಯುಂಜಯ ಮಂತ್ರವನ್ನು ಜಪಮಾಡುವದಕ್ಕೂ ಬೇರೆಯವರಿಂದ ಮಾಡಿಸುವದಕ್ಕೂ ಬೇಕಾದಷ್ಟು ವ್ಯತ್ಯಾಸವಿದೆ; ಅಲ್ಲವೆ? ಆದ್ದರಿಂದ ಸೂಕ್ತ–ಸುಕೃತಗಳನ್ನೂ ಕೊಡುವಂತೆ ಕೇಳಲಾಗಿದೆ. ವಿತ್ತವೆಂದರೆ ನಮ್ಮ ಪೂರ್ವಪುಣ್ಯದಿಂದ ದೊರಕಿರುವ ಹಣವು. ವೇದ್ಯವೆಂದರೆ ಮುಂದೆ ದೊರಕಬಹುದಾದದ್ದು. ಇವೆರಡೂ ಬಯಸತಕ್ಕವುಗಳೇ ಆಗಿವೆ. ಹಿಂದೆ ದೊರೆತದ್ದಾದರೂ ಮತ್ತೊಬ್ಬರ ಅಧೀನವಾಗಿಬಿಟ್ಟಿದ್ದರೆ ಅದು ನಮಗೆ ಸಮಯದಲ್ಲಿ ಉಪಯೋಗಕ್ಕೆ ಬರುವದಿಲ್ಲ, ಉದಾಹರಣೆಗೆ: ಕೊಟ್ಟ ಸಾಲವು. ಈ ಹಣವು ನಮ್ಮದೇ ಆದರೂ ನಮ್ಮ ಕೈಗೆ ಬರುವವರೆಗೂ ನಂಬುವಂತಿಲ್ಲ. ಹಾಗೆಯೇ ಮುಂದೆ ಬರಬಹುದಂತ ನಾವು ನಿರೀಕ್ಷಿಸುವ ಬೆಳೆ, ಧನಸಮೃದ್ಧಿ ಮುಂತಾದವು. ಸರ್ಕಾರಿ ನೌಕರರಾದರೆ ಬರಬಹುದಾದ ಬಡತಿ (ಇಂಕ್ರಿಮೆಂಟ್) ಮತ್ತು ಪ್ರಮೋಷನ್‌ಗಳನ್ನು ಸೇರಿಸಿಕೊಳ್ಳಬಹುದು. ಈ ರೂಪವಾದ ವೇದ್ಯಗಳೆಲ್ಲವೂ ನನಗೆ ಯಜ್ಞಕ್ಕಾಗಿ ಸಕಾಲದಲ್ಲಿ ತೃಪ್ತಿಕರವಾಗಿ ಒದಗಲಿ! ಎಂದು ಪ್ರಾರ್ಥಿಸಲಾಗಿದೆ.

ಈಗ ಭೂತಭವಿಷ್ಯತ್ತುಗಳನ್ನು ವಿಚಾರಿಸೋಣ. ಈ ಮಾತುಗಳಲ್ಲಿ ನಮ್ಮ ಎಲ್ಲಾ ಕಾಮಗಳನ್ನೂ ಅಡಕಮಾಡಬಹುದು. ಅಂದರೆ ವ್ಯಾಪಕವಾದ ಅರ್ಥದಲ್ಲಿ ತೆಗೆದುಕೊಂಡಾಗ ಹಿಂದೆ ನಾವು ಏನೇನು ಸೌಕರ್ಯಗಳನ್ನು ಭಗವದನುಗ್ರಹದಿಂದ ಪಡೆದಿದ್ದೇವೋ ಅವುಗಳೊಡನೆ ಮುಂದಿನ ಕಾಲದ ಸುಖಗಳೂ ನಮಗೆ ಒದಗಲಿ! ಎಂದು ಪ್ರಾರ್ಥಿಸಿದೆ. ಇದನ್ನು ವೈಯುಕ್ತಿಕವಾಗಿ ಪ್ರಾರ್ಥಿಸುವದಕ್ಕಿಂತ ಇಡಿಯ ದೇಶಕ್ಕೇ ಸುಖವುಂಟಾಗಲೆಂದು ಬೇಡಿಕೊಂಡರೆ ದೇಶವು ಸುಭಿಕ್ಷವಾಗಿದ್ದು ರೋಗರುಜಿನಾದಿಗಳು, ದಂಗೆಗಳು, ಯುದ್ಧಗಳಿಲ್ಲದೆ ಚೆನ್ನಾಗಿದ್ದರೆ ನಾವೂ ಸಹ ಅದರಲ್ಲಿ ಭಾಗಿಗಳಾಗಬಹುದು. ಹೀಗೆ ಪ್ರಜೆಗಳ ಭೂತಭವಿಷ್ಯತ್ತುಗಳು ಸುಖಕರವಾಗಿದ್ದು ಯಜ್ಞಕ್ಕೆ ಅನುಕೂಲವಾಗಲಿ! ಎಂದು ಪ್ರಾರ್ಥಿಸಿದೆ. ಸುಗ–ಸುಪಥಗಳು ನಮಗೆ ಉಂಟಾಗಲಿ ಎಂಬುದು

ಮತ್ತೊಂದು ಬೇಡಿಕೆಯಾಗಿದೆ. ಜೊತೆಯಲ್ಲಿ ಹೋಗುವದು ಸುಗವು. ಪರಸ್ಥಳಗಳಿಗೆ ಹೊರಟಾಗ ನಮಗೆ ಒಳ್ಳೆಯ ಜೊತೆಯು ಸಿಕ್ಕಿದರೆ ತುಂಬ ಸಂತೋಷವಾಗುತ್ತದೆಯಲ್ಲವೆ? ಹಾಗೆಯೇ ಮಾರ್ಗದಲ್ಲಿ ಎಲ್ಲಾ ಅನುಕೂಲಗಳೂ ದೊರೆತು ಹಾದಿಯೂ ಸುಗಮವಾಗಿದ್ದರೆ ಬಹಳ ಆನಂದವೇ ಆದೀತು. ಹಿಂದಿನ ಕಾಲಕ್ಕೆ ಈಗಿನಂತೆ ಪ್ರಯಾಣಸೌಕರ್ಯಗಳಿರಲಿಲ್ಲ. ಕಳ್ಳಕಾಕರ ಹಾವಳಿಯು ಮಾರ್ಗಗಳಲ್ಲಿ ಸಂಭವಿಸುತ್ತಿತ್ತು. ಈಗಿನ ಕಾಲಕ್ಕೂ ಇಷ್ಟೆಲ್ಲ ಸೌಕರ್ಯಗಳಿದ್ದರೂ ವಾಹನಗಳಲ್ಲಿ ಒತ್ತಡ, ವಿಳಂಬವಾಗಿ ಬರುವಿಕೆ, ಮಧ್ಯಮಾರ್ಗದಲ್ಲಿ ಕೆಡುವದು ಹಾಗೂ ಸ್ವಲ್ಪ ಅಲಕ್ಷ್ಯವಾಗಿದ್ದರೂ ಹಣ, ಪದಾರ್ಥಗಳು– ಇವುಗಳನ್ನು ಕಳೆದುಕೊಳ್ಳುವದೇ ಮುಂತಾದ ನಾನಾ ಉಪದ್ರವಗಳಿದ್ದೇ ಇವೆ. ಇವುಗಳೆಲ್ಲ ಪರಿಹಾರವಾಗಿ ಪ್ರಯಾಣವು ಸುಪಥವಾಗಬೇಕಾದರೆ ಭಗವದನುಗ್ರಹವು ಬೇಕೇಬೇಕು.

ಇನ್ನು ಋದ್ಧ, ಋದ್ಧಿಗಳು. ಋದ್ಧವೆಂದರೆ ನಾವು ಮಾಡಿದ ಕರ್ಮಗಳ ಫಲವು ಬೆಳೆಯುತ್ತಾ ಹೋಗುವದು. ದಾನಧರ್ಮಗಳ ಫಲವು ಹೀಗೆ ಅಭಿವೃದ್ಧಿಯಾಗುವದು. ಋದ್ಧಿ ಎಂದರೆ ಮುಂದೆ ಮಾಡಬಹುದಾದ ಯಜ್ಞಯಾಗಾದಿಪುಣ್ಯಕರ್ಮಗಳ ಫಲವು. ಮನುಷ್ಯನು ಪುಣ್ಯವನ್ನು ಮಾಡಲು ಮನಸ್ಸು ಮಾಡಬೇಕಾದರೆ ಆತನಿಗೆ ಹಿಂದೆ ಮಾಡಿದ ಪುಣ್ಯದ ಫಲವು ಬೆಂಬಲವಾಗಿರಬೇಕು. ಇಲ್ಲದಿದ್ದರೆ ಪ್ರವೃತ್ತಿಯೇ ಉಂಟಾಗಲಾರದು. ಆದ್ದರಿಂದ ಋದ್ಧವೂ ಋದ್ಧಿಯೂ ಎರಡೂ ಅವಶ್ಯವಾಗಿದೆ. ಸರಪಳಿಯಂತೆ ಈ ಪುಣ್ಯಪರಂಪರೆಯು ಬೆಳೆಯುತ್ತಾ ಹೋಗಲಿ–ಎಂಬಿದು ಪ್ರಾರ್ಥನೆಯ ಸಾರವಾಗಿದೆ.

ಈಗ ಕ್ಲೃಪ್ತಕ್ಲೃಪ್ತಿಗಳನ್ನು ವಿಚಾರಮಾಡೋಣ. ಕ್ಲೃಪ್ತವೆಂದರೆ ಅರ್ಹವಾದ ಹಾಗೂ ತನ್ನ ಕೆಲಸಗಳಿಗೆ ಸಮರ್ಥವಾದ ದ್ರವ್ಯವು–ಎಂದು ಭಾಷ್ಯದಲ್ಲಿ ಬರೆದಿದೆ. ದ್ರವ್ಯ–ಎಂಬ ಶಬ್ದದಿಂದ ಹಣಕಾಸುಗಳು, ಮನೆಮಠಗಳು, ದವಸಧಾನ್ಯಗಳು, ಆಳುಕಾಳುಗಳೆಲ್ಲವನ್ನೂ

ತೆಗೆದುಕೊಳ್ಳಬೇಕು. ಇವು ನಮ್ಮ ಕೆಲಸಕಾರ್ಯಗಳಿಗೆ ತಕ್ಕದ್ದಾಗಿ ಅಣಿಯಾಗಿರಬೇಕಾದರೆ ಭಗವಂತನ ಅನುಗ್ರಹವು ಬೇಕು. ಇವುಗಳ ಮೂಲಕ ನಾವು ಪಡೆಯಬಹುದಾಗಿರುವ ಸುಖವೂ ಪರಮೇಶ್ವರನ ಅಧೀನವೇ ಆಗಿದೆ. ಹೇಗೆಂದರೆ: ನಾವೇನೋ ಸುಖಕ್ಕಾಗಿಯೇ ಇವುಗಳನ್ನು ಬಯಸಿ ಸಂಪಾದಿಸುತ್ತೇವೆ–ಎಂದಿಟ್ಟುಕೊಳ್ಳೋಣ. ಆದರೆ ಇವು ನಮಗೆ ಸುಖಕರವಾಗಿ ಆಗಬೇಕಾದರೆ ಪುಣ್ಯವು ಬೇಕು. ಉದಾಹರಣಗೆ : ಒಬ್ಬನು ಮನೆಯನ್ನು ಕಟ್ಟಿಸುತ್ತಾನೆಂದಿಟ್ಟುಕೊಳ್ಳೋಣ. ಆದರೆ ಅವನು ಸರಕಾರಿಯ ನೌಕರನಾಗಿದ್ದು ಊರಿಂದೂರಿಗೆ ತಿರುಗುತ್ತಿದ್ದರೆ ಆ ಮನೆಯಲ್ಲಿ ವಾಸಮಾಡುವ ಪುಣ್ಯವು ಅವನದಾಗಿರುವುದಿಲ್ಲ. ಅಥವಾ ಸ್ಥಳದಲ್ಲಿಯೇ ಇದ್ದರೂ ಸದಾ ಪ್ರವಾಸಿ ಯಾಗಿರುವವನಿಗೆ ಆತನ ಊಟ, ನಿದ್ರೆ–ಮುಂತಾದ ಸುಖಗಳಿಗೂ ಮನೆಯು ಒದಗುವದಿಲ್ಲ. ಹೀಗಾಗಬಾರದು. ಕ್ಲೃಪ್ತವು ಎಂದರೆ ಸುಖಕ್ಕಾಗಿ ಬಯಸಿದ ಸಾಮಗ್ರಿಗಳು ನಮಗೆ ಸುಖವುಂಟು ಮಾಡುವಂತೆ, ನಾವು ಅವುಗಳನ್ನು ಭೋಗಿಸುವಂತೆ ಆಗಲಿ–ಎಂಬಿದು ಇಲ್ಲಿ ಅಭಿಪ್ರಾಯ. ಕ್ಲೃಪ್ತಿ ಎಂದರೆ ತನ್ನ ಸ್ವಸಾಮರ್ಥ್ಯವು–ಎಂದರ್ಥ. ಒಂದು ವೇಳೆ ಪದಾರ್ಥಗಳು ಒದಗಿದರೂ ಸಾಲದು. ಅವುಗಳನ್ನು ಅನುಭವಿಸುವ ಶಕ್ತಿಯೂ ನಮಗೆ ಬೇಕು. ಒಬ್ಬ ಮಹನೀಯರು ಆಶೆಪಟ್ಟು ತಮ್ಮ ಹಳೆಯ ಮನೆಯನ್ನು ಮಹಡಿಮನೆಯಾಗಿ ಪರಿವರ್ತಿಸಿ ಆಧುನಿಕರೀತಿಯಿಂದ ಸಜ್ಜುಗೊಳಿಸಿದರು. ಆದರೆ ಕೆಲವೇ ದಿನಗಳಲ್ಲಿ ಅವರಿಗೆ ಹೃದಯರೋಗವುಂಟಾಗಿ ಡಾಕ್ಟರು 'ಮಹಡಿಯನ್ನು ಹತ್ತಲೇಬಾರದು' ಎಂದು ವಿಧಿಸಿಬಿಟ್ಟರು. ಅವರಿಗೆ ತಮ್ಮ ಮನೆಯಲ್ಲೇ ಮಹಡಿಯ ಮೇಲಿನ ವಾಸದ ಸುಖವು ದೊರೆಯಲೇ ಇಲ್ಲ. ಹೀಗೆ ಆಗಬಾರದೆಂದು ಕ್ಲೃಪ್ತಿ–ಸ್ವಸಾಮರ್ಥ್ಯವೂ ಬೇಕು–ಎಂದು ಪ್ರಾರ್ಥಿಸಲಾಗಿದೆ.

ಈಗ ಮತಿ–ಸುಮತಿಗಳನ್ನು ವಿಚಾರಮಾಡಬಹುದಾಗಿದೆ. ಮತಿ– ಎಂದರೆ ಪದಾರ್ಥಗಳ ನಿಶ್ಚಯವು. ಇದು ಸಾಧಾರಣವಾಗಿ ಎಲ್ಲರಿಗೂ

ಇದ್ದುಕೊಂಡೇ ಇರುವದು. ಆದರೆ ಸಾಮಾನ್ಯವಾದ ಮತಿಯು ಪೂರ್ಣ ಜೀವನಕ್ಕೆ ಸಾಲದು. ಏಕೆಂದರೆ ಅದು ಅನೇಕ ಸಂದರ್ಭಗಳಲ್ಲಿ ಗಹನವಾದ ವಿಷಯಗಳಲ್ಲಿ ಹಿಮ್ಮೆಟ್ಟಿಬಿಡುತ್ತದೆ. ಆದ್ದರಿಂದ ಸೂಕ್ಷ್ಮವಾದ ಹಾಗೂ ಸ್ಥಿರವಾದ ಮತಿಯೇ ಬೇಕು. ಕಾರ್ಯಾರಂಭದಲ್ಲಿ ಮತಿಯು ನಿಶ್ಚಲವಾಗಿಲ್ಲದೆ ಹೋದರೆ ಫಲಸಿದ್ಧಿಯಾಗಲಾರದು. ಕೆಲವು ವೇಳೆ ನಷ್ಟವೂ ಆಗುವದು. ಎದುರಿಗೇ ಪದಾರ್ಥಗಳಿದ್ದರೂ ಅನುಕೂಲವೂ ಸೌಕರ್ಯವೂ ದೊರಕಿದರೂ ಎಷ್ಟೋ ಜನರು ಮನಸ್ಸನ್ನೇ ಮಾಡದೆ ಬಂದ ಅವಕಾಶಗಳನ್ನೆಲ್ಲ ಕಳೆದುಕೊಂಡುಬಿಡುತ್ತಾರೆ. ಅನಂತರ 'ಅಯ್ಯೋ, ಕಾಲವು ಮಿಂಚಿಹೋಯಿತು' ಎಂದು ಕೊರಗುತ್ತಾರೆ. ಇದು ಸರಿಯಲ್ಲ. ಹನುಮಂತನ ಮತಿಯನ್ನು ನಾವು ಆದರ್ಶವಾಗಿ ತೆಗೆದುಕೊಳ್ಳಬೇಕು. ಏಕೆಂದರೆ ಅವನು ಬುದ್ಧಿವಂತರಲ್ಲೆಲ್ಲ ಶ್ರೇಷ್ಠನು. ಸಮಯಕ್ಕೆ ತಕ್ಕಂತೆ ತನ್ನ ಬುದ್ಧಿಯನ್ನು ಉಪಯೋಗಮಾಡುತ್ತಿದ್ದನು. ಮತಿದೈನ್ಯದಿಂದ ಎಂದೂ ಹಿಂದೆ ಬೀಳುತ್ತಿರಲಿಲ್ಲ. ಆತನ ಕಾರ್ಯಗಳಲ್ಲಿ ಅವನ ಉತ್ತಮವಾದ ನಿರ್ಣಯಗಳೇ ಸಹಾಯಕವಾಗಿದ್ದವು. ಮತಿಯೊಂದು ಚೆನ್ನಾಗಿದ್ದರೆ ಎಲ್ಲಿ ಬೇಕಾದರೂ ಜಯಿಸಿಕೊಂಡು ಬರಬಹುದು. ಇಂಥ ಸನ್ಮತಿಯು ಭಗವಂತನ ಕೃಪೆಯಿಂದಲೇ ದೊರಕಬೇಕಾಗಿದೆ. ಹಾಗೆಯೇ ಸುಮತಿಯೂ ಬೇಕಾದದ್ದೇ ಆಗಿದೆ. ಸುಮತಿ ಎಂದರೆ ಜಟಿಲವಾದ ರಾಜಕಾರ್ಯಗಳಂಥ ಸನ್ನಿವೇಶದಲ್ಲಿಯೂ ನಿರ್ಣಯವನ್ನು ಕೈಗೊಳ್ಳುವದು. ಇದು ಬಹಳ ಕಷ್ಟಕರವಾದುದು. ಸಾವಿರಾರು ಪ್ರಜೆಗಳ ಆಗುಹೋಗುಗಳ ಮೇಲೆ ಪರಿಣಾಮವನ್ನುಂಟುಮಾಡುವಂಥ ಅನೇಕ ಸಂದರ್ಭಗಳನ್ನು ಬಹಳ ಎಚ್ಚರಿಕೆಯಿಂದಲೂ ದೂರದೃಷ್ಟಿಯಿಂದಲೂ ಕೂಡಿದ ತೀರ್ಮಾನಗಳನ್ನು ಕೈಗೊಂಡು ಜಾರಿಗೆ ತರಬೇಕಾಗುತ್ತದೆ. ಇಂಥ ಸಂನಿವೇಶಗಳಲ್ಲಿ 'ಸುಮತಿ'ಯು ಬೇಕೇಬೇಕು. ಇದೂ ಕೂಡ ಭಗವಂತನ ದಯೆಯಿಂದಲೇ ದೊರಕಬೇಕಾಗಿದೆ.

ಈ ಸಂದರ್ಭದಲ್ಲಿ ಶೈವಪುರಾಣದಲ್ಲಿ ವರ್ಣಿಸಿರುವ ಒಂದು ಉಪಖ್ಯಾನವನ್ನು ಉದಾಹರಿಸಬಹುದಾಗಿದೆ. ಹಿಮಾಚಲನು ತನ್ನ ಮಗಳಾದ ಪಾರ್ವತಿಯನ್ನು ಪರಮೇಶ್ವರನಿಗೆ ಕೊಟ್ಟು ವಿವಾಹ ಮಾಡಿದ ಕಥೆಯನ್ನು 'ಗಿರಿಜಾ ಕಲ್ಯಾಣ' ವೆಂದು ಕರೆಯುತ್ತಾರೆ. ಗಿರಿಜೆಯು ಪರಮೇಶ್ವರನೇ ತನಗೆ ಪತಿಯಾಗಬೇಕೆಂದು ಬಯಸಿ ಅದಕ್ಕಾಗಿ ಕಠಿನವಾದ ತಪಸ್ಸನ್ನೇ ಮಾಡಿದಳು. ಶಿವನಾದರೊ, ತಾನೂ ತಪಸ್ಸನ್ನೇ ಕೈಗೊಂಡವನಾಗಿದ್ದು ಆ ತಪಸ್ಸಿಗೆ ವಿಘ್ನಮಾಡಲು ಬಂದ ಕಾಮನನ್ನು ಸುಟ್ಟುಬೂದಿಮಾಡಿದ್ದನು. ಇಂಥ ಸಂದರ್ಭದಲ್ಲಿ ಗಿರಿಜೆಯ ಆಸೆಯು ನೆರವೇರುವದು ಎಷ್ಟು ಕಠಿನವಾದದ್ದೆಂದು ಬೇರೆಯಾಗಿ ಹೇಳಬೇಕಾಗಿಲ್ಲ. ಆದರೂ 'ಸುಮತಿ' ಯಾದ ಗಿರಿಜೆಯು ತನ್ನ ನಿರ್ಣಯವನ್ನು ಎಂಥ ಕಷ್ಟಪರಿಸ್ಥಿತಿಯಲ್ಲಿಯೂ ಬದಲಾಯಿಸದೆ ತಪಸ್ಸಿನ ಬಲದಿಂದ ಕಡೆಗೆ ಪರಮೇಶ್ವರನನ್ನೇ ಸೇರಿದಳು. ಹೀಗೆಯೇ ಪ್ರತಿಯೊಬ್ಬರೂ ತಮ್ಮ 'ಬುದ್ಧಿ'–ಎಂಬ ಗಿರಿಜೆಯನ್ನು 'ಆತ್ಮ'– ನೆಂಬ ಪರಮೇಶ್ವರನಿಗೆ ಕೊಟ್ಟು ಕೃತಾರ್ಥರಾಗಲು ಯತ್ನಿಸಬೇಕು. ಆಗ ನಿಜವಾದ ಮತಿ–ಸುಮತಿಗಳ ಪ್ರಾಪ್ತಿಯಾದಂತಾಗುವದು. ವ್ಯವಹಾರದಲ್ಲಿ ಕೂಡ ಮೊದಲು ಸದ್ಬುದ್ಧಿಯಿಂದ ಭಗವಂತನನ್ನು ಪ್ರಾರ್ಥಿಸಿದರೆ ಅನಂತರ ನಾವು ಕೈಗೊಳ್ಳುವ ಎಲ್ಲಾ ಕಾರ್ಯಗಳಲ್ಲಿಯೂ ಆ ದೇವನ ಪ್ರೇರಣೆಯು ದೊರಕಿ ಜಯಪ್ರದವಾಗಿ ಕಾರ್ಯಗಳು ನೆರವೇರುವವು. ಇಂಥ ಮತಿ–ಸುಮತಿಗಳು ನಮಗೆ 'ಯಜ್ಞ'ಕ್ಕಾಗಿ ಎಂದರೆ ಭಗವಂತನ ಆರಾಧನೆಗಾಗಿ ಉಂಟಾಗಲಿ! ಎಂದು ಇಲ್ಲಿ ಪ್ರಾರ್ಥಿಸಿದೆ.

## 6. ಭದ್ರಂ ಚ ಮೇ ಶ್ರೇಯಶ್ಚ ಮೇ

ಚಮಕಾಧ್ಯಾಯದ ಮೂರನೆಯ ಅನುವಾಕವನ್ನು ಈಗ ವಿಚಾರಮಾಡಬೇಕಾಗಿದೆ.

**ಶಂ ಚ ಮೇ ಮಯಶ್ಚ ಮೇ ಪ್ರಿಯಂ ಚ ಮೇऽನುಕಾಮಶ್ಚ ಮೇ ಕಾಮಶ್ಚ ಮೇ ಸೌಮನಸಶ್ಚ ಮೇ ಭದ್ರಂ ಚ ಮೇ ಶ್ರೇಯಶ್ಚ ಮೇ ವಸ್ಯಶ್ಚ ಮೇ ಯಶಶ್ಚ ಮೇ ಭಗಶ್ಚ ಮೇ ದ್ರವಿಣಂ ಚ ಮೇ ಯಂತಾ ಚ ಮೇ ಧರ್ತಾ ಚ ಮೇ ಕ್ಷೇಮಶ್ಚ ಮೇ ಧೃತಿಶ್ಚ ಮೇ ವಿಶ್ವಂ ಚ ||**

"ಸುಖವೂ ಮಯವೂ ಪ್ರಿಯವೂ ಅನುಕಾಮವೂ ಕಾಮವೂ ಸೌಮನಸ್ಯವೂ ಭದ್ರವೂ ಶ್ರೇಯಸ್ಸೂ ವಸ್ಯವೂ ಯಶಸ್ಸೂ ಭಗವೂ ದ್ರವಿಣವೂ ಯಂತೃವೂ ಧರ್ತನೂ ಕ್ಷೇಮವೂ ಧೃತಿಯೂ ವಿಶ್ವವೂ ಯಜ್ಞಕ್ಕಾಗಿ ನನಗೆ ಒದಗಲಿ!"

ಮನುಷ್ಯನು ಬಯಸುವ ಸುಖವು ಎರಡು ಬಗೆಯದಾಗಿರುವದು. ಐಹಿಕ–ಆಮುಷ್ಮಿಕಗಳೆಂದು ಅವುಗಳನ್ನು ಕರೆಯುವರು. ಐಹಿಕವೆಂದರೆ ಇಹಲೋಕದಲ್ಲಿ ಬದುಕಿರುವಾಗಲೇ ಪಡೆಯಬಹುದಾದಂಥ ಪುತ್ರ, ಪಶು, ಧನ, ಕನಕ, ಅಧಿಕಾರ, ಕೀರ್ತಿ–ಮುಂತಾದವುಗಳು. ಆಮುಷ್ಮಿಕವೆಂದರೆ ಸತ್ತಮೇಲೆ ಪರಲೋಕದಲ್ಲಿ ಪಡೆಯಬಹುದಾದ ಸ್ವರ್ಗಾದಿಸುಖಗಳು. ಈ ಎರಡೂ ನನಗೆ ಉಂಟಾಗಲಿ! ಎಂದು ಇಲ್ಲಿ ಪ್ರಾರ್ಥಿಸಿದೆ. ಆದರೆ ಸುಖಗಳ ಬಯಕೆಯು ತನ್ನ ಹಕ್ಕಾದರೂ ಮತ್ತೊಬ್ಬರನ್ನು ಹಿಂಸಿಸಿ ಅಥವಾ ನಾಶಗೊಳಿಸಿ ಅವುಗಳನ್ನು ಪಡೆಯುವದು ಅಧರ್ಮವು. ಉದಾಹರಣೆಗೆ ರಾವಣನು ದೇವತೆಗಳ ವಸ್ತುಗಳನ್ನು ಹಾಗೂ ಲೋಕಗಳನ್ನು ಕೂಡ ತನ್ನ ಸುಖಕ್ಕಾಗಿ ಕಸಿದುಕಂಡಿದ್ದನು. ಅದು ನ್ಯಾಯವಲ್ಲ. ಆದ್ದರಿಂದ ಸುಖವೆಂಬುದು ಯಜ್ಞಕ್ಕಾಗಿ ಎಂದರೆ ದೇವತಾರಾಧನೆಗೆ ಸಹಾಯಕವಾಗಿ ಪ್ರಾಪ್ತವಾಗಲಿ! ಎಂಬಿದು ಈ ಪ್ರಾರ್ಥನೆಯ ಅಭಿಪ್ರಾಯ. ಮಯ ಎಂದರೆ ಆಮುಷ್ಮಿಕಸುಖವೆಂದರ್ಥ. ಹಾಗೆಯೇ ಪ್ರಿಯವೂ ಅನುಕಾಮವೂ ನನಗೆ ಉಂಟಾಗಲಿ–ಎಂಬಿದು ಇನ್ನೊಂದು ಬೇಡಿಕೆ. ಇವೆರಡೂ ಐಹಿಕವೇ ಆಗಿರುತ್ತದೆ. ಪ್ರಿಯವೆಂದರೆ ಇಷ್ಟವಾದದ್ದು; ಅನುಕಾಮವೆಂದರೆ ಬಯಸಲು ಯೋಗ್ಯವೂ ಎಟುಕು

ವಂಥದ್ದೂ ಆಗಿರುವದು. ಹೇಗೆಂದರೆ ಪ್ರಿಯವು ಒಬ್ಬೊಬ್ಬನಿಗೆ ಒಂದೊಂದು ರೀತಿಯಾಗಿರುತ್ತದೆ. ಒಬ್ಬರಿಗೆ ಸಿಹಿ, ಮತ್ತೊಬ್ಬರಿಗೆ ಹುಳಿ, ಒಬ್ಬರಿಗೆ ಸಂಗೀತ, ಮತ್ತೊಬ್ಬರಿಗೆ ಕಾವ್ಯನಾಟಕಗಳು, ಹೀಗೆ ಅವರವರಿಗೆ ಪ್ರಿಯವಾದದ್ದು ಬೇರೆಬೇರೆಯಾಗಿರುವವು. ಅನುಕಾಮವೆಂದರೆ ನಾವೆಲ್ಲರೂ ಒಟ್ಟಿಗೆ ಬಯಸಬಹುದಾದ ಸುಭಿಕ್ಷ, ಆರೋಗ್ಯ, ವಿದ್ಯಾವಿನಯಾದಿಗಳು, ಒಳ್ಳೆಯ ಸಹವಾಸ–ಮುಂತಾದವು. ಇವೆಲ್ಲವೂ ನನಗೆ ಯಜ್ಞನಿಮಿತ್ತವಾಗಿಯೇ ಒದಗಲಿ–ಎಂದು ಕೇಳಿಕೊಂಡಿದೆ. ಕಾಮವೆಂದು ಮತ್ತೊಮ್ಮೆ ಕೇಳಿರುವದು ಆಮುಷ್ಮಿಕ ಫಲರೂಪವಾದದ್ದು. ಮನುಷ್ಯನ ಬಯಕೆಗಳಲ್ಲಿ ಬ್ರಹ್ಮಲೋಕ ಪರ್ಯಂತವಾದ ಸುಖಗಳೂ ಸೇರಿರುತ್ತವೆ. ಕಾಮವಿಲ್ಲದಿದ್ದರೆ ಕರ್ಮಗಳಿಗೆ ಪ್ರವೃತ್ತಿಯೇ ಇರುವದಿಲ್ಲ. ನಾಲ್ಕು ಪುರುಷಾರ್ಥಗಳಲ್ಲಿ ಒಂದನ್ನಾಗಿ ಕಾಮವನ್ನು ಸೇರಿಸಿರುವದು ಗ್ರಾಹ್ಯವೆಂಬ ಉದ್ದೇಶದಿಂದಲೇ ಆಗಿದೆ. ಇಂಥ ಕಾಮವು ನನಗೆ ಯಜ್ಞನಿಮಿತ್ತವಾಗಿ ಉಂಟಾಗಲಿ ಎಂದಭಿಪ್ರಾಯ.

ಈಗ **ಸೌಮನಸ**ವೆಂದರೇನು? ವಿಚಾರಮಾಡೋಣ. ವ್ಯಾಖ್ಯಾನದಲ್ಲಿ ಈ ಶಬ್ದಕ್ಕೆ 'ಮನಃಸ್ವಾಸ್ಥ್ಯವನ್ನುಂಟಮಾಡುವ ಬಂಧುವರ್ಗ'ವೆಂದು ಅರ್ಥ ಮಾಡಿರುತ್ತದೆ. ಬಂಧು ಎಂಬ ಶಬ್ದವೇನೋ ಒಳ್ಳೆಯ ಅರ್ಥದಲ್ಲಿ ಪ್ರಯೋಗಿಸಲ್ಪಟ್ಟಿದೆಯಾದರೂ ಎಷ್ಟೋ ಜನರ ಅನುಭವದಲ್ಲಿ ಅದು ಕಹಿಯಾದ ಪರಿಣಾಮವನ್ನೇ ಉಂಟುಮಾಡಿರುತ್ತದೆ. 'ನೆಂಟರು ದೂರ ಇರಬೇಕು; ನೀರು ಹತ್ತಿರ ಇರಬೇಕು' ಎಂದು ಕನ್ನಡದಲ್ಲಿ ಒಂದು ಗಾದೆಯೂ ಪ್ರಸಿದ್ಧವಾಗಿದೆ. ರಾಮಾಯಣದಲ್ಲಿ ರಾಮನು ಒಂದು ಕಡೆ 'ಭ್ರಾತೃಗಳೆಂದರೆ ಎಲ್ಲರೂ ಭರತನಂಥವರೇ ಇರುವದಿಲ್ಲ' ಎಂದಿರುತ್ತಾನೆ. ಹೀಗೆ ಬಂಧುವರ್ಗವು ಎರಡು ರೀತಿಯಲ್ಲಿರುವದು–ಕಂಡು ಬಂದಿದೆ. ಇಲ್ಲಿ ಬಂಧು ವರ್ಗವು ನನಗೆ ಅನುಕೂಲವಾಗಿಯೂ ಮನಸ್ಸಿಗೆ ಸಮಾಧಾನವುಂಟು ಮಾಡುವಂಥದ್ದಾಗಿಯೂ ಇರಲೆಂದು ಪ್ರಾರ್ಥಿಸಿದೆ. ಎಷ್ಟೋ ವೇಳೆಯಲ್ಲಿ ಧರ್ಮಾತ್ಮರಾದವರಿಗೆ ಕೂಡ ಹಿತಕರವಾದ ಬಂಧುವರ್ಗವಿರುವದಿಲ್ಲ. ಅದು

ದೊರೆಯಬೇಕಾದರೆ ಪೂರ್ವಜನ್ಮದ ಪುಣ್ಯವು ಬೇಕೆಂದು ಹೇಳ ಬೇಕಾಗುತ್ತದೆ. ಅಂತೂ ಉತ್ತಮವಾದ ಬಂಧುವರ್ಗವಿರಲಿ–ಎಂಬಿದು 'ಸೌಮನಶ್ಚ ಮೇ' ಎಂಬಿದರ ಅಭಿಪ್ರಾಯ.

ಇನ್ನು ಭದ್ರವೂ ಶ್ರೇಯಸ್ಸೂ ನನಗೆ ಉಂಟಾಗಲಿ! ಎಂಬ ಪ್ರಾರ್ಥನೆಯನ್ನು ನೋಡೋಣ. ಭದ್ರವೆಂದರೆ ರಮಣೀಯವಾದದ್ದು ಎಂದು ವ್ಯಾಖ್ಯಾನವಿದೆ. **ಶ್ರೇಯಸ್ಸೆಂದರೆ** ಪರಲೋಕಹಿತವಾದದ್ದು. ಇವೆರಡೂ ಯಜ್ಞಕ್ಕಾಗಿ ಒದಗಲಿ–ಎಂದು ಪ್ರಾರ್ಥಿಸಿದೆ. ಲೋಕದಲ್ಲಿ ಮನೋಹರ, ರಮಣೀಯ ಎಂದು ನಾವು ನಮ್ಮ ಅಂತಃಕರಣಕ್ಕೆ ಮೆಚ್ಚಾದದ್ದನ್ನು ಕರೆಯುವೆವು. ಆದರೆ ಆ ವಸ್ತುಗಳು ನಮ್ಮ ಮನಸ್ಸನ್ನು 'ಹರಣ' ಎಂದರೆ ಕದ್ದುಕೊಂಡೇ ಹೋಗಿಬಿಡುವಂಥವಾದರೆ ನಮಗೆ ಅಪಾಯವೂ ಆಗಬಹುದು. ಕೆಲವು ಯುವಕರು ಬೀದಿಯಲ್ಲಿ ಹೋಗುವಾಗ ಯಾವದೋ ಗೋಡೆಯ ಮೇಲಿರುವ ಚಿತ್ರದ ಕಡೆಗೇ ನೋಡುತ್ತಾ ಅದರಿಂದ ಅಪಹೃತಮನಸ್ಸುಳ್ಳವರಾಗಿ ಅಪಘಾತಗಳಿಗೆ ಗುರಿಯಾಗುವದೂ ಉಂಟು. ಹಾಗಾಗಬಾರದು. ಭದ್ರವು ಪರಿಣಾಮದಲ್ಲಿಯೂ ಮಂಗಳಕರವಾಗಿರಬೇಕೆಂಬುದು ಮುಖ್ಯ. ಶ್ರೇಯಸ್ಸೆಂಬುದಂತೂ ಯಾವಾಗಲೂ ಪರಲೋಕಗಳಲ್ಲಿ ಪಡೆಯುವ ಆನಂದಗಳಿಗೇ ವಾಚ್ಯವಾದ ಶಬ್ದವಾಗಿದೆ. ಆನಂದಗಳಲ್ಲೆಲ್ಲ ನಿರತಿಶಯವಾದ ಆನಂದಕ್ಕೆ ನಿಃಶ್ರೇಯಸವೆಂದು ಹೆಸರಿದೆ. ಹೀಗೆ ಶ್ರೇಯಸ್ಸೆಂಬುದೂ ಯಜ್ಞಯಾಗಾದಿ ಸತ್ಕರ್ಮಗಳಿಂದಲೇ ದೊರೆಯತಕ್ಕದ್ದಾದ್ದರಿಂದ ಅದನ್ನು ಕೇಳಿಕೊಂಡಿದೆ. ವಸ್ಯವೆಂದರೆ ವಾಸಕ್ಕೆ ಯೋಗ್ಯವಾದ ಜಾಗವು. ಹಾಗೂ ಕರ್ಮಾನುಷ್ಠಾನಗಳಿಗೆ ತಕ್ಕ ಸ್ಥಳವು. ಅದು ಕೂಡ ಭಗವದನುಗ್ರಹದಿಂದಲೇ ದೊರೆಯಬೇಕು. ಸರಕಾರಿಯ ಕೆಲಸದಲ್ಲಿರುವ ಒಬ್ಬ ನಿಷ್ಠನಾದ ಅಧ್ಯಾತ್ಮ ಸಾಧಕನಿಗೆ ಕುಗ್ರಾಮ ವಾಸವು ಒದಗಿಬಿಟ್ಟರೆ ಬಹಳ ನೋವಾಗುತ್ತದೆ. ಅದರ ಬದಲು ಸಜ್ಜನರ ಗುಂಪಿನಲ್ಲಿ ವಾಸಿಸಲು ಅವಕಾಶವು ದೊರೆತರೆ ಸಂತೋಷವಾದೀತು. ಹಾಗೆ ಸಿಗಲಿ! ಎಂಬಿದು ಪ್ರಾರ್ಥನೆಯ ಸಾರ.

ಈಗ **ಯಶ–ಭಗ–ದ್ರವಿಣ**ಗಳನ್ನು ವಿಚಾರಮಾಡೋಣ. **ಯಶಸ್ಸೆಂ**ದರೆ ಕೀರ್ತಿಯು. ಇದು ಸತ್ಕಾರ್ಯಗಳಿಂದ ಮಾತ್ರ ದೊರಕತಕ್ಕದ್ದು. **ಭಗ**ವೆಂದರೆ ಸೌಭಾಗ್ಯವು. ಸೌಭಾಗ್ಯವು ನಮ್ಮ ಶರೀರಸಂಪತ್ತಿಯಿಂದ ಹಿಡಿದು ನಮಗೆ ಉಪಯುಕ್ತವಾದ ಎಲ್ಲಾ ವಸ್ತುಗಳಲ್ಲಿಯೂ ಇದ್ದುಕೊಂಡಿದೆ. ಹೇಗೆಂದರೆ: ಶರೀರವು ಗಟ್ಟಿಮಟ್ಟಾಗಿದ್ದು ಇಂದ್ರಿಯಪಾಟವ, ಬುದ್ಧಿ ಕೌಶಲಗಳೂ ಸೇರಿದರೆ, ಆರೋಗ್ಯವೂ ಪೂರ್ಣವಾಗಿದ್ದರೆ–ಅದಕ್ಕಿಂತ ಹೆಚ್ಚಿನ ಸೌಭಾಗ್ಯವೇನಿದ್ದೀತು? ಹಾಗೆಯೇ ನಮಗೆ ಸಂಬಂಧಪಟ್ಟ ಹಾಗೂ ಬೇಕಾದ ವಸ್ತುಗಳು ಕೂಡ ಉತ್ತಮರೀತಿಯದಾಗಿದ್ದು ನಮಗೆ ಅನುಕೂಲ ವಾಗಿದ್ದರೆ  ಸೌಭಾಗ್ಯವೇ ಸರಿ, ಇದೇ ಭಗವು. ಹಾಗೆಯೇ ದ್ರವಿಣವು. **ದ್ರವಿಣ**ವೆಂದರೆ ಧನವು. ಆದರೆ ಈಗಿನ ಕಾಲದಲ್ಲಿ ಈ ಧನಶಬ್ದಕ್ಕೆ ಕರೆನ್ಸಿ ನೋಟುಗಳೆಂಬ ಅರ್ಥವು ಹೆಚ್ಚು ಪ್ರಚಲಿತವಾಗಿದೆ. ಅದಕ್ಕಿಂತ ನಾವು ಅವಶ್ಯವಾಗಿ ಉಪಯೋಗಿಸುವ ಆಹಾರ ಸಾಮಗ್ರಿಗಳು, ಧಾನ್ಯಗಳು, ವಸ್ತ್ರಾದಿಗಳು, ಒಡವೆ ಮುಂತಾದವುಗಳನ್ನು ಧನವೆನ್ನುವರು. ಮತ್ತು ಗೋವುಗಳು, ಆಳು, ಜನಸಂಪತ್ತಿಗಳನ್ನೂ ಧನವೆನ್ನುತ್ತಾರೆ. ಇವೆಲ್ಲ ಸೇರಿ ದ್ರವಿಣವೆನಿಸುವವು. ಐಶ್ವರ್ಯವು ಯಜ್ಞಕ್ಕಾಗಿ ನನಗೆ ಉಂಟಾಗಲಿ! ಎಂದು ಕೇಳಿಕೊಂಡಿದೆ.

ಈಗ **ಯಂತಾ–ಧರ್ತಾ**–ಇವರುಗಳನ್ನು ಕೊಡೆಂದು ಕೇಳುವ ಪ್ರಾರ್ಥನೆಯನ್ನು ನೋಡೋಣ. **ಯಂತಾ** ಎಂದರೆ ನಮ್ಮನ್ನು ನಿಯಮನ ಮಾಡುವ ತಂದೆ, ಗುರು–ಮುಂತಾದವರು. ಹಿರಿಯರು ಮಾರ್ಗದರ್ಶನ ಮಾಡಿದಲ್ಲಿ ನಮ್ಮ ಜೀವನವು ಸುಖಮಯವಾಗುವದು. ಅಂಥವರು ದೊರಕುವದಕ್ಕೂ ಪುಣ್ಯವು ಬೇಕು. ಚಿಕ್ಕಂದಿನಲ್ಲೇ ತಂದೆಯನ್ನು ಕಳೆದುಕೊಂಡು ಸರಿಯಾದ ಪಾಲಕಪೋಷಕರಿಲ್ಲದೆ ಜೀವನದಲ್ಲಿ ಕಷ್ಟಪಡುವವರನ್ನು ನಾವು ನೋಡುತ್ತಿದ್ದೇವೆ. ಹಾಗಾಗದಿರಲಿ–ಎಂದು ಕೇಳಲಾಗಿದೆ. **ಧರ್ತಾ**–ಎಂದರೆ ತಂದೆಯಲ್ಲದೆ ಬೇರೆಯ ಪೋಷಕನ

ಅಧೀನದಲ್ಲಿ ಒಂದು ವೇಳೆ ನಾವು ಬೆಳೆಯಬೇಕಾಗಿಬಂದರೂ ಆತನು ತನ್ನ ಮಕ್ಕಳಂತೆಯೇ ನಮ್ಮನ್ನು ಪೋಷಿಸಿ ಪುರೋಭಿವೃದ್ಧಿಗೆ ತರಬೇಕಾದರೆ ದೈವಾನುಗ್ರಹವು ಬೇಕು. ಅದು ಉಂಟಾಗಲಿ! ಎಂಬಿದು ಅಭಿಪ್ರಾಯ. ಹಾಗೆಯೇ ಕ್ಷೇಮ, ಧೃತಿಗಳು ಒದಗಿವೆ! ಎಂದೂ ಕೇಳಲಾಗಿದೆ. ಕ್ಷೇಮವೆಂದರೆ ಸಂಪಾದಿಸಿದ್ದನ್ನು ಕಾಪಾಡಿಕೊಳ್ಳುವಿಕೆ. ಇದೂ ಈಗಿನ ಕಾಲಕ್ಕೆ ಕಷ್ಟವೇ ಆಗಿದೆ. ನಮ್ಮ ಹಿಂದಿನವರು ಸಂಪಾದಿಸಿಟ್ಟದ್ದನ್ನು ಈಗಾಗಲೇ ನಮ್ಮಲ್ಲನೇಕರು ಕಳೆದುಕೊಂಡಿದ್ದೇವೆ. ಇದು ಚಮೆಯನ್ನು ಅಧ್ಯಯನ ಮಾಡದೆ ಶಿವಪೂಜೆಯನ್ನು ಮಾಡದೆ ಇದ್ದುದರ ಫಲವಾಗಿರಬಹುದು. ಇರಲಿ; ಈಗ ಉಳಿದಿರುವದನ್ನಾದರೂ ಕಾಪಾಡಿಕೊಳ್ಳಬೇಕು. ಮತ್ತು ಆಪತ್ತು ಬಂದಾಗಲೂ ಧೃತಿಯನ್ನು ಕಳೆದುಕೊಳ್ಳದೆ ಇರಬೇಕು. ಇನ್ನು ವಿಶ್ವವೂ ನನಗಾಗಲಿ! ಎಂದರೆ ಎಲ್ಲಾ ಜನರ ನಿಮಿತ್ತವಾದ ಅನುಕೂಲವೂ ಉಂಟಾಗಲಿ–ಎಂದರ್ಥ. ಒಂದು ಊರಿನಲ್ಲಿ ನಾವು ಕ್ಷೇಮದಿಂದಿರಬೇಕಾದರೆ ಎಲ್ಲರ ಸಹಕಾರವೂ ಸಹಾಯವೂ ಬೇಕು. ಹಾಗೆ ಒದಗಲಿ–ಎಂದು ಪ್ರಾರ್ಥಿಸಿದೆ.

---

## 7. ಋತಂ ಚ ಮೇಽಮೃತಂ ಚ ಮೇ

ಚಮಕಾಧ್ಯಾಯದ ಮೂರನೆಯ ಅನುವಾಕದ ಉಳಿದ ಭಾಗವನ್ನು ಈಗ ವಿಚಾರಮಾಡಬೇಕಾಗಿದೆ.

**ಮೇ ಮಹಶ್ಚ ಮೇ ಸಂವಿಚ್ಚ ಮೇ ಜ್ಞಾತ್ರಂ ಚ ಮೇ ಸೂಶ್ಚಮೇ ಪ್ರಸೂಶ್ಚ ಮೇ ಸೀರಂ ಚ ಮೇ ಲಯಶ್ಚ ಮ ಋತಂ ಚ ಮೇಽಮೃತಂ ಚ ಮೇಽಯಕ್ಷ್ಮಂ ಚ ಮೇಽನಾಮಯಚ್ಚ ಮೇ ಜೀವಾತುಶ್ಚ ಮೇ ದೀರ್ಘಾಯುತ್ವಂ ಚ ಮೇಽನಮಿತ್ರಂ ಚ ಮೇಽಭಯಂ ಚ ಮೇ ಸುಗಂ ಚ ಮೇ ಶಯನಂ ಚ ಮೇ ಸೂಷಾ ಚ ಮೇ ಸುದಿನಂ ಚ ಮೇ ॥**

"ಮಹವೂ ಸಂವಿತ್ತೂ ಜ್ಞಾತ್ರವೂ ಸೂ–ಪ್ರಸೂಗಳೂ ಸೀರಲಯಗಳೂ ಋತ–ಅಮೃತಗಳೂ ಆಯಕ್ಷ್ಮವೂ ಅನಾಮಯವೂ ಜೀವಾತುವೂ ದೀರ್ಘಾಯುತ್ವವೂ ಅನಮಿತ್ರವೂ ಅಭಯವೂ ಸುಗ–ಶಯನಗಳೂ ಸೂಷಾ– ಸುದಿನಗಳೂ ನನಗೆ ಯಜ್ಞಕ್ಕಾಗಿ ಉಂಟಾಗಲಿ!"

**ಮಹಸ್ಸೆಂದರೆ** ಪೂಜೆಯು. ಪ್ರತಿಯೊಬ್ಬನೂ ತನ್ನ ಯೋಗ್ಯತೆಗೆ ತಕ್ಕಂತೆ ಗೌರವವನ್ನು ಬಯಸುತ್ತಾನೆ. ಆದರೆ ಎಷ್ಟೋ ವೇಳೆ ಮನುಷ್ಯನ ಯೋಗ್ಯತೆಯನ್ನು ಗುರುತಿಸುವವರಿಲ್ಲದೆ ಅವನು ನಿರಾಶನಾಗುವುದೂ ಉಂಟು. ಈಗಿನ ರಾಜಕೀಯದ ವಾತಾವರಣದಲ್ಲಿ ಎಲ್ಲಾ ಕ್ಷೇತ್ರಗಳಲ್ಲಿಯೂ ಇಂಥ ಘಟನೆಗಳು ಸಂಭವಿಸಿ "ಪ್ರತಿಭಾಪಲಾಯನ"ದ ಸುದ್ದಿಗಳನ್ನು ಪತ್ರಿಕೆಗಳಲ್ಲಿ ಓದುತ್ತಿರುವೆವಷ್ಟೆ! ಹಾಗಾಗಬಾರದು; ಸಮಾಜದಲ್ಲಿ ತಕ್ಕ ಗೌರವವು ನನಗೆ ದೊರೆಯುವಂತಾಗಲಿ! ಎಂದು ಪ್ರಾರ್ಥಿಸಿದೆ. **ಸಂವಿತ್ತೆಂದರೆ** ವೇದ ಶಾಸ್ತ್ರಾದಿಗಳ ತಿಳಿವಳಿಕೆಯು. ಇವುಗಳಿಲ್ಲದೆ ಯಾವನೂ ಶ್ರೇಯಸ್ಸಂಪಾದನೆ ಮಾಡಲಾಗುವದಿಲ್ಲ. ಒಂದೊಂದು ವೇಳೆ ಕಲಿಯುವ ಆಸೆಯಿದ್ದರೂ ಹೇಳಿಕೊಡುವವರು ಸಿಗುವದಿಲ್ಲ; ಅಥವಾ ತನಗೇ ವಿಘ್ನಗಳುಂಟಾಗಿ ಇಂಥ ಸಚ್ಛಾಸ್ತ್ರಗಳ ಅಭ್ಯಾಸವು ದಕ್ಕದೆ ಹೋಗಬಹುದು. ಹಾಗಾಗದಿರಲಿ–ಎಂದು ಪ್ರಾರ್ಥಿಸಲಾಗಿದೆ. **ಜ್ಞಾತ್ರವೆಂದರೆ** ಆಜ್ಞೆಮಾಡುವ ಸಾಮರ್ಥ್ಯವು; ಅಧಿಕಾರವೆಂದರ್ಥ. ಎಲ್ಲಾ ಕೆಲಸಗಳನ್ನೂ ನಾವೇ ಮಾಡಲಾಗುವದಿಲ್ಲ; ಬೇರೆಯವರಿಂದಲೂ ಮಾಡಿಸಬೇಕಾಗುತ್ತದೆ. ಆಗ್ಗೆ ನಮ್ಮ ಮಾತನ್ನು ನಡೆಸುವಂಥ ನುರಿತ ಹಾಗೂ ವಿಧೇಯರಾದ ಜನರಿರಬೇಕು. ಆಗ ನಮ್ಮ ಆಜ್ಞೆಗಳು ಸಾರ್ಥಕವಾದಾವು. ಜ್ಞಾತ್ರವೆಂಬ ಐಶ್ವರ್ಯವು ನನಗೆ ಉಂಟಾಗಲಿ –ಎಂದು ಇಲ್ಲಿ ಕೇಳಿಕೊಳ್ಳಲಾಗಿದೆ.

ಈಗ **ಸೂಃ–ಪ್ರಸೂಃ** ಎಂಬಿವುಗಳನ್ನು ವಿಚಾರಮಾಡೋಣ. ಇವು ಕೂಡ ಪ್ರೇರಣಸಾಮರ್ಥ್ಯಗಳೇ ಆಗಿವೆ. ಸೂಃ ಎಂದರೆ ಮಗನನ್ನು ಪ್ರೇರಿಸುವ

ಸಾಮರ್ಥ್ಯವು. ತಾನು ಹೇಳಿದಂತೆ ಮಗನು ನಡೆಯಬೇಕಾದರೆ ಪುಣ್ಯವೇ ಬೇಕು. ಪಿತೃವಾಕ್ಯಪರಿಪಾಲನೆಯನ್ನು ಶ್ರೀರಾಮನಂತೆ ಕೈಗೊಳ್ಳುವಂಥ ಪುತ್ರರು ಈಗ ಎಷ್ಟು ಮಂದಿ ಇದ್ದಾರು? ಮಗನು ತನ್ನ ವಶನಾಗಿದ್ದರೆ ಮಾತ್ರ ಇದು ಸಾಧ್ಯ. ಒಬ್ಬ ಸುಭಾಷಿತಕಾರನು ಆರು ಪ್ರಾಪಂಚಿಕಸುಖಗಳೊಳಗೆ "ಅಧೀನನಾಗಿರುವ ಮಗ" ನಿರುವದೂ ಒಂದೆಂದು ತಿಳಿಸಿದ್ದಾನೆ. ಹಾಗೆಯೇ ಪ್ರಸೂಃ ಎಂದರೆ ಹೆಂಡತಿ, ಆಳು ಮುಂತಾದವರು ತನ್ನ ವಶವಾಗಿರುವಿಕೆ. ಯಜಮಾನನಿಗೆ ವಿರುದ್ಧವಾಗಿ ಇವರುಗಳು ನಡೆದುಕೊಂಡರೆ ಆತನ ಸುಖವು ಹಾಳಾದಂತೆಯೇ ಸರಿ. ಕೈಕೇಯಿಯನ್ನು ವಶಪಡಿಸಿಕೊಳ್ಳಲಾಗದ ದಶರಥನು ಮರಣವನ್ನೇ ಹೊಂದಿದನು. ಹಾಗೆ ಆಗಬಾರದು. ತನಗೆ ಪುತ್ರಕಳತ್ರಾದಿ ಗಳೆಲ್ಲರ ಮೇಲೂ ಹಿಡಿತವಿರಬೇಕೆಂದು ಇಲ್ಲಿ ಕೇಳಿಕೊಂಡಿದೆ.

ಈಗ ಸೀರ–ಲಯಗಳನ್ನು ಕುರಿತು ವಿಚಾರಮಾಡೋಣ. ಸೀರ ವೆಂದರೆ ನೇಗಿಲೇ ಮುಂತಾದ ವ್ಯವಸಾಯದ ಉಪಕರಣಗಳು. ಲಯವೆಂದರೆ ಅವುಗಳನ್ನು ಉಪಯೋಗಿಸುವದಕ್ಕೆ ಇರಬಹುದಾದ ಅಡ್ಡಿಗಳು ನಾಶವು. ಈ ಉಪಕರಣಗಳು ಅಗತ್ಯವಾದಾಗ ಸಿಗದಂತೆಯೂ ಆಗಬಾರದು. ಮಳೆಯು ಬಂದು ಉಪಕರಣಗಳನ್ನು ಉಪಯೋಗಿಸುವ ಸಂದರ್ಭದಲ್ಲಿ ಅನಾನುಕೂಲ ಗಳೂ ಉಂಟಾಗಬಾರದು. ಅಥವಾ ಈಗಿನ ಕಾಲದಲ್ಲಿ ಅವು ಮುರಿದು ಹೋದರೆ ಅಥವಾ ಕೆಟ್ಟು ಹೋದರೆ ಕೆಲಸವೆಲ್ಲ ಹಾಳಾದೀತು. ಹೀಗೆಲ್ಲ ಅಡ್ಡಿಯಾಗ ಬಾರದೆಂದೂ ಕೃಷಿಯು ಚೆನ್ನಾಗಿ ನಡೆಯಬೇಕೆಂದೂ ಇಲ್ಲಿ ಪ್ರಾರ್ಥಿಸಲಾಗಿದೆ.

ಋತ–ಅಮೃತಗಳನ್ನು ಈಗ ನೋಡೋಣ. ಇಲ್ಲಿ ಯಜ್ಞಾದಿ ಕರ್ಮಗಳನ್ನೇ ಋತವೆಂದಿದೆ. ಅಮೃತವೆಂದರೆ ಅವುಗಳ ಫಲವು. ಯಜ್ಞಗಳನ್ನು ಮಾಡುವದೇನೂ ಸುಲಭವಲ್ಲ. ಅವುಗಳಿಗೆ ತಕ್ಕ ತಿಳಿವಳಿಕೆ. ದ್ರವ್ಯಾನುಕೂಲ ಹಾಗೂ ಉಳಿದವರ ಸಹಕಾರಾದಿಗಳು ಬೇಕು. ಮಾಡಿದ ಯಜ್ಞವೂ ಆ ಕೂಡಲೆ ಫಲವನ್ನು ಕೊಡುವದಿಲ್ಲ. ಆದ್ದರಿಂದ ಅಮೃತವೆಂಬ

ಫಲವನ್ನು ನಾವು ಈಗ ಊಟಮಾಡಬೇಕಾದರೆ ಹಿಂದೆಯೇ ಯಜ್ಞಗಳನ್ನು ಮಾಡಿರಬೇಕು. ಮುಂದಕ್ಕೂ ಫಲವು ಬರಬೇಕಾದರೆ ಈಗಲೂ ಯಜ್ಞ ಮಾಡುತ್ತಿರಬೇಕು. ಆದರೆ ಇವುಗಳಿಗೆಲ್ಲ ದೈವಾನುಗ್ರಹವಿಲ್ಲದೆ ಹೇಗೆ ಸಾಧ್ಯವಾದೀತು?

ಅಯಕ್ಷ್ಮ–ಅನಾಮಯಗಳನ್ನು ಈಗ ವಿಚಾರಿಸಬಹುದಾಗಿದೆ. ಯಕ್ಷ್ಮವೆಂದರೆ ಕ್ಷಯರೋಗವು. ಇಂಥ ಮಹಾವ್ಯಾಧಿಗಳಿಲ್ಲದಿರುವಿಕೆಯೇ ಅಯಕ್ಷ್ಮವು. ಆಮಯವೆಂದರೆ ಜ್ವರ, ಅಜೀರ್ಣಾದಿ ಸಾಮಾನ್ಯರೋಗಗಳು. ಇವುಗಳಿಲ್ಲದಿರುವಿಕೆಯೇ ಅನಾಮಯವು. 'ಸಂಸಾರವು ದುಃಖಮಯ, ಶರೀರವು ರೋಗಮಯ' ಎಂಬ ನಾಣ್ನುಡಿಯನ್ನು ನೀವು ಕೇಳಿರಬಹುದು. ಆದರೂ ನಮ್ಮ ಕೆಲಸಗಳಿಗೆ ಅಡ್ಡಿಯಾಗುವಂಥ ಪ್ರಬಲರೋಗಗಳುಂಟಾಗಿ ಬಿಟ್ಟರೆ ಮನುಷ್ಯನ ಇಹಪರಗಳೆರಡೂ ಹಾಳಾದಂತೆಯೇ ಸರಿ. ಆದ್ದರಿಂದ ರೋಗಾದಿಗಳು ಕಾಡದೆ ಇರುವಂತೆ ಭಗವದನುಗ್ರಹವನ್ನು ಸಂಪಾದಿಸಿಕೊಳ್ಳಬೇಕು. ಒಂದೊಂದು ವೇಳೆ ದೈಹಿಕವಾಗಿ ಕೆಲವು ರೋಗಗಳು ಕಾಣಿಸಿಕೊಂಡರೂ ಔಷಧಾದಿಗಳ ಜೊತೆಗೆ ಜಪ, ಹೋಮ, ದೇವತಾರ್ಚನಗಳಿಂದ ಅವುಗಳನ್ನು ಶಾಂತಗೊಳಿಸಿಕೊಳ್ಳಬೇಕು. ದೀರ್ಘಕಾಲ ನಮ್ಮನ್ನು ಹಿಂಸಿಸುವಂಥ ರೋಗಗಳು ಬಾರದಿರಲೆಂದೇ ಈ ಪ್ರಾರ್ಥನೆಯನ್ನು ಕೈಗೊಳ್ಳಲಾಗಿದೆ. ಭವರೋಗವೈದ್ಯನಾದ ಭಗವಂತನೊಬ್ಬನೇ ನಮ್ಮನ್ನು ಎಲ್ಲಾ ರೋಗಗಳಿಂದಲೂ ಪಾರುಮಾಡಬಲ್ಲವನಾಗಿರುತ್ತಾನೆ.

ಜೀವಾತು–ದೀರ್ಘಾಯುತ್ವಗಳನ್ನು ಈಗ ವಿಚಾರಮಾಡೋಣ. ಜೀವಾತುವೆಂದರೆ ರೋಗಪರಿಹಾರಕವಾದ ಔಷಧವು ಮತ್ತು ದೀರ್ಘಾಯುಸ್ಸಿಗೂ ನಿಮಿತ್ತವಾದ ಪದಾರ್ಥವು. ದೀರ್ಘಾಯುತ್ವವೆಂದರೆ ಅಪಮೃತ್ಯುವು ನಡುವೆ ಬರದೆ ಇರುವದು. ರೋಗಗಳನ್ನು ನಾವು ಎಷ್ಟೇ ತಡೆಗಟ್ಟಿರುವೆವಾದರೂ ಆಗಾಗ್ಗೆ ಅವು ನಮ್ಮನ್ನು ಕಾಡಿಸುತ್ತಲೇ ಇರುತ್ತವೆ. ಇಂಥ ಸಂದರ್ಭಗಳಲ್ಲಿ ಔಷಧಗಳಿಲ್ಲದಿದ್ದರೆ ನಮ್ಮ ಗತಿಯೇನಾಗುತ್ತಿತ್ತೊ

ಹೇಳಲಾಗುವದಿಲ್ಲ. ಭಗವಂತನು ರೋಗಗಳನ್ನು ಸೃಷ್ಟಿಮಾಡಿರುವಂತೆಯೇ ಔಷಧಿಗಳನ್ನೂ ಸೃಷ್ಟಿಮಾಡಿರುವದೊಂದು ವಿಶೇಷವು. ಮನುಷ್ಯನು ಪ್ರಕೃತಿ ನಿಯಮಕ್ಕೆ ಒಳಪಟ್ಟು ಹಿತಮಿತವಾಗಿ ನಡೆದುಕೊಂಡಲ್ಲಿ ರೋಗಗಳ ಬಾಧೆಯು ಹೆಚ್ಚಾಗಿರುವದಿಲ್ಲ. ಆದರೂ ಅನಿವಾರ್ಯವಾಗಿ ನಮ್ಮ ಜೀವನದಲ್ಲಿ ಏರುಪೇರುಗಳಾದಾಗ ರೋಗಗಳು ಬಂದರೂ ಅವಕ್ಕೆ ತಕ್ಕ ಔಷಧಿಗಳು ದೊರೆತು ನಮಗೆ ಪೂರ್ಣಾಯುಷ್ಯವು ದಕ್ಕಲಿ–ಎಂದು ಕೇಳಿಕೊಳ್ಳಲಾಗಿದೆ. ಪೂರ್ಣಾಯುಷ್ಯದ ಪ್ರಯೋಜನವಾದರೂ ಯಜ್ಞಗಳ ಅನುಷ್ಠಾನಕ್ಕಾಗಿಯೆ ಎಂದು ತಿಳಿಯಬೇಕು.

ಅನಮಿತ್ರ–ಅಭಯಗಳ ಪ್ರಾರ್ಥನೆಯನ್ನು ಈಗ ವಿಚಾರ ಮಾಡೋಣ. ಶತ್ರುಗಳಿಲ್ಲದಿರುವಿಕೆಯೇ ಅನಮಿತ್ರತ್ವವು. ಭಯವಿಲ್ಲದಿರು ವದೇ ಅಭಯವು. ಇವು ಸಂಸಾರದಲ್ಲಿ ಎಷ್ಟೇ ಹುಡುಕಿದರೂ ಸಿಗಲಾರದ ವಸ್ತುಗಳು. ಜ್ಞಾನವೊಂದರಿಂದಲೇ ಇವುಗಳ ಪೂರ್ಣಪ್ರಾಪ್ತಿಯಾಗಬೇಕಾಗಿದೆ. ಆದರೂ ಆಪೇಕ್ಷಿಕವಾಗಿ ಎಂದರೆ ಬಹಳ ಮಟ್ಟಿಗೆ ಅಭಯ, ಶತ್ರುರಾಹಿತ್ಯಗಳನ್ನು ಸಂಪಾದಿಸಿಕೊಳ್ಳಬಹುದು. ಇದಕ್ಕೂ ಭಗವದನುಗ್ರಹವು ಬೇಕು.

ಸುಗ–ಶಯನಗಳನ್ನು ವಿಚಾರಿಸೋಣ. ಸುಖವಾದ ಹೋಗುವಿಕೆಯು ಸುಗವು. ಪರಸ್ಥಳಗಳಿಗೆ ಹೊರಡುವಾಗ 'ಹೋಗಿ ಬರುತ್ತೇನೆ' ಎಂದು ಹೇಳುವ ಪದ್ಧತಿಯಿದೆ. ಹೊರಗಡೆ ಹೋದಾಗ ನಮಗೆ ಎಲ್ಲವೂ ಸುಖಮಯವಾಗಲು ಈ ಪ್ರಾರ್ಥನೆಯನ್ನು ಮಾಡಿದೆ. ಹಾಗೆಯೇ ಶಯನವೂ ಬಯಸತಕ್ಕದ್ದಾಗಿದೆ. ಹಾಸಿಗೆ–ಮುಂತಾದವುಗಳನ್ನು ಎಲ್ಲಾ ಕಡೆಗೆ ನಾವು ಒಯ್ಯುವದಕ್ಕಾಗುವದಿಲ್ಲ. ಆದರೆ ಹೋದಕಡೆಯಲ್ಲೆಲ್ಲ ಇದು ದೊರೆಯಬೇಕಾದರೆ ಪುಣ್ಯವೇ ಬೇಕು. ಮತ್ತು ಶಯನವೆಂದರೆ ಉತ್ತಮನಿದ್ರೆಯೂ ಬರಬೇಕು–ಎಂದು ಬೇಡಿಕೊಂಡಿದೆ.

ಸೂಷಾ–ಸುದಿನಗಳು ಈ ಅನುವಾಕದ ಕೊನೆಯ ಪ್ರಾರ್ಥನೆಗಳು ಸು–ಉಷಾ ಶೋಭನವಾದ ಪ್ರಾತಃಕಾಲವೆಂದರ್ಥ. ಆಂಗ್ಲರು Good

Morning ಎಂತ ಬೆಳಗ್ಗೆ ಎದ್ದ ಕೂಡಲೆ ಕಂಡವರಿಗೆ ಹೇಳುತ್ತಾರಷ್ಟೆ. ನಾವು 'ಸೂಷಾ ಭವತು' ಎಂದು ಹೇಳಬೇಕು. ಹಾಗೆಯೇ ಸುದಿನ–ಸಾರ್ಥಕವಾದ ದಿನವಾಗಲಿ! ಎಂಬಿದು ಮತ್ತೊಂದು ಪ್ರಾರ್ಥನೆ. ಕೆಲವು ವೇಳೆ ನಮಗೆ 'ಅಯ್ಯೋ, ಈ ದಿನವೆಲ್ಲ ವ್ಯರ್ಥವಾಯಿತು' ಎನಿಸುತ್ತೆ. ಹಾಗಿಲ್ಲದೆ ಆಲೋಚಿಸಿಕೊಂಡಿದ್ದ ಕೆಲಸಗಳು ನೆರವೇರಿದರೆ 'ಸುದಿನ'ವಾಗುವದು. ಪ್ರತಿದಿನವೂ ಸುದಿನವೇ ಆಗಲಿ–ಎಂಬಿದು ಈ ವೈದಿಕ ಪ್ರಾರ್ಥನೆಯ ಸಾರ.

---

## 8. ಊರ್ಕ್ ಚ ಮೇ ಸೂನೃತಾ ಚ ಮೇ

ಚಮಕಾಧ್ಯಾಯದ ನಾಲ್ಕನೆಯ ಅನುವಾಕವನ್ನು ಈಗ ವಿಚಾರ ಮಾಡಬೇಕಾಗಿದೆ.

**ಊರ್ಕ್ ಚ ಮೇ ಸೂನೃತಾ ಚ ಮೇ ಪಯಶ್ಚ ಮೇ ರಸಶ್ಚ ಮೇ ಘೃತಂ ಚ ಮೇ ಮಧು ಚ ಮೇ ಸಗ್ಧಿಶ್ಚ ಮೇ ಸಪೀತಿಶ್ಚ ಮೇ ಕೃಷಿಶ್ಚ ಮೇ ವೃಷ್ಟಿಶ್ಚ ಮೇ ಜೈತ್ರಂ ಚ ಮ ಔದ್ಭಿದ್ಯಂ ಚ ಮೇ ರಯಿಶ್ಚ ಮೇ ರಾಯಶ್ಚ ಮೇ ಪುಷ್ಟಂ ಚ ಮೇ ಪುಷ್ಟಿಶ್ಚ ಮೇ ವಿಭು ಚ ಮೇ ಪ್ರಭು ಚ ಮೇ ಬಹು ಚ ಮೇ ಭೂಯಶ್ಚ ಮೇ ಪೂರ್ಣಂ ಚ ಮೇ ಪೂರ್ಣತರಂ ಚ ಮೇಽಕ್ಷಿತಿಶ್ಚ ಮೇ ॥**

"ಊರ್ಕ್ ಮತ್ತು ಒಳ್ಳೆಯ ಮಾತು, ಪಯಸ್ಸು, ರಸ, ಘೃತ ಮಧುಗಳು, ಸಗ್ಧಿಸಪೀತಿಗಳು. ಕೃಷಿವೃಷ್ಟಿಗಳು, ಜೈತ್ರ ಔದ್ಭಿದ್ಯಗಳು. ರಯಿ, ರಾಯ, ಪುಷ್ಟಪುಷ್ಟಿಗಳು, ಮತ್ತು ವಿಭು, ಪ್ರಭು, ಬಹು, ಭೂಯ, ಪೂರ್ಣ, ಪೂರ್ಣತರ, ಅಕ್ಷಿತಿಗಳೂ ಯಜ್ಞಕ್ಕಾಗಿ ನನಗೆ ಉಂಟಾಗಲಿ"

ಈ ವಿವರಣೆಯನ್ನು ಬರೆಯುವ ವೇಳೆಗೆ ನನಗೆ ಸುಯೋಗದಿಂದ ಒಂದು ಸಹಾಯವು ಒದಗಿರುತ್ತದೆ. ಏನೆಂದರೆ 'ಆನಂದಾಶ್ರಮ ಸಂಸ್ಕೃತ ಗ್ರಂಥಾವಳಿ, ಪೂನಾ'–ಇವರಿಂದ ಪ್ರಕಾಶಿತವಾಗಿರುವ ಶ್ರೀ।। ವಿಷ್ಣುಸೂರಿ ವಿರಚಿತವಾದ ರುದ್ರ–ಚಮಕಗಳ ಭಾಷ್ಯಗ್ರಂಥವೊಂದು ದೊರಕಿರುತ್ತದೆ. ಆದ್ದರಿಂದ ಇನ್ನು ಮುಂದಿನ ವ್ಯಾಖ್ಯಾನಗಳನ್ನೆಲ್ಲ ವಿಷ್ಣುಸೂರಿಗಳ ಭಾಷ್ಯಾನುಸಾರ ವಾಗಿಯೇ ಬರೆಯುತ್ತೇನೆ. ಏಕೆಂದರೆ ಚಮಕಾಧ್ಯಾಯಕ್ಕೆ ಇರುವ ಸಾಯಣ ಭಾಷ್ಯವು ಕೇವಲ ಕರ್ಮಕಾಂಡಪರವಾಗಿದ್ದು ಕೆಲವು ಕಡೆ ತೀರ ಸಂಕ್ಷಿಪ್ತವಾಗಿದೆ. ಇದರಿಂದ ಅರ್ಥಗ್ರಹಣ ಮಾಡಲು ತೊಡಕಾಗಿತ್ತು. ಈಗ ದೈವಯೋಗದಿಂದ ದೊರೆತಿರುವ ವಿಷ್ಣುಸೂರಿಗಳ ಭಾಷ್ಯವನ್ನು ನೋಡಿದಾಗ ಅವರು ಎಲ್ಲಾ ಚಮಕಾನುವಾಕಗಳನ್ನೂ ಅಧ್ಯಾತ್ಮಪರವಾಗಿಯೇ ವ್ಯಾಖ್ಯಾನ ಮಾಡಿರುವದು ಕಂಡುಬಂದಿದೆ. ಆದ್ದರಿಂದ ಶ್ರೀ ವಿಷ್ಣುಸೂರಿಗಳ ಜಾಡನ್ನು ಅನುಸರಿಸಿ ನಾನು ಈಗ ಕನ್ನಡ ವಿವರಣೆಯನ್ನು ಕೊಡಲಿದ್ದೇನೆ.

ರುದ್ರಪಾಠದ ಅನಂತರ ಚಮಕದ ಪಾಠವನ್ನು ಕಡ್ಡಾಯವಾಗಿ ವೈದಿಕರು ಪಠಿಸುತ್ತಿರುವದರಿಂದ ಇವೆರಡಕ್ಕೂ ಸೇರಿದಂತೆ ಒಂದೇ ಮಹಾ ತಾತ್ಪರ್ಯವಿರಬೇಕೆಂದು ಕೆಲವು ವಿದ್ವಾಂಸರು ಪರಿಶೀಲಿಸಿ ಈ ತೀರ್ಮಾನ ವನ್ನು ಕೈಗೊಂಡಿದ್ದಾರೆ. ಏನೆಂದರೆ: ರುದ್ರಾಧ್ಯಾಯದಲ್ಲಿ 'ತತ್' ಪದಾರ್ಥದ ಪರಮಗಮ್ಯವಾದ ಬ್ರಹ್ಮಸ್ವರೂಪವನ್ನು ವಿವರಿಸಿದೆಯೆಂದೂ ಚಮಕಾಧ್ಯಾಯ ದಲ್ಲಿ 'ಮೇ' (ನನಗೆ) ಎಂಬ ಮಾತಿನಿಂದ 'ತ್ವಂ' ಪದಾರ್ಥವಾಚ್ಯನಾದ ಜೀವನನ್ನು ಪರಾಮರ್ಶಿಸಿದೆಯೆಂದೂ ಇವೆರಡರ ಒಟ್ಟು ತಾತ್ಪರ್ಯವು. 'ತತ್ತ್ವಮಸಿ' ಮಹಾವಾಕ್ಯದ ಅರ್ಥವೇ ಆಗಿರಬೇಕೆಂದೂ ಈ ವಿದ್ವಾಂಸರುಗಳು ಭಾವಿಸುತ್ತಾರೆ. ಇವರ ತೀರ್ಮಾನವು ನಿಜವಾಗಿಯೂ ಗ್ರಾಹ್ಯವಾಗಿದೆ. ಅದಕ್ಕೆ ತಕ್ಕಂತೆಯೇ ಶ್ರೀ ವಿಷ್ಣುಸೂರಿಗಳು ಚಮಕಭಾಗವನ್ನೂ ಅಧ್ಯಾತ್ಮಪರವಾಗಿ ವ್ಯಾಖ್ಯಾನಮಾಡಿರುವದೂ ಈ ನಿರ್ಣಯಕ್ಕೆ ಬೆಂಬಲ ವಾಗಿದೆ. ಹೀಗೆ 'ತತ್ತ್ವಮಸಿ' ಮಹಾವಾಕ್ಯದ ಅಭಿಪ್ರಾಯವೇ ನಮಕ–

ಚಮಕಗಳ ತಾತ್ಪರ್ಯವೆಂದಾದರೆ ವೇದವೆಲ್ಲವೂ ಒಂದಲ್ಲ ಒಂದು ರೀತಿಯಿಂದ ಪರಮಾರ್ಥತತ್ತ್ವವನ್ನೇ ಪ್ರತಿಪಾದಿಸುತ್ತದೆ ಎಂದಾಗುತ್ತದೆ. ಆಗ **ಸರ್ವೇ ವೇದಾ ಯತ್ಪದಮಾಮನಂತಿ** ಎಂಬ ಉಪನಿಷದ್ ವಾಕ್ಯವೂ ನಮಗೆ ಉಪೋದ್ಬಲಕವಾಗಿ ದೊರೆತು ವೇದವೇದ್ಯನಾದ ಪರಮಾತ್ಮನ್ನು ಅರಿತುಕೊಳ್ಳಲು ಇಡಿಯ ವೇದವೇ ಸಹಾಯಕವಾಗುತ್ತದೆ. ಇದನ್ನೇ **ನಾವೇದವಿನ್ಮನುತೇ ತಂ ಬೃಹಂತಮ್** (ವೇದಜ್ಞನಲ್ಲದವನು ಆ ದೊಡ್ಡವನಾದ ಪರಮಾತ್ಮನನ್ನು ಅರಿತಿರಲಾರನು) ಎಂಬ ತೈತ್ತಿರೀಯ ಬ್ರಾಹ್ಮಣವಾಕ್ಯವೂ ಸಾರಿ ಹೇಳುತ್ತಿದೆ.

ಈಗ ವಿಷ್ಣುಸೂರಿಗಳ ವ್ಯಾಖ್ಯಾನದ ಕಡೆಗೆ ತಿರುಗೋಣ. ಚಮಕಾಧ್ಯಾಯದ ಆರಂಭದಲ್ಲಿರುವ 'ಅಗ್ನಾವಿಷ್ಣೂ' ಎಂಬ ಮಂತ್ರದಲ್ಲಿ ಸೋಪಾಧಿಕಬ್ರಹ್ಮನೆನಿಸಿರುವ 'ಈಶ್ವರ'ನನ್ನು 'ಅಗ್ನಿ' ಶಬ್ದದಿಂದಲೂ ಸರ್ವವ್ಯಾಪಕ (ವಿಷ್ಣು)ನಾದ ಪರಮಾತ್ಮನನ್ನು 'ವಿಷ್ಣು' ಶಬ್ದದಿಂದಲೂ ಪರಾಮರ್ಶಿಸಿ ಇವರಿಬ್ಬರೂ ಜೋಡಿಯಾಗಿ ನಮ್ಮ ಸ್ತುತಿರೂಪವಾದ ಮಾತುಗಳನ್ನು ಬೆಳೆಯಿಸಲಿ–ಎಂದು ಪ್ರಾರ್ಥಿಸಿದೆ. 'ವಾಜಶ್ಚ ಮೇ' ಎಂಬ ಮೊದಲನೆಯ ಅನುವಾಕದಲ್ಲಿ ಸ್ಥೂಲಸೂಕ್ಷ್ಮದೇಹಗಳನ್ನೂ ಅವುಗಳಿಗೆ ಆಹಾರವಾಗಿರುವ ಅನ್ನಾದಿಗಳನ್ನೂ ಕೊಡುವಂತೆ ಪ್ರಾರ್ಥಿಸಿ ಎರಡನೆಯ ಅನುವಾಕದಲ್ಲಿ ಜ್ಞಾನದಿಂದುಂಟಾದ "ಸಿದ್ಧಿ"ಗಳು ದೊರಕಲಿ–ಎಂದು ಕೇಳಿಕೊಂಡಿದೆ. ಮೂರನೆಯ ಅನುವಾಕದಲ್ಲಿ "ಶಂ" ಎಂದರೆ ಬ್ರಹ್ಮವಿದ್ಯೆಯಿಂದ ದೊರಕುವ ಆನಂದವನ್ನೂ ಭದ್ರವೇ ಮುಂತಾದ ಶಬ್ದಗಳಿಂದ ಅಶನಾಪಿಪಾಸಾದಿ ಆರು ವಿಧವಾದ ಕ್ಲೇಶಗಳಿಲ್ಲದ ಸುಖವನ್ನೂ ಪ್ರಾರ್ಥಿಸಿದೆ.

ಈಗ ಪ್ರಕೃತವಾದ ನಾಲ್ಕನೆಯ ಅನುವಾಕವನ್ನು ವಿಚಾರಮಾಡೋಣ. ಇಲ್ಲಿಂದ ಮುಂದಕ್ಕೆ ಸಾಂಸಾರಿಕವಾದ ಸುಖಸಾಧನೆಗಳ ಪ್ರಾರ್ಥನೆಯಿದೆ. ಜ್ಞಾನವು ದೊರಕಿದ ಅನಂತರವೂ ಪ್ರಾರಬ್ಧವಶದಿಂದ ಶರೀರವು ಕೆಲವು ಕಾಲ ಇದ್ದುಕೊಂಡಿರುವದರಿಂದ ಆ ಶರೀರನಿಮಿತ್ತವಾದ ಸುಖಭೋಗಗಳ ಪ್ರಾರ್ಥನೆಯನ್ನು ಇಲ್ಲಿ ಕೈಗೊಳ್ಳಬೇಕಾಗಿದೆ. ಬ್ರಹ್ಮನಿಷ್ಠನಾದವನಿಗೆ ಶರೀರಸ್ಥಿತಿ

ಯಿಂದ ಆಗಬೇಕಾದ ಪ್ರಯೋಜನವೇನೂ ಇಲ್ಲವಾದ್ದರಿಂದ ಅವನು ತನಗಾಗಿ ಕಾಮಗಳನ್ನು ಪ್ರಾರ್ಥಿಸಿಕೊಳ್ಳುವ ಸಂಭವವಿರುವದಿಲ್ಲ. ಹಾಗೇನಾದರೂ ಇದ್ದರೆ ಅವು ಲೋಕಕಲ್ಯಾಣಕ್ಕಾಗಿಯೇ–ಎಂದು ತಿಳಿಯಬೇಕು.

**ಊರ್ಕ್** ಎಂದರೆ ಬಲಕ್ಕೆ ಕಾರಣವಾಗಿರುವ ರಸವು. ಇದು ಸಸ್ಯಗಳಿಂದ ದೊರೆಯುತ್ತದೆ, **ಸೂನೃತ**ವೆಂದರೆ ಇದ್ದದ್ದು ಇದ್ದಂತೆಯೇ– ಪರರಿಗೆ ಮನನೋಯದಂತೆ– ಆಡುವ ಮಾತು. ಪ್ರಿಯವೂ ಸತ್ಯವೂ ಆಗಿದ್ದರೆ ಮಾತ್ರವೇ ಮಾತನಾಡಬೇಕು–ಎಂದು ಇದರಿಂದ ಸಿದ್ಧವಾಗುತ್ತದೆ. **ಪಯಸ್ಸೆಂ**ದರೆ ಹಾಲು; **ರಸ**ವೆಂದರೆ ಕಬ್ಬಿನ ಹಾಲು ಮುಂತಾದದ್ದು. **ಘೃತ**ವೆಂದರೆ ತುಪ್ಪವು. **ಮಧು** ಎಂದರೆ ಜೇನು. ಇವುಗಳೆಲ್ಲವೂ ನನಗೆ ಯಜ್ಞಕ್ಕಾಗಿ ಒದಗಲಿ! ಎಂದರ್ಥ. ಈಗಿನ ಕಾಲದಲ್ಲಿ ಈ ಪದಾರ್ಥಗಳೆಲ್ಲ ಕಲಬೆರಕೆಗಳೇ ಆಗಿ ದೊರೆಯುತ್ತಿದ್ದು ನಿಜವಾದ ವಸ್ತುಗಳು ದುರ್ಲಭವಾಗಿವೆ. ಭಗವಂತನ ಕೃಪೆಯಿಂದಲೇ ಅವು ನಮಗೆ ಉತ್ತಮರೀತಿಯಲ್ಲಿ ದೊರೆಯ ಬೇಕಾಗಿದೆ.

ಈಗ **ಸಗ್ಧಿ** ಶಬ್ದವನ್ನು ನೋಡೋಣ. ಅದಕ್ಕೆ ಸಹಭೋಜನವೆಂದು ಅರ್ಥಮಾಡಿದೆ. ಈಗಿನ ಕಾಲದ ಭೋಜನಕೂಟವು ಇದರ ಅರ್ಥವಾಗಿರ ಲಾರದು. ಏಕೆಂದರೆ ಭೋಜನದ ನೆಪದಲ್ಲಿ ಅಲ್ಲಿ ಮಾತನಾಡುವದೇ ಪ್ರಧಾನವಾಗಿರುತ್ತದೆ. ಚೆಲ್ಲುವದಂತೂ ಸರಿಯಷ್ಟೆ. ಆದ್ದರಿಂದ ಈ ಅರ್ಥವನ್ನು ಬಿಡೋಣ. ಮನೆಯ ಯಜಮಾನನು ಸರಿಯಾದ ಊಟದ ವೇಳೆಗೆ ತನ್ನ ಮಕ್ಕಳು, ಬಂಧುಗಳು, ಕುಟುಂಬದ ಸದಸ್ಯರು, ಅತಿಥಿಗಳೊಡನೆ ಕೂಡಿ ಭೋಜನಮಾಡುವದೇ ಸಗ್ಧಿಯು. ಏಕೆಂದರೆ ಅವನಿಗೆ ಅವರೆಲ್ಲರಲ್ಲಿಯೂ ಅಭಿಮಾನವಿರುತ್ತದೆ. ಹೀಗೆ ಒಟ್ಟಿಗೆ ಕುಟುಂಬದವರೆಲ್ಲ ಭೋಜನಮಾಡುವ ಸನ್ನಿವೇಶವು ಈಗ ವ್ಯವಹಾರದ ಒತ್ತಡದಿಂದ ಕಡಿಮೆಯಾಗಿದೆ. ಆದರೂ ರಜಾದಿನಗಳಲ್ಲಾದರೂ ಇದನ್ನು ಸಾಧಿಸಬೇಕು. ಇದರಿಂದ ಪ್ರಯೋಜನವಿದೆ. **ಸಪೀತಿ**ಯೆಂದರೆ ಜೊತೆಯಲ್ಲಿ ಕುಡಿಯುವದು. ನಿಷಿದ್ಧವಾದ ಪಾನಗಳ ಹೊರತು–ಎಂದರ್ಥಮಾಡಬೇಕು. ಕೃಷಿಯು ಪ್ರಸಿದ್ಧವಾಗಿದೆ. **ವೃಷ್ಟಿಯೂ**

ಪ್ರಾರ್ಥಿಸಿಕೊಳ್ಳಬೇಕಾದ ವಸ್ತುವೇ ಆಗಿದೆ. ಜೈತ್ರವೆಂದರೆ ಕ್ಷತ್ರಿಯರಿಗೆ ಬೇಕಾದ ಜಯಸಾಮರ್ಥ್ಯಗಳನ್ನು ಒದಗಿಸುವ ಸುರಾಮಾಂಸಾದಿಗಳು. ಔದ್ಭಿದ್ಯವೆಂದರೆ ದನಕರುಗಳಿಗೆ ಬೇಕಾದ ಮೇವು. ರಯಿ-ಎಂದರೆ ಕೋಟಿಗಟ್ಟಲೆಯ ಹಣವು. ರಾಯವೆಂದರೆ ರಾಜಯೋಗ್ಯವಾದ ಛತ್ರ ಚಾಮರಾದಿಸಂಪತ್ತುಗಳು! ಪುಷ್ಟವೆಂದರೆ ಹೆಂಡತಿ, ಮಕ್ಕಳು ಮುಂತಾದ ಕುಟುಂಬದವರು. ಇವರು ರೋಗಗ್ರಸ್ತರಾಗದೆ ಗಟ್ಟಿಮುಟ್ಟಾಗಿರುವವರಾಗಿರ ಬೇಕು. "ಪೀವರ್ಯಸ್ಯ ಜಾಯಾ ಪೀವಾನಃ ಪುತ್ರಾ ಅಕೃಶಾಸಃ" (ಈತನ ಹೆಂಡತಿ ದಷ್ಟಪುಷ್ಟಳೂ ಮಕ್ಕಳು ಸೊಣಕರಲ್ಲದ ಶಕ್ತಿವಂತರೂ ಆಗಿರಲಿ!) ಎಂಬ ಆಶೀರ್ವಾದ ಮಂತ್ರವನ್ನು ವಿವಾಹಕಾಲದಲ್ಲಿ ವೈದಿಕರು ಪಠಿಸುವದನ್ನು ನೀವು ಕೇಳಿರಬಹುದು. ಹಾಗೆಯೇ ಯಜಮಾನನ ಶರೀರವೂ ಪುಷ್ಟಿಯಾಗಿರ ಲೆಂದು ಇಲ್ಲಿ ಪ್ರಾರ್ಥನೆ ಇದೆ.

ಈಗ ವಿಭು ಮುಂತಾದ ಏಳು ಪದಾರ್ಥಗಳು ರಾಜ್ಯಾಂಗಗಳೆಂದು ವ್ಯಾಖ್ಯಾನಮಾಡಲ್ಪಟ್ಟಿದೆ. ಇವುಗಳನ್ನು ನೋಡೋಣ. ವಿಭುವೆಂದರೆ ಅಮಾತ್ಯಸಂಪತ್ತಿಯು. ರಾಜರಿಗೆ ಯೋಗ್ಯರಾದ ಮಂತ್ರಿಗಳೇ ದೊಡ್ಡ ಆಸ್ತಿಯು. ಪ್ರಭು ಎಂಬಿದು ತನ್ನ ಆತ್ಮಶಕ್ತಿಯೇ ಆಗಿರುವದು. ಬಹುವೆಂದರೆ ಸಹೃದಯರಾದ ಸ್ನೇಹಿತರ ಗುಂಪು. ಭೂಯವೆಂದರೆ ತುಂಬಿರುವ ಖಜಾನೆಯು. ಪೂರ್ಣವೆಂದರೆ ರಾಷ್ಟ್ರವು. ಪೂರ್ಣತರವೆಂದರೆ ದುರ್ಗ, ಯಂತ್ರ-ಮುಂತಾದ ರಕ್ಷಣಾ ಸಾಮಗ್ರಿಗಳು. ಅಕ್ಷಿತಿಯೆಂದರೆ ಸೈನ್ಯವು. ಇವೆಲ್ಲ ರಾಜರುಗಳಿಗೆ ಅಗತ್ಯವಾದ ಪದಾರ್ಥಗಳಾದರೂ ಇವುಗಳು ಚೆನ್ನಾಗಿದ್ದರೆ ದೇಶವು ಸುಭಿಕ್ಷವಾಗಿಯೂ ಶತ್ರುರಹಿತವಾಗಿಯೂ ಅಭಯವಾಗಿಯೂ ಇರುವದು. ಅಂಥ ದೇಶದಲ್ಲಿ ಮಾತ್ರವೇ ನಾವು ನೆಮ್ಮದಿಯಿಂದ ವಾಸಿಸುವದು ಸಾಧ್ಯವಾಗುತ್ತದೆ. ಆದ್ದರಿಂದ ರಾಜರ ಪರವಾಗಿ ಅಥವಾ ರಾಷ್ಟ್ರದ ಪರವಾಗಿ ಪ್ರತಿಯೊಬ್ಬನೂ ಇವುಗಳನ್ನು ಪ್ರಾರ್ಥಿಸುವದರಲ್ಲಿ ತಪ್ಪೇನೂ ಇರುವದಿಲ್ಲ. ಭಕ್ತನಾದವನು ಈ ಬಗೆಯ ಪ್ರಾರ್ಥನೆಯನ್ನು ಅವಶ್ಯವಾಗಿ ಮಾಡಲೇಬೇಕು.

## 9. ಅನ್ನಂ ಚ ಮೇ ಕ್ಷುಚ್ಚಮೇ

ಚಮಕಾಧ್ಯಾಯದ ನಾಲ್ಕನೆಯ ಅನುವಾಕದ ಕೊನೆಯ ಭಾಗವನ್ನು ಈಗ ವಿಚಾರಮಾಡಬೇಕಾಗಿದೆ.

**ಕೂಯವಾಶ್ಚ ಮೇಽನ್ನಂ ಚ ಮೇ ಕ್ಷುಚ್ಚ ಮೇ ವ್ರೀಹಯಶ್ಚ ಮೇ ಯವಾಶ್ಚ ಮೇ ಮಾಷಾಶ್ಚ ಮೇ ತಿಲಾಶ್ಚ ಮೇ ಮುದ್ಗಾಶ್ಚ ಮೇ ಖಲ್ವಾಶ್ಚ ಮೇ ಗೋಧೂಮಾಶ್ಚ ಮೇ ಮಸುರಾಶ್ಚ ಮೇ ಪ್ರಿಯಂಗವಶ್ಚ ಮೇಽಣವಶ್ಚ ಮೇ ಶ್ಯಾಮಾಕಾಶ್ಚ ಮೇ ನೀವಾರಾಶ್ಚ ಮೇ ॥**

"ಕೂಯವಗಳೂ ಅನ್ನವೂ, ಹಸಿವೂ, ವ್ರೀಹಿ, ಯವ, ಮಾಷ, ತಿಲ, ಮುದ್ಗ, ಖಲ್ವ, ಗೋಧೂಮ, ಮಸುರ, ಪ್ರಿಯಂಗು, ಅಣು, ಶ್ಯಾಮಾಕ, ನೀವಾರಗಳು–ನನಗೆ ಯಜ್ಞಕ್ಕಾಗಿ ಉಂಟಾಗಲಿ".

ಈ ಭಾಗದಲ್ಲಿ ನಮಗೆ ಅವಶ್ಯವಾದ ಹಾಗೂ ಪ್ರಾಣಿಗಳಿಗೂ ಅಗತ್ಯವಾದ ಆಹಾರಪದಾರ್ಥಗಳ ಪ್ರಸ್ತಾಪವಿದೆ. ಪ್ರಪಂಚದಲ್ಲಿ ಹುಟ್ಟಿರುವ ಜೀವಿಗಳೆಲ್ಲರಿಗೂ ಭಗವಂತನು ಹಸಿವು ಬಾಯಾರಿಕೆಗಳನ್ನು ಸೃಷ್ಟಿಸಿರುತ್ತಾನೆ. ಇದೇ ಸಂಸಾರಧರ್ಮವು. ಹೀಗೆ ಸಂಸಾರಿಗಳಾದ ಜೀವರುಗಳಲ್ಲಿ ಮನುಷ್ಯನನ್ನು ಹೊರತು ಉಳಿದ ಎಲ್ಲಾ ಪ್ರಾಣಿಗಳಿಗೂ ದೇವರೇ ಆಹಾರವನ್ನು ಸೃಷ್ಟಿಸಿರುತ್ತಾನೆ. ಎಂದರೆ ಅಕೃಷ್ಟಪಚ್ಯವಾದ (ವ್ಯವಸಾಯವಿಲ್ಲದೆ ಬೆಳೆಯುವಂಥ) ಆಹಾರಗಳು ಸಿದ್ಧವಾಗಿವೆ. ಆದ್ದರಿಂದ ಅವುಗಳಿಗೆ ಆಹಾರೋತ್ಪತ್ತಿಯ ಯೋಚನೆಯಿರುವದಿಲ್ಲ. ಆದರೆ ಮನುಷ್ಯನು ಮಾತ್ರ ಸ್ವಪ್ರಯತ್ನದಿಂದ ತನ್ನ ಆಹಾರವನ್ನು ತಾನೇ ವ್ಯವಸಾಯ ಮಾಡಿ ಶ್ರಮಪಟ್ಟು ಬೆಳೆದುಕೊಳ್ಳಬೇಕಾಗಿದೆ. ಹೀಗೆ ಬೆಳೆದುಕೊಳ್ಳುವಾಗಲೂ ಅವನಿಗೆ ನೀರು, ಭೂಮಿ, ಸೂರ್ಯಾದಿದೇವತೆಗಳ ಸಹಾಯವು ಬೇಕೇಬೇಕು. ಪ್ರಾಣಿಗಳ ಸಹಾಯವೂ ಅಗತ್ಯ. ಅತಿವೃಷ್ಟಿ ಅನಾವೃಷ್ಟಿಗಳಿಲ್ಲದೆ, ಕ್ರಿಮಿಕೀಟಗಳ ಬಾಧೆಯಿಲ್ಲದೆ, ಬಿತ್ತಿದ ಪೈರು ಭೂಗುಣದಿಂದ ಚೆನ್ನಾಗಿ ಬೆಳೆದರೆ ಮಾತ್ರ

ಮನುಷ್ಯನ ಪ್ರಯತ್ನವು ಸಫಲವಾದೀತು. ಆದ್ದರಿಂದ ನಮ್ಮ ಪ್ರಯತ್ನಕ್ಕಿಂತ ಹತ್ತು ಪಾಲು ದೈವಸಹಾಯವು ಬೇಕಾಗಿದೆ. ಆಹಾರವಿಲ್ಲದೆ ಯಾರೂ ಬದುಕಿರಲೂ ಸಾಧ್ಯವಿಲ್ಲ. ಈ ಹಿನ್ನೆಲೆಯಲ್ಲಿ ವಿಚಾರ ಮಾಡಿದಾಗ ನಾವು ದೇವತೆಗಳನ್ನು ತೃಪ್ತಿಗೊಳಿಸದೆ, ಅವರ ಪ್ರಸಾದವಿಲ್ಲದೆ, ಬದುಕುವದೇ ಎಂದಿಗೂ ಸಾಧ್ಯವಿಲ್ಲ. ಇನ್ನೂ ಒಳಹೊಕ್ಕು ನೋಡಿದರೆ ನಮ್ಮ ಶರೀರದೊಳಗೆ ಜಠರಾಗ್ನಿಯು ಕೆಲಸಮಾಡಿಯೇ ತಿಂದ ಆಹಾರವು ಅರಗಬೇಕಾಗಿದೆ. ಅದು ರಕ್ತಮಾಂಸಾದಿಗಳಾಗಿ ಪರಿವರ್ತನೆ ಹೊಂದಿಯೇ ಬಲಪುಷ್ಟಿಗಳನ್ನುಂಟು ಮಾಡಬೇಕಾಗಿದೆ. ಆಹಾರವು ರೋಗಾದಿಗಳ ನಿಮಿತ್ತ ಕೊಳೆತು ಹೋಗದೆ ಅಥವಾ ವ್ಯರ್ಥವಾಗದೆ ಇರಲು ದೇಹಾರೋಗ್ಯವು ಅಗತ್ಯವಾಗಿದೆ. ಇಷ್ಟೆಲ್ಲ ನಮಗೆ ಒದಗಬೇಕಾದರೆ ಭಗವಂತನ ಕೃಪೆಯಿಲ್ಲದೆ ಸಾಧ್ಯವೆ? ಆದ್ದರಿಂದ ಈ ಮಂತ್ರಗಳಲ್ಲಿ ಯಜ್ಞ–ಎಂದರೆ ಭಗವಂತನ ಆರಾಧನೆಗಾಗಿಯೇ, ಆತನ ಪ್ರಸಾದಸಿದ್ಧಿಗಾಗಿಯೇ ನಮಗೆ ದೇವತೆಗಳು ಕೂಯವಾದಿದ್ರವ್ಯಗಳನ್ನು ಒದಗಿಸಲಿ–ಎಂದು ಬೇಡಿಕೊಳ್ಳಲಾಗಿದೆ. ಆಹಾರವೆಂಬುದೂ ಭಗವಂತನ ಒಂದು ಶಕ್ತಿರೂಪವಾದ ವಿಭೂತಿಯು. ಧಾನ್ಯಗಳಂತೂ ದೇವತೆಗಳ ಪ್ರತಿನಿಧಿಗಳೇ ಆಗಿರುತ್ತವೆ. ಹೀಗಿರುವಲ್ಲಿ ಧಾನ್ಯಗಳ ಪ್ರಾಪ್ತಿಗಾಗಿ ಬೇಡಿರುವದು ಅತ್ಯಂತ ಸಮಂಜಸವಾಗಿದೆ.

ಈಗ ಈ ಧಾನ್ಯಗಳ ಹೆಸರುಗಳನ್ನೂ ವಿವರವನ್ನೂ ನೋಡೋಣ. ಇದಕ್ಕೆ ಮುಂಚೆ 'ಅನ್ನಂ ಚ ಮೇ ಕ್ಷುಚ್ಚ ಮೇ' ಎಂಬಿದನ್ನು ವಿಚಾರಮಾಡೋಣ. ನಾವು ತಿನ್ನುವ ಪದಾರ್ಥಗಳಿಗೆಲ್ಲ ಅನ್ನವೆಂದೇ ಹೆಸರು. ಅದು ದೊರಕಬೇಕಾದರೆ ಪುಣ್ಯವಿರಬೇಕು. ಮತ್ತು ಅನ್ನವನ್ನು ಹಿಂದೆ ದಾನಮಾಡಿರಬೇಕು. ಹಾಗೆ ದಾನಮಾಡುವಾಗಲೂ ಉತ್ತಮ ರೀತಿಯಿಂದ ಮಾಡಿದ್ದರೆ ಉತ್ತಮವಾಗಿಯೂ, ಮಧ್ಯಮವಾಗಿ ಮಾಡಿದ್ದರೆ ಮಧ್ಯಮವಾಗಿಯೂ, ಅಧಮರೀತಿಯಿಂದ ಮಾಡಿದ್ದರೆ ಅಧಮವಾಗಿಯೂ ದೊರಕುವದು. ಆದ್ದರಿಂದ ಉತ್ತಮ ರೀತಿಯಿಂದ ನನಗೆ ಅನ್ನವು ದೇವತೆಗಳ ಅನುಗ್ರಹದಿಂದ ದೊರಕಲಿ–ಎಂದು ಪ್ರಾರ್ಥಿಸಿದೆ. ಆದರೆ ಅನ್ನವು ಮಾತ್ರ ದೊರೆತರೆ ಸಾಲದು. ಅದನ್ನು ತಿನ್ನುವದಕ್ಕೆ

ತಕ್ಕ ಹಸಿವೂ ಇರಬೇಕು. ಈಗಿನ ಪ್ರಪಂಚದಲ್ಲಿ ಎರಡೂ ಉಳ್ಳವರು ಅಪರೂಪರೇ ಆಗಿದ್ದಾರೆ. ಏಕೆಂದರೆ ಹಸಿದವರಿಗೆ ಸಾಕಷ್ಟು ಅನ್ನವು ದೊರೆಯುತ್ತಿಲ್ಲ. ಅನ್ನವು ತುಂಬಿರುವವರು ರೋಗರುಜಿನಾದಿಗಳಿಂದಲೂ ಮಾನಸಿಕ ವ್ಯಥೆಗಳಿಂದಲೂ ಪೀಡಿಸಲ್ಪಟ್ಟವರಾಗಿ ಅನ್ನವನ್ನ ತಿನ್ನಲೇ ಆರರಾಗಿರುವರು. ಎಷ್ಟೋ ಜನರಿಗೆ ಅವರ ಕೋಪತಾಪಗಳೂ, ಹಟಮಾರಿತನವೂ, ತಿರಸ್ಕಾರಗಳೂ ಅನ್ನವು ಎದುರಿಗೇ ಇದ್ದರೂ ಒದಗಿದರೂ ತಿನ್ನಲಾರದಂತೆ ಮಾಡಿಬಿಡುವವು. ಈ ವಿಪರ್ಯಾಸಗಳನ್ನು ಗಮನಿಸಿದಾಗ ಭಗವದನುಗ್ರಹವಿಲ್ಲದೆ ನಾವು ಅನ್ನವನ್ನು ತಿಂದು ಸುಖಿಸಲಾರೆವು ಎಂಬುದು ಗೊತ್ತಾಗುವದು. ಆದ್ದರಿಂದಲೇ ಅನ್ನವನ್ನು 'ಅನ್ನಪೂರ್ಣೆ' ಯೆಂಬ ದೇವಿಯೆಂದು ಗೌರವಿಸಲಾಗಿದೆ. 'ಅನ್ನವನ್ನು ನಿಂದಿಸಬಾರದು, ಚೆಲ್ಲಬಾರದು' ಇತ್ಯಾದಿ ಹಿತೋಪದೇಶಗಳಿವೆ. ಅನ್ನವನ್ನು ತಿನ್ನುವಾಗ ದೇವರನ್ನು ಸ್ಮರಿಸುತ್ತಲೇ ಊಟಮಾಡಬೇಕೆಂದೂ ಅಥವಾ ಮಾತನಾಡದೆ ಮೌನವಾಗಿ ಭುಂಜಿಸತಕ್ಕದ್ದೆಂದೂ ವಿಧಿಯಿದೆ. ಈಗಿನ ಕಾಲಕ್ಕೆ 'ಭೋಜನಕೂಟ' ವೆಂದರೆ ಹರಟೆ ಹೊಡೆಯುವದೇ ಪ್ರಧಾನವಾಗಿರುತ್ತದೆ. ಹೀಗೆಲ್ಲ ಅನ್ನವನ್ನು ತಿರಸ್ಕಾರ ಮಾಡುವದು ಸರಿಯಲ್ಲ. ಅಂತೂ ದೇವತೆಗಳ ದಯೆಯಿಂದ ಅನ್ನವೂ ಹಸಿವೂ ಉಂಟಾಗಲಿ–ಎಂದು ಕೇಳಿಕೊಳ್ಳೋಣ. ಹಾಗೆ ಕೇಳುವಾಗಲೂ ಮೊದಲು ಅನ್ನವನ್ನು ಕೇಳಿಯೇ ಹಸಿವನ್ನು ಕೇಳಿರುವದನ್ನು ಗಮನಿಸಬೇಕು. ಅನ್ನವು ಪ್ರಭೂತವಾಗಿದ್ದಲ್ಲಿ ಹಸಿವಿನ ಭಯವಾದರೂ ಏನಿದ್ದೀತು? ಈ ವೈದಿಕ ಪ್ರಾರ್ಥನೆಯ ಬೆಲೆಯನ್ನು ಈಗಲಾದರೂ ನಾವು ಅರಿಯಬೇಕು.

ಧಾನ್ಯಗಳಲ್ಲಿ ಹನ್ನೆರಡರ ಹೆಸರನ್ನು ಮುಖ್ಯವಾಗಿ ಇಲ್ಲಿ ಪ್ರಸ್ತಾಪಿಸಲಾಗಿದೆ. ಉಳಿದವುಗಳನ್ನೂ ಸೇರಿಸಿಕೊಳ್ಳಬಹುದು. ಕೂಯವವೆಂಬುದು ಹದಿಮೂರನೆಯದೆಂದಿಟ್ಟುಕೊಳ್ಳೋಣ. ವ್ರೀಹಿ ಎಂದರೆ ಭತ್ತವು. ಯವ ಎಂದರೆ ಅಕ್ಕಿ ಎಂದಿಟ್ಟುಕೊಳ್ಳಬಹುದು. ಪುನರುಕ್ತಿಯೇನೂ ಇಲ್ಲ. ಏಕೆಂದರೆ ಭತ್ತವನ್ನೇ ನೇರಾಗಿ ಅರಳು ಮಾಡಬಹುದಾದ್ದರಿಂದ ಎರಡೂ

ಬೇಕಾದದ್ದೇ ಸರಿ. ಮಾಷ ಎಂದರೆ ಉದ್ದು. ತಿಲವೆಂದರೆ ಎಳ್ಳು. ಮುದ್ಗವೆಂದರೆ ಹೆಸರು. ಖಲ್ವ ಎಂದರೆ ಕಡಲೆ. ಗೋಧೂಮವೆಂದರೆ ಗೋಧಿ. ಮಸುರ, ಪ್ರಿಯಂಗು, ಶ್ಯಾಮಾಕ, ನಿವಾರಗಳು ಅರಣ್ಯದ ಉತ್ಪನ್ನಗಳು. ಇವುಗಳು ಋಷಿಗಳ ಆಹಾರವೆಂದು ಪ್ರಸಿದ್ಧವಾಗಿವೆ. ನವಣೆ, ಸಜ್ಜೆ, ಸಾವೆ–ಮುಂತಾದವುಗಳೇ ಇವು. ಆದರೆ ಈಗ ನಾವು ತಿನ್ನುವ ಮೈದಾಹಿಟ್ಟು ಮುಂತಾದವು ಇಂಥ ಅರಣ್ಯಧಾನ್ಯಗಳ ಉತ್ಪತ್ತಿಯಾಗಿರಬಹುದು. ಒಟ್ಟಿನಲ್ಲಿ ಈ ಎಲ್ಲಾ ಧಾನ್ಯಗಳೂ ಯಜ್ಞಕ್ಕಾಗಿ ನಮಗೆ ಒದಗಲಿ! ಎಂದು ಪ್ರಾರ್ಥಿಸಲಾಗಿದೆ. ಇಲ್ಲಿ ಹೆಸರಿಸಿರುವ ಗೋಧಿ, ಅಕ್ಕಿ, ಉದ್ದು ಎಳ್ಳು, ಹೆಸರು, ಕಡಲೆ–ಇವುಗಳನ್ನು ಕ್ರಮವಾಗಿ ಸೂರ್ಯ, ಚಂದ್ರ, ರಾಹು, ಶನಿ, ಬುಧ, ಗುರು–ಗ್ರಹಗಳ ಪೂಜೆಗೆ ಬಳಸುವದು ಪದ್ಧತಿಯಿದೆ. ಆಯಾ ಗ್ರಹಗಳ ಪ್ರೀತಿಗಾಗಿ ಆಯಾ ಧಾನ್ಯವನ್ನು ದಾನಮಾಡುವದು ಆಚರಣೆಯಲ್ಲಿದೆ. ಅಂತೂ ಧಾನ್ಯವೆಂದರೆ ದಾನಾದಿಗಳಿಂದ ನಮ್ಮನ್ನು ಇಹಲೋಕದಲ್ಲಿಯೂ ಪರಲೋಕದಲ್ಲಿಯೂ ಧನ್ಯರನ್ನಾಗಿ ಮಾಡುವ ಹಾಗೂ ಮನಶ್ಶಾಂತಿಯನ್ನುಂಟು ಮಾಡುವ ಭಗವಂತನ ವಿಭೂತಿಯೆಂದು ಭಾವಿಸಿದಲ್ಲಿ ಈ ಪ್ರಾರ್ಥನೆಯು ಸಾರವತ್ತಾಗಲಿದೆ.

---

## 10. ಅಶ್ಮಾ ಚ ಮೇ ಮೃತ್ತಿಕಾ ಚ ಮೇ

ಚಮಕಾಧ್ಯಾಯದ ಐದನೆಯ ಅನುವಾಕವನ್ನು ಈಗ ವಿಚಾರ ಮಾಡೋಣ.

**ಅಶ್ಮಾ ಚ ಮೇ ಮೃತ್ತಿಕಾ ಚ ಮೇ ಗಿರಿಯಶ್ಚ ಮೇ ಪರ್ವತಾಶ್ಚ ಮೇ ಸಿಕತಾಶ್ಚ ಮೇ ವನಸ್ಪತಯಶ್ಚ ಮೇ ಹಿರಣ್ಯಂ ಚ ಮೇಽಯಶ್ಚ ಮೇ ಸೀಸಂ ಚ ಮೇ ತ್ರಪುಶ್ಚ ಮೇ ಶ್ಯಾಮಂ ಚ ಮೇ ಲೋಹಂ ಚ ಮೇಽಗ್ನಿಶ್ಚಮ ಆಪಶ್ಚ ಮೇ ವೀರುಧಶ್ಚಮ ಓಷಧಯಶ್ಚ ಮೇ॥**

"ಅಶ್ಮವೂ ಮೃತ್ತಿಕೆಯೂ ಗಿರಿಗಳೂ ಪರ್ವತಗಳೂ ಸಿಕತಗಳೂ ವನಸ್ಪತಿಗಳೂ ಹಿರಣ್ಯವೂ ಬೆಳ್ಳಿಯೂ ಸೀಸವೂ ತ್ರಪವೂ ಶ್ಯಾಮವೂ ಲೋಹವೂ ಅಗ್ನಿಯೂ ಅಪ್ಪು ವೀರುಧಗಳೂ ಓಷಧಗಳೂ ನನಗೆ ಯಜ್ಞಕ್ಕಾಗಿ ಒದಗಲಿ"

ಈ ಅನುವಾಕದಲ್ಲಿ ಬಹಳವುಟ್ಟಿಗೆ ನೀರಸ (ರಸವಿಲ್ಲದ) ಪದಾರ್ಥಗಳಾದ ಅಚೇತನವಸ್ತುಗಳು ಬೇಕೆಂಬ ಪ್ರಾರ್ಥನೆಯಿದೆ. ಇವೆಲ್ಲ ಯಜ್ಞಕ್ಕಾಗಿಯೇ ಎಂಬುದನ್ನು ಮರೆಯಬಾರದು. ಯಜ್ಞವೆಂದರೆ ಕೇವಲ ಹವನ ಹೋಮಾದಿಗಳು ಮಾತ್ರವಲ್ಲ. ಸರ್ವಭೂತಾತ್ಮಕನಾದ ಭಗವಂತನ ಆರಾಧನೆ ಎಂಬ ವಿಶಾಲವಾದ ಅರ್ಥದಲ್ಲಿ ತೆಗೆದುಕೊಳ್ಳಬೇಕು. ಅಶ್ಮಾದಿಗಳೇ ಮುಂತಾದ ಪದಾರ್ಥಗಳನ್ನು ಈಗ ವಿಚಾರಮಾಡೋಣ. ಅಶ್ಮವೆಂದರೆ ಕಲ್ಲು. ಇದು ಎಲ್ಲರಿಗೂ ಬೇಕು. ಮನೆಕಟ್ಟುವದರಿಂದ ಹಿಡಿದು ವಜ್ರದ ವ್ಯಾಪಾರಿ ಗಳವರೆಗೂ ಎಲ್ಲರೂ ಅಶ್ಮವನ್ನು ಬಯಸುವರು. ಮೃತ್ತಿಕಾ ಎಂದರೆ ಮಣ್ಣು. ಇದು ಎಲ್ಲಾ ಪ್ರಾಣಿಗಳಿಗೂ ಸಸ್ಯಗಳಿಗೂ ಆಶ್ರಯವಾಗಿದೆ. ವರಾಹ ಮೂರ್ತಿಯ ಸ್ಪರ್ಶದಿಂದ ಪವಿತ್ರವಾಗಿರುವದರಿಂದಲೂ ಇದು ಯಾವದೇ ವಸ್ತುವನ್ನಾಗಲೀ ತನ್ನಂತೆಯೇ ಮಾರ್ಪಡಿಸಿಕೊಂಡುಬಿಡುವದರಿಂದಲೂ ಅನೇಕ ವಿಧವಾದ ಲೋಹಗಳನ್ನು ಹೊಂದಿರುವದರಿಂದಲೂ ಮೃತ್ತಿಕೆಯು ಸರ್ವಸಾಮಾನ್ಯವಾಗಿದೆ. ಗಿರಿಗಳೆಂದರೆ ನದಿಗಳು ಹುಟ್ಟುವಂಥ ಬೆಟ್ಟಗಳು. ಪರ್ವತಗಳೆಂದರೆ ಕಲ್ಲಿನ ರಾಶಿಗಳು. ಬೆಟ್ಟಗಳ ಮೇಲೆ ದೇವಾಲಯ ಗಳಿರುವದೂ ಕೆಲವು ಬೆಟ್ಟಗಳಲ್ಲಿ ಖನಿಜಗಳೂ ಅಪೂರ್ವಪ್ರಾಣಿಗಳೂ ಸಿಗುವದು ಪ್ರಸಿದ್ಧವಾಗಿದೆ. ಆದ್ದರಿಂದ ಅವುಗಳ ಬಯಕೆಯು ನ್ಯಾಯವಾಗಿದೆ. ಸಿಕತಗಳೆಂದರೆ ಮರಳು. ಇದೂ ಸಹ ಈಗಿನ ವಿಜ್ಞಾನಪ್ರಪಂಚದಲ್ಲಿ ಕಟ್ಟಡನಿರ್ಮಾಣಾದಿಗಳಿಗೆ ಅತ್ಯುಪಯುಕ್ತವಾಗಿದೆ. ಸೈಕತವೆಂಬ ಹೆಸರಿನಿಂದ ಇದನ್ನು ಗೌರಿಹಬ್ಬದಲ್ಲಿ ನದಿಯಿಂದ ಹೊರಕ್ಕೆ ತೆಗೆದಿಟ್ಟು ಪೂಜಿಸುವದು ಎಲ್ಲರಿಗೂ ತಿಳಿದಿದೆ. ವನಸ್ಪತಿಗಳೆಂದರೆ ಹೂವು ಬಿಡದೆ ಹಣ್ಣುಮಾತ್ರ ಆಗುವ

ಅರಳೀಮರ ಮುಂತಾದವುಗಳು. ಈ ಮರಗಳೆಲ್ಲ ಒಂದು ಸಂಪದ್ರೂಪ ವಾಗಿಯೇ ಇವೆ. ಅರಣ್ಯಸಂಪತ್ತು ಸರ್ಕಾರದ ಮುಖ್ಯ ಆಸ್ತಿಗಳಲ್ಲೊಂದಾಗಿದೆ. ಮರಗಳ ಉಪಯೋಗವೂ ಮನುಷ್ಯರಿಗೆ ಚೆನ್ನಾಗಿ ತಿಳಿದೇ ಇದೆ. ಹಿರಣ್ಯವೆಂದರೆ ಚಿನ್ನವು. ಅಯ ಎಂದರೆ ಚಿನ್ನದೊಡನೆ ಪಾಠಮಾಡಿರುವದ ರಿಂದ ಬೆಳ್ಳಿ–ಎಂದರ್ಥ ಮಾಡಬೇಕು. ಹಾಗೆಂತ ನಾನಾರ್ಥಕೋಶವೂ ಇದೆ–ಎಂದು ಭಾಷ್ಯಕಾರರು ಬರೆದಿದ್ದಾರೆ. ಚಿನ್ನ ಬೆಳ್ಳಿಗಳ ಬಯಕೆ ಇವತ್ತಿನದಲ್ಲ. ಇವುಗಳ ಮೋಹವು ಮನುಷ್ಯನಿಗೆ ಯಾವ ಕಾಲದಿಂದ ಇದೆಯೊ ತಿಳಿಯದು. ಅಂತೂ ವೈದಿಕಕಾಲದಿಂದಲೂ ಇವು ಬಯಸತಕ್ಕ ಪದಾರ್ಥಗಳಾಗಿವೆ– ಎಂದು ಹೇಳಬಹುದು. ಸೀಸ, ತ್ರಪುಗಳೆಂದರೆ ಸೀಸವು ತವರವೂ ಎಂದಭಿಪ್ರಾಯ. ಶ್ಯಾಮವೆಂದರೆ ಕಪ್ಪಾದ ಲೋಹ. ಮತ್ತೊಮ್ಮೆ ಲೋಹವೆಂದಿರುವದರಿಂದ ಉಕ್ಕು ಮತ್ತು ಕಬ್ಬಿಣಗಳು ಎಂದರ್ಥ ಮಾಡಬಹುದು. ಅಗ್ನಿ ಎಂದರೆ ಇಲ್ಲಿ ಜಠರಾಗ್ನಿ ಎಂದೂ ಅಪ್ಪು ಎಂದರೆ ನೀರಿನಲ್ಲಿ ಅಡಗಿರುವ ಬೆಂಕಿಯೆಂದೂ ಅರ್ಥ. ಜಠರಾಗ್ನಿಯಿಂದ ನಮಗೆ ಬಾಯಾರಿಕೆಯುಂಟಾಗುವದು. ವೀರುಧಗಳೆಂದರೆ ಹೂವು ಮತ್ತು ಹಣ್ಣುಗಳನ್ನು ಬಿಡುವ ಬಳ್ಳಿಗಳು. ಓಷಧಿಗಳೆಂದರೆ ಸಸ್ಯಗಳು, ಪೈರುಗಳು ಎಂದರ್ಥ. ಇವೆಲ್ಲವೂ ಯಜ್ಞಕ್ಕಾಗಿ ನನಗೆ ಒದಗಲಿ ಎಂದು ಪ್ರಾರ್ಥಿಸಿದೆ.

ಈ ಭಾಗದ ಒಟ್ಟು ತಾತ್ಪರ್ಯವನ್ನು ಹೀಗೆ ಗ್ರಹಿಸಬಹುದು. ನೀರಸ ಪದಾರ್ಥಗಳಾಗಲಿ, ಸಸ್ಯವರ್ಗಗಳಾಗಲಿ–ಮನುಷ್ಯನಿಗೆ ಒಂದಲ್ಲ ಒಂದು ರೀತಿಯಿಂದ ಉಪಯುಕ್ತವಸ್ತುಗಳಾಗಿವೆ. ಮನುಷ್ಯನ ಶರೀರವೂ ಈ ಎಲ್ಲಾ ಪದಾರ್ಥಗಳ ಅಂಶದಿಂದಲೇ ಸಿದ್ಧವಾಗಿದೆ. ಆದ್ದರಿಂದಲೇ ಶರೀರದಲ್ಲಿ ಯಾವದಾದರೂ ಲವಣಾಂಶ, ಖನಿಜಾಂಶಗಳ ಕೊರತೆಯಾದಾಗ ಟಾನಿಕ್ ಗಳಿಂದ ಭರ್ತಿಮಾಡಬೇಕಾಗಿದೆ. ಆದರೆ ಭಗವಂತನ ದಯೆಯಿಂದ ಇವೆಲ್ಲ ಸರಿಯಾಗಿಯೇ ಒದಗಿ ಬಿಟ್ಟರೆ ಆತನಿಗೇಕೆ ನಾವು ಕೃತಜ್ಞರಾಗಿರಬಾರದು? ಮತ್ತು ಅವನೇ ದಯಪಾಲಿಸಿದ ವಸ್ತುಗಳನ್ನೆಲ್ಲ ಅವನ ಆರಾಧನೆಗಾಗಿಯೇ

ಏಕೆ ವಿನಿಯೋಗಿಸಬಾರದು? ಅದನ್ನೇ ಶ್ರುತಿಯು ಇಲ್ಲಿ ತಿಳಿಸುತ್ತಿದೆ. ಇನ್ನು ಸರ್ವ ಭೂತಗಳಲ್ಲಿಯೂ ನೆಲೆಸಿರುವ ಭಗವಂತನನ್ನು ನೆನೆಯಿಸಿಕೊಂಡಾಗ ಅವನ ಸೇವೆಯನ್ನು ಮಾಡಲು ನಾನಾಮುಖಗಳಿವೆ. ಕಾರ್ಖಾನೆಗಳು, ಗಣಿಗಳು, ಕೃಷಿಕ್ಷೇತ್ರಗಳೇ ಮುಂತಾದವುಗಳ ಪಾಲಕರೂ ಕಾರ್ಮಿಕರೂ ಸಹಕರಿಸಿ ತಮ್ಮ ತಮ್ಮ ಕರ್ತವ್ಯವನ್ನು ಯಜ್ಞಬುದ್ಧಿಯಿಂದ ಮಾಡುತ್ತಾ ಉತ್ಪನ್ನಗಳನ್ನು ಭಗವದ್ವಿಭೂತಿಗಳೆಂದು ಪರಿಗಣಿಸಿ ಎಲ್ಲರಿಗೂ ಸಮನಾಗಿ ಯೋಗ್ಯಬೆಲೆಗೆ ಹಂಚಿದಲ್ಲಿ ಹಸಿವಾಗಲಿ ದಾರಿದ್ರ್ಯವಾಗಲಿ ಹೇಳಹೆಸರಿಲ್ಲವಾಗುವವು. ಇದಕ್ಕಿಂತ ಹೆಚ್ಚಿನ ಕಮ್ಯೂನಿಸಂ ಯಾವದಿದ್ದೀತು?

---

## 11. ಕರ್ಮ ಚ ಮೇ ಶಕ್ತಿಶ್ಚಮೇ

ಚಮಕಾಧ್ಯಾಯದ ಐದನೆಯ ಅನುವಾಕದ ಕಡೆಯ ಭಾಗವನ್ನು ಈಗ ವಿಚಾರಮಾಡಬೇಕಾಗಿದೆ.

**ಕೃಷ್ಟಪಚ್ಯಂ ಚ ಮೇಽಕೃಷ್ಟಪಚ್ಯಂ ಚ ಮೇ ಗ್ರಾಮ್ಯಾಶ್ಚ ಮೇ ಪಶವ ಆರಣ್ಯಾಶ್ಚ ಯಜ್ಞೇನ ಕಲ್ಪಂತಾಂ ವಿತ್ತಂ ಚ ಮೇ ವಿತ್ತಿಶ್ಚ ಮೇ ಭೂತಂ ಚ ಮೇ ಭೂತಿಶ್ಚ ಮೇ ವಸು ಚ ಮೇ ವಸತಿಶ್ಚ ಮೇ ಕರ್ಮ ಚ ಮೇ ಶಕ್ತಿಶ್ಚ ಮೇಽರ್ಥಶ್ಚ ಮ ಏಮಶ್ಚ ಮ ಇತಿಶ್ಚ ಮೇ ಗತಿಶ್ಚ ಮೇ ॥**

“ಕೃಷ್ಟಪಚ್ಯವೂ ಅಕೃಷ್ಟಪಚ್ಯವೂ ಗ್ರಾಮ್ಯಾರಣ್ಯಪಶುಗಳೂ ವಿತ್ತವೂ ವಿತ್ತಿಯೂ ಭೂತವೂ ಭೂತಿಯೂ ವಸುವೂ ವಸತಿಯೂ ಕರ್ಮವೂ ಶಕ್ತಿಯೂ ಅರ್ಥವೂ ಏಮವೂ ಇತಿಯೂ ಗತಿಯೂ ನನಗೆ ಯಜ್ಞಕ್ಕಾಗಿ ಒದಗಲಿ”

ಈ ಭಾಗದಲ್ಲಿ ಐಹಿಕ ಸುಖಸಾಧನಗಳನ್ನು ಕುರಿತು ಪ್ರಾರ್ಥನೆಯಿದೆ. ಐಶ್ವರ್ಯಾದಿಗಳನ್ನು ಬಯಸುವದು ತಪ್ಪೇನೂ ಅಲ್ಲ ; ಆದರೆ ಅವುಗಳ ವಿನಿಯೋಗವು ಯಜ್ಞಕ್ಕಾಗಿ ಮೀಸಲಾಗಿರಬೇಕು. ಶ್ರೀಶಂಕರಾಚಾರ್ಯರು ತೈತ್ತಿರೀಯೋಪನಿಷತ್ತಿನ ಶೀಕ್ಷಾವಲ್ಲಿಯ ನಾಲ್ಕನೆಯ ಅನುವಾಕದ ಅರ್ಥವನ್ನು ವಿವರಿಸುವಾಗ ಹೀಗೆಂದಿರುತ್ತಾರೆ. "ಬ್ರಹ್ಮವಿದ್ಯಾಪ್ರಕರಣದಲ್ಲಿ ಶ್ರೀಕಾಮನಾದವನಿಗೆ ಜಪಹೋಮಯೋಗ್ಯವಾದ ಮಂತ್ರಗಳನ್ನು ಬರೆದಿರುವದರ ಉದ್ದೇಶವೇನೆಂದರೆ: ಧನವು ಕರ್ಮಕ್ಕೆ ಅವಶ್ಯವಾಗಿದೆ. ಪುಣ್ಯಕರ್ಮವನ್ನು ಮಾಡಿದರೆ ಮಾತ್ರವೇ ಪಾಪಕ್ಷಯವಾಗುವದು. ಹಾಗೆ ಪಾಪವು ನಾಶವಾದರೆ ಮಾತ್ರವೇ ಅಂತಃಕರಣದ ಶುದ್ಧಿಯುಂಟಾಗಿ ಬ್ರಹ್ಮವಿದ್ಯೆಯು ಅದರಲ್ಲಿ ಬೆಳಗಲು ಸಾಧ್ಯವಾದೀತು. ಆದ್ದರಿಂದ ಧನವನ್ನು ಬಯಸುವದು ಯೋಗ್ಯವೇ ಆಗಿದೆ." ಇದು ಅವರ ಅಭಿಪ್ರಾಯ. ಹೀಗಿರುವದರಿಂದ ಇಲ್ಲಿ ಕೇಳಿಕೊಂಡಿರುವ ಐಹಿಕಸುಖಸಾಧನಗಳ ವಿಷಯಕ್ಕೂ ನಾವು ಮೇಲಿನಂತೆಯೇ ತಾತ್ಪರ್ಯವನ್ನು ಕಲ್ಪಿಸಿಕೊಳ್ಳಬೇಕು.

ಈಗ ಕೃಷ್ಟಪಚ್ಯವೇ ಮುಂತಾದ ಪದಾರ್ಥಗಳ ವಿಷಯಕ್ಕೆ ವಿಚಾರಮಾಡೋಣ. ಕೃಷ್ಟಪಚ್ಯವೆಂದರೆ ನಾವು ತಿನ್ನಲು ಯೋಗ್ಯವಾದ ಪೈರು ಪಚ್ಚೆಗಳು. ಭತ್ತ , ಗೋಧಿ, ಹೆಸರು, ತೊಗರಿ, ಎಳ್ಳು–ಮುಂತಾದ ಧಾನ್ಯಗಳೂ ತರಕಾರಿಗಳೂ ಹಣ್ಣುಗಳೂ ಇದರಲ್ಲಿ ಸೇರುತ್ತವೆ. ಇವುಗಳನ್ನೆಲ್ಲ ಭೂಮಿಯಲ್ಲಿ ಕಾಲಕ್ಕೆ ಸರಿಯಾಗಿ ಬಿತ್ತಿ ಪೈರುಮಾಡಿಕೊಳ್ಳಬೇಕು. ಅಕೃಷ್ಟಪಚ್ಯವೆಂದರೆ ನಾವು ಬೀಜಗಳನ್ನು ಹಾಕದೆ ಇದ್ದರೂ ದೈವಸೃಷ್ಟಿಯಲ್ಲಿ ಗಾಳಿ, ನೀರು–ಮುಂತಾದವುಗಳ ಚಲನೆಯಿಂದ ತಾವಾಗಿ ಬೆಳೆಯುವ ಸಸ್ಯಗಳು. ಕಾಡುಗಳನ್ನು ಇದಕ್ಕೆ ಉದಾಹರಣೆಯಾಗಿ ಹೇಳಬಹುದು. ಹಾಗೆಯೇ ಗ್ರಾಮ್ಯಾರಣ್ಯಪಶುಗಳು. ಗ್ರಾಮದಲ್ಲಿ ನಮ್ಮೊಡನೆಯೇ ವಾಸಮಾಡುವ ಹಸು, ಎಮ್ಮೆ, ಕುರಿ, ಆಡು– ಮುಂತಾದವು ಗ್ರಾಮಪಶುಗಳು. ಅರಣ್ಯಗಳೆಂದರೆ ಹುಲಿ, ಸಿಂಹ, ನರಿ, ತೋಳ, ಕಾಡಾನೆ, ಜಿಂಕೆ– ಮುಂತಾದವುಗಳು. ಇವುಗಳಿಂದಲೂ ನಮಗೆ

ಪರಂಪರೆಯಿಂದ ಉಪಯೋಗವುಂಟು. ಉದಾಹರಣೆಗೆ ಹುಲಿಯ ಮತ್ತು ಜಿಂಕೆಯ ಚರ್ಮಗಳನ್ನೂ ಆನೆಯ ದಂತವನ್ನೂ ನಾವು ಉಪಯೋಗಿಸುವೆವು. ಕೆಲವರು ಈ ಕಾಡುಪ್ರಾಣಿಗಳನ್ನು ವಿನೋದಕ್ಕಾಗಿ ಬೇಟೆಮಾಡುವದೂ ಸರ್ಕಸ್‌ನವರು ಇಂಥವುಗಳನ್ನು ಪಳಗಿಸಿ ಪ್ರದರ್ಶಿಸುವದೂ ಪ್ರಸಿದ್ಧವಾಗಿವೆ. ಕೆಲವು ಯಜ್ಞಗಳಲ್ಲಿ ದೇವತೆಗಳಿಗಾಗಿ ಅರಣ್ಯಪಶುಗಳ ಬಲಿಯನ್ನು ವೇದದಲ್ಲಿ ವಿಧಿಸಿದೆ. ಆದ್ದರಿಂದ ಇವೆಲ್ಲವೂ ಯಜ್ಞಕ್ಕಾಗಿ ಬೇಕೆಂಬ ಪ್ರಾರ್ಥನೆಯು ಯುಕ್ತವಾಗಿದೆ.

ಈಗ **ವಿತ್ತ–ವಿತ್ತಿ**ಗಳನ್ನು ವಿಚಾರಿಸೋಣ. ಪಿತ್ರಾರ್ಜಿತವಾದ ಧನವನ್ನು **ವಿತ್ತ**ವೆಂದೂ ಸ್ವಯಾರ್ಜಿತಧನವನ್ನು **ವಿತ್ತಿ**ಯೆಂದೂ ಕರೆಯಲಾಗಿದೆ. ಕೆಲವರಿಗೆ ಪಿತ್ರಾರ್ಜಿತವಾದ ಆಸ್ತಿಗಳೇನೂ ಇಲ್ಲದಿರಬಹುದು. ಆದರೂ ಈ ಶರೀರವೇ ತಂದೆತಾಯಿಗಳ ಕೊಡುಗೆಯಾದ್ದರಿಂದ ಯಾರೊಬ್ಬರೂ ಇಂಥ ಪಿತ್ರಾರ್ಜಿತ ಆಸ್ತಿಯು ಇಲ್ಲವೆನ್ನುವಂತಿಲ್ಲ. ಜೊತೆಗೆ ಧನಕನಕಭೂಮ್ಯಾದಿಗಳೂ ಇದ್ದರೆ ಸಂತೋಷ. ವಿತ್ತಿಯೆಂಬುದು ತಾನು ಧರ್ಮಕ್ಕೆ ವಿರೋಧವಿಲ್ಲದಂತೆ ಸಂಪಾದಿಸಿರುವ ಆಸ್ತಿಯು. ಹಾಗೆಯೇ **ಭೂತ**ವೆಂದರೆ ಗುಪ್ತವಾದ ಧನವು. **ಭೂತಿ**ಯೆಂದರೆ ಎದ್ದುಕಾಣುವ ಐಶ್ವರ್ಯವು. ಮನೆ, ಹೊಲ, ಒಡವೆ ವಸ್ತುಗಳು, ಇವು ಪ್ರಕಟಧನಗಳು. ವಿವೇಕ, ಆಸ್ತಿಕ್ಯ, ಭಕ್ತಿ ಶ್ರದ್ಧೆ ವಿದ್ಯೆ, ದಾನ, ಪರೋಪಕಾರಾದಿಗಳನ್ನು ಗುಪ್ತಧನವೆಂದು ಹೆಸರಿಸಬಹುದು. ಗುಪ್ತಧನದ ಸಂಪಾದನೆಯೇ ಕಷ್ಟತರವಾದುದು. ಇದಕ್ಕೆ ಹೆಚ್ಚಿನ ಈಶ್ವರಾನುಗ್ರಹವು ಬೇಕು. ಪ್ರಕಟಧನವೂ ಭಗವದನುಗ್ರಹದಿಂದಲೇ ದೊರಕುತ್ತದೆಯೆಂಬುದೂ ನಿಜ. ಹಾಗೆಯೇ **ವಸು–ವಸತಿಗಳು. ವಸು** ಎಂದರೆ ಗೃಹೋಪರಕರಣ ವಸ್ತುಗಳು ಎಂದರ್ಥ. ಇವು ಯಜ್ಞಕ್ಕೆ ಸಂಬಂಧಪಟ್ಟವಾಗಿರಬೇಕು. ಈಗಿನ ಕಾಲದಲ್ಲಿ ಮನೆಯ ತುಂಬ ಕುರ್ಚಿ, ಮೇಜುಗಳು, ಬೀರುಗಳು, ಮಂಚ, ಸೋಫಾ, ಸ್ಟೀರಿಯೋ, ರೆಫ್ರಿಜಿರೇಟರ್ ಇತ್ಯಾದಿಗಳು ತುಂಬಿರುವವು. ನಗರಗಳಲ್ಲಿ ಕೆಲವರ ಮನೆಗಳಲ್ಲಿ ಇವೇ ಅಧಿಕವಾಗಿದ್ದು

ಮನುಷ್ಯರಿಗಿಂತ ಇವುಗಳ ಸಂಖ್ಯೆಯೇ ಮಿತಿಮೀರಿದ್ದು ಮನೆಬಾಡಿಗೆಯ ಹೆಚ್ಚುಪಾಲು ಇವುಗಳಿಗೇ ಅನ್ವಯಿಸುವದು. ಇಂಥವುಗಳನ್ನು ಇಲ್ಲಿ ಹೇಳಿಲ್ಲ. ಆದರೂ ಇವು ಮಿತವಾಗಿದ್ದು ಗೃಹವು ವಸತಿಯುಕ್ತವಾಗಿರುವಂತೆ ನೋಡಿಕೊಳ್ಳಬೇಕು. ವಸತಿ ಎಂಬುದು ವೈಶಾಲ್ಯವನ್ನು ಸೂಚಿಸುತ್ತದೆ. ಕರ್ಮಾನುಷ್ಠಾನಗಳಿಗೆ ವಿಶಾಲವಾದ ಜಾಗವು ಅಗತ್ಯ. ಆಯಾ ಕರ್ಮಗಳಿಗೆ ತಕ್ಕಂತೆ ಉಪಕರಣಸಾಮಗ್ರಿಗಳ ಜೋಡಣೆಯೂ ಇರಬೇಕು. ಅದನ್ನೇ ವಸು ಎಂದು ಕರೆದಿದೆ. ಇಷ್ಟೆಲ್ಲ ಸೌಕರ್ಯಗಳನ್ನು ಕೇಳಿಕೊಂಡ ಮೇಲೆ ಕರ್ಮ–ಶಕ್ತಿಗಳನ್ನು ಪ್ರಾರ್ಥಿಸಲಾಗಿದೆ. ಕರ್ಮಗಳೆಂದರೆ ಯಜ್ಞಾದಿಗಳೆಂಬ ಪ್ರಸಿದ್ಧಾರ್ಥವನ್ನೇ ಸ್ವೀಕರಿಸಬೇಕು. ಅನುಷ್ಠೇಯಕರ್ಮಗಳಿಗೇನೂ ಕೊರತೆಯಿಲ್ಲ. ಆದರೆ ಅವುಗಳನ್ನು ಶ್ರದ್ಧಾಭಕ್ತಿಗಳಿಂದ ಅನುಷ್ಠಾನ ಮಾಡುವವರೇ ಈಗ ಕಡಿಮೆಯಾಗಿದ್ದಾರೆ. ಕೆಲವರಿಗೆ ಕರ್ಮಶ್ರದ್ಧೆಯಿದ್ದರೂ ಶಕ್ತಿಯಿರುವದಿಲ್ಲ. ಶಕ್ತಿ ಎಂಬುದು ಆರ್ಥಿಕವಾಗಿಯೂ ದೈಹಿಕವಾಗಿಯೂ ಎರಡೂ ರೀತಿಯಲ್ಲಿ ಬೇಕಾಗುತ್ತದೆ. ಕರ್ಮವನ್ನು ಮಾಡುವಾಗ ಉಂಟಾಗುವ ಆಯಾಸವನ್ನು ತಡೆದುಕೊಳ್ಳುವ ಶಕ್ತಿಯೂ ಕರ್ಮಕ್ಕೆ ಬೇಕಾದ ಸಾಮಗ್ರಿಗಳನ್ನು ಒದಗಿಸಿಕೊಳ್ಳಲು ಹಣದ ಶಕ್ತಿಯೂ ಬೇಕು–ಎಂಬುದನ್ನು ಬೇರೆಯಾಗಿ ಹೇಳಬೇಕಾಗಿಲ್ಲ.

ಅರ್ಥ–ಏಮಗಳನ್ನು ಈಗ ವಿಚಾರಮಾಡೋಣ. ಅರ್ಥವೆಂದರೆ ಅರ್ಥಶಾಸ್ತ್ರವೆಂದು ಭಾಷ್ಯದಲ್ಲಿ ಬರೆದು ಕಲಾಕೌಶಲ್ಯವೆಂತ ವಿವರಿಸಿದೆ. ಏಮವೆಂದರೆ ಈ ಲೋಕದ ಯಶಸ್ಸು ಅಥವಾ ಕೀರ್ತಿಯೆಂದರ್ಥ. ಕಲಾಕೌಶಲ್ಯವೆಂಬುದನ್ನು ಅನೇಕ ರೀತಿಯಲ್ಲಿ ವಿವರಿಸಬಹುದಾಗಿದೆ ಯಾದರೂ ಯಜ್ಞಕ್ಕಾಗಿ ಉಪಯುಕ್ತವಾಗಬಹುದಾದ ಕಲಾಕೌಶಲವು ಮಾತ್ರ ಗ್ರಾಹ್ಯವೆಂದು ತಿಳಿಯಬೇಕು. ಅಥವಾ ಯಾವದೇ ಕಲೆಯನ್ನು ಯಜ್ಞ ರೂಪವಾಗಿಯೇ ಪರಿವರ್ತಿಸಿ ಭಗವಂತನಿಗೆ ಸಮರ್ಪಿಸಿದರೂ ಆಗಬಹುದು. ಈ ವಿಶಾಲಾರ್ಥದಲ್ಲಿ ಸಂಗೀತ, ಶಿಲ್ಪ, ಚಿತ್ರ, ನಾಟ್ಯ, ವಿಜ್ಞಾನ–ಇವುಗಳನ್ನೆಲ್ಲ

ಸೇರಿಸಿಕೊಳ್ಳಬಹುದು. ಇವುಗಳ ಗುರಿಯೂ ಆಯಾ ಶಾಸ್ತ್ರಕಾರರ ಉದ್ದೇಶದಂತೆ ಭಗವದಾರಾಧನೆಯೇ ಆಗಿದ್ದರೂ ಜನರು ಸ್ವಾರ್ಥಕ್ಕಾಗಿಯೂ ಮನೋರಂಜನೆಗಾಗಿಯೂ ಇವುಗಳನ್ನು ಉಪಯೋಗಿಸಿಕೊಳ್ಳುವದು ಈಗ ಹೆಚ್ಚಾಗಿದೆ. ಹಿಂದಿನಕಾಲದಲ್ಲಿದೇವಾಲಯಗಳ ನಿರ್ಮಾಣ, ದೇವರ ಸನ್ನಿಧಿಯಲ್ಲಿ ಭರತನಾಟ್ಯ, ಸಂಗೀತ–ಮುಂತಾದವು ನಡೆಯುತ್ತಿದ್ದವು. ಅಲ್ಲಿ ಎಲ್ಲಾ ಕಲೆಗಳೂ ಭಗವಂತನಿಗೇ ಅರ್ಪಿತವಾಗುತ್ತಿತ್ತು. ಮನೋರಂಜನೆಯು ಎರಡನೆಯದಾಗಿತ್ತು. ಆಗ ಕಲಾಕಾರರ ಮಟ್ಟವು ಉತ್ತಮವಾಗಿಯೇ ಇತ್ತು. ಅದನ್ನೇ ಯಜ್ಞವೆಂದು ಕರೆಯುತ್ತಿದ್ದರು. ಈಗಲೂ ನಾವು ಕಲೆಗಳನ್ನು ಭಗವಂತನ ಹೆಸರಿನಲ್ಲಿಯೇ ಪ್ರದರ್ಶನ ಮಾಡಬೇಕಾಗಿದೆ. ಪ್ರಕೃತಿ ಸೌಂದರ್ಯವೂ ಭಗವಂತನ ಮಹಿಮೆಯೇ ಆದ್ದರಿಂದ ಪ್ರಕೃತಿಯನ್ನು ಕಲೆಯಲ್ಲಿ ಪ್ರತಿಬಿಂಬಿಸಿದರೂ ಗುರಿಯಲ್ಲಿ ವ್ಯತ್ಯಾಸವೇನೂ ಆಗುವದಿಲ್ಲ. ದೇವರನ್ನು ಮರೆತಿರುವದು ಮಾತ್ರ ನಮ್ಮ ತಪ್ಪಾಗಿದೆ. ಇರಲಿ. ಏಮವೆಂದು ತಿಳಿಸಿರುವ ಯಶಸ್ಸು ಕೂಡ ಭಗವಂತನ ವಿಭೂತಿಯೇ. 'ಆತನ ಹೆಸರೇ ಯಶಸ್ಸು' (ತಸ್ಯ ನಾಮ ಮಹದ್ಯಶಃ) ಎಂದು ಉಪನಿಷತ್ತು ತಿಳಿಸುತ್ತಿದೆ. ಆದ್ದರಿಂದ ಯಶೋವಂತನಾದ ಭಗವಂತನ ಆರಾಧನೆಯಿಂದ ನಾವು ಪವಿತ್ರವಾದ ಯಶಸ್ಸನ್ನು ಗಳಿಸಿಕೊಳ್ಳಬೇಕಾಗಿದೆ.

ಕಡೆಯದಾಗಿ ಇತಿ–ಗತಿಗಳು. ಇತಿ ಎಂದರೆ ಸಂಕಲ್ಪಸಿದ್ಧಿಗಳು. ಗತಿ ಎಂದರೆ ಸ್ವರ್ಗಾದಿಗಳು. ನಮ್ಮ ಸಂಕಲ್ಪಗಳಲ್ಲಿ ಬಹಳ ಸಂಖ್ಯೆಯವು ವ್ಯರ್ಥವಾಗುತ್ತಿವೆ. ಅಂಥವುಗಳನ್ನು ಮಾಡಬಾರದೆಂದೇ ಅಭಿಪ್ರಾಯ. ಸಂಕಲ್ಪವು ಒಂದೇ ಆಗಿದ್ದರೂ ಸಾಕು. ಶ್ರಮಪಟ್ಟಾದರೂ ಅದನ್ನು ಸೂಕ್ತ ರೀತಿಯಿಂದ ನೆರವೇರಿಸಿಕೊಳ್ಳಬೇಕು. ಕೆಲವು ವೇಳೆ ಹಿರಿಯರು ಮಾಡಿದ್ದ ಸಂಕಲ್ಪಗಳನ್ನು ಅವರ ಮಕ್ಕಳು ಸತ್ಪುರುಷರಾಗಿದ್ದರೆ ನೆರವೇರಿಸುವುದುಂಟು. ಇದರಿಂದ ಹಿರಿಯರಿಗೆ ಸದ್ಗತಿಯಾದೀತು. ಭಗೀರತನು ತನ್ನ ಮುತ್ತಜ್ಜನು ಮಾಡಿದ್ದ ಸಂಕಲ್ಪವನ್ನು ನೆರವೇರಿಸಿ ಎಂದರೆ ಗಂಗೆಯನ್ನು ಸ್ವರ್ಗಲೋಕದಿಂದ

ತಂದು ತನ್ನ ತಾತಂದಿರನ್ನು ಉದ್ಧಾರಮಾಡಿದ ಕಥೆ ಪ್ರಸಿದ್ಧವಾದುದು. ಈಗಲೂ ಕೆಲವು ಮಹನೀಯರು ಹೀಗೆ ಪೂರ್ವಜರ ಸಂಕಲ್ಪಗಳನ್ನು ಕಾರ್ಯಗತ ಮಾಡುತ್ತಿದ್ದಾರೆ. ಹೀಗೆ ನಾವು ಸಂಕಲ್ಪಗಳನ್ನು ಆಮುಷ್ಮಿಕಫಲಪ್ರಾಪ್ತಿಗಾಗಿ ಮಾಡಬೇಕೇ ಹೊರತು ಕ್ಷುದ್ರಫಲಗಳಿಗಾಗಿ ಅಲ್ಲ–ಎಂಬಿದು ಇದರಿಂದ ಗೊತ್ತಾಗುತ್ತದೆ. ಆದ್ದರಿಂದ ನಾವು ಉತ್ತಮವಾದ ಶಿವವಾದ ಸಂಕಲ್ಪಗಳನ್ನು ಕೈಗೊಂಡು ಕೃತಕೃತ್ಯರಾಗೋಣ.

---

## 12. ಅಗ್ನಿಶ್ಚ ಮ ಇಂದ್ರಶ್ಚ ಮೇ

ಚಮಕಾಧ್ಯಾಯದ ಆರನೆಯ ಅನುವಾಕವನ್ನು ಈಗ ವಿಚಾರ ಮಾಡಬೇಕಾಗಿದೆ.

ಅಗ್ನಿಶ್ಚ ಮ ಇಂದ್ರಶ್ಚ ಮೇ ಸೋಮಶ್ಚ ಮ ಇಂದ್ರಶ್ಚ ಮೇ ಸವಿತಾ ಚ ಮ ಇಂದ್ರಶ್ಚ ಮೇ ಸರಸ್ವತೀ ಚ ಮ ಇಂದ್ರಶ್ಚ ಮೇ ಪೂಷಾ ಚ ಮ ಇಂದ್ರಶ್ಚ ಮೇ ಬೃಹಸ್ಪತಿಶ್ಚ ಮ ಇಂದ್ರಶ್ಚ ಮೇ ಮಿತ್ರಶ್ಚ ಮ ಇಂದ್ರಶ್ಚ ಮೇ ವರುಣಶ್ಚ ಮ ಇಂದ್ರಶ್ಚ ಮೇ ತ್ವಷ್ಟಾ ಚ ಮ ಇಂದ್ರಶ್ಚ ಮೇ ಧಾತಾ ಚ ಮ ಇಂದ್ರಶ್ಚ ಮೇ ವಿಷ್ಣುಶ್ಚ ಮ ಇಂದ್ರಶ್ಚ ಮೇಽಶ್ವಿನೌ ಚ ಮ ಇಂದ್ರಶ್ಚ ಮೇ ಮರುತಶ್ಚ ಮ ಇಂದ್ರಶ್ಚ ಮೇ ವಿಶ್ವೇ ಚ ಮೇ ದೇವಾ ಇಂದ್ರಶ್ಚ ಮೇ ಪೃಥಿವೀ ಚ ಮ ಇಂದ್ರಶ್ಚ ಮೇಂತರಿಕ್ಷಂ ಚ ಮ ಇಂದ್ರಶ್ಚ ಮೇ ದ್ಯೌಶ್ಚಮ ಇಂದ್ರಶ್ಚ ಮೇ ದಿಶಶ್ಚ ಮ ಇಂದ್ರಶ್ಚ ಮೇ ಮೂರ್ಧಾ ಚ ಮ ಇಂದ್ರಶ್ಚ ಮೇ ಪ್ರಜಾಪತಿಶ್ಚ ಮ ಇಂದ್ರಶ್ಚ ಮೇ ॥

'ಅಗ್ನಿಯೂ ಇಂದ್ರನೂ ಸೋಮನೂ... ಸವಿತೃವೂ... ಸರಸ್ವತಿಯೂ... ಪೂಷನೂ... ಬೃಹಸ್ಪತಿಯೂ... ಮಿತ್ರನೂ... ವರುಣನೂ... ತ್ವಷ್ಟೃವೂ... ಧಾತೃವೂ... ವಿಷ್ಣುವೂ... ಅಶ್ವಿನಿ ದೇವತೆಗಳೂ... ಮರುತ್ತುಗಳೂ... ವಿಶ್ವೇದೇವತೆಗಳೂ... ಪೃಥಿವಿಯೂ... ಅಂತರಿಕ್ಷವೂ... ದ್ಯುಲೋಕವೂ... ದಿಕ್ಕುಗಳೂ.... ಮೂರ್ಧವೂ... ಪ್ರಜಾಪತಿಯೂ ನನ್ನ ಶ್ರೇಯಸ್ಸಿಗೆ ಕಾರಣರಾಗಲಿ!'

(ಎಲ್ಲಾ ದೇವತೆಗಳೊಡನೆಯೂ ....ಗಳಲ್ಲಿ ಇಂದ್ರನನ್ನು ಸೇರಿಸಿಕೊಳ್ಳಬೇಕು).

ಹಿಂದಿನ ಎರಡು ಅನುವಾಕಗಳಲ್ಲಿ ಸಾಂಸಾರಿಕ ಸುಖಗಳನ್ನು ಕುರಿತು ಪ್ರಾರ್ಥಿಸಿಕೊಂಡ ಅನಂತರ ಈಗ ಆಮುಷ್ಮಿಕ ಸುಖಗಳ ಪ್ರಾರ್ಥನೆಗಾಗಿ ಉಪಕ್ರಮಿಸಲಾಗಿದೆ. ಆದರೆ ಪರಲೋಕದ ಸುಖಗಳು ದೇವತೆಗಳ ಪ್ರಸಾದದಿಂದ ಮಾತ್ರವೇ ಲಭ್ಯವಾಗತಕ್ಕವು. ಅವುಗಳನ್ನು ಭೂಲೋಕದ ಯಾವುದೇ ಹಣ, ಅಧಿಕಾರ, ಶಿಫಾರಸು, ಬಲಾತ್ಕಾರಗಳಿಂದ ಪಡೆಯುವದು ಸಾಧ್ಯವಿಲ್ಲ. ಮತ್ತು ಅಪಹರಿಸಲೂ ಬರುವಂಥದ್ದಲ್ಲ–ಆದ್ದರಿಂದ ದೇವತೆಗಳನ್ನೇ ಮೊರೆಹೊಕ್ಕು ಅವುಗಳನ್ನು ಸಂಪಾದಿಸಿಕೊಳ್ಳಬೇಕು. ದೇವತೆಗಳಾದರೊ, ತಮ್ಮ ರಾಜನಾದ ಇಂದ್ರನಿಗೆ ಅಧೀನರಾಗಿರುವರು. ಇಂದ್ರನೆಂದರೆ ತ್ರೈಲೋಕ್ಯಾಧಿಪತಿಯು. ಆಧ್ಯಾತ್ಮಿಕವಾಗಿ ನೋಡಿದರೆ ಇಂದ್ರನೆಂದರೆ ಪರಮೇಶ್ವರನೇ. ಭಗವಂತನಿಗೆ ಇಂದ್ರನೆಂಬ ಹೆಸರು ಬರಲು ಕಾರಣವೇನೆಂದರೆ: 'ಇದಂ ದ್ರ' ಎಂಬ ಹೆಸರೇ ಇಂದ್ರನೆಂದಾಗಿದೆ–ಎಂದು ಐತರೇಯೋಪನಿಷತ್ತಿನಲ್ಲಿ ತಿಳಿಸಿದೆ. ಅಲ್ಲಿ ಹೇಳಿರುವಂತೆ: ಜೀವಾತ್ಮರೂಪದಿಂದ ಶರೀರವನ್ನು ಪ್ರವೇಶಿಸಿದ ಪರಮಾತ್ಮನು ಇದಂ ಎಂಬ ಬ್ರಹ್ಮವನ್ನು ತಾನೇ–ಎಂದು ದ್ರ–ಕಂಡುಕೊಂಡನು. ಆಗ ಇಂದ್ರನೆಂದೇ ಪರಬ್ರಹ್ಮಕ್ಕೆ ಹೆಸರಾಯಿತು. ದೇವತೆಗಳು ಪರೋಕ್ಷಪ್ರಿಯರು–ಎಂದರೆ ಅಡ್ಡ ಹೆಸರಿನಲ್ಲಿ ಪ್ರೀತಿಯುಳ್ಳವರಾದ್ದರಿಂದ ಇದಂದ್ರನೆಂಬುದು ಇಂದ್ರನೆಂದಾಯಿತು. ಅಂತೂ

ಇಂದ್ರನೆಂಬುವನು ಎಲ್ಲಾ ದೇವತೆಗಳ ಅಂತರಾತ್ಮನೇ ಆದ್ದರಿಂದ ಪ್ರತಿಯೊಂದು ದೇವತೆಗಳೊಡನೆಯೂ ಇಲ್ಲಿ ಇಂದ್ರನನ್ನು ನಿರ್ದೇಶಿಸಿ ತಿಳಿಸಲಾಗಿದೆ. ಆತ್ಮನೇ ಪ್ರೇರಕನು. ಸರ್ವಾಂತರ್ಯಾಮಿಯು. ಸರ್ವರಿಗೂ ಆಮುಷ್ಮಿಕಕರ್ಮ ಫಲದಾತನು, ಪರಮೇಶ್ವರನು–ಎಂದಭಿಪ್ರಾಯ.

ಈಗ ದೇವತೆಗಳ ವಿವರವನ್ನು ತಿಳಿಯೋಣ. **ಅಗ್ನಿ** ಎಂದರೆ 'ಅತ್ತಿ ಇತ್ಯಗ್ನಿಃ' ಎಂಬ ವ್ಯುತ್ಪತ್ತಿಯಂತೆ ಜೀವತತ್ತ್ವವೆಂದರ್ಥ. ಆತನು ಇಂದ್ರನೇ, ಪರಮಾತ್ಮನೇ ಎಂದರ್ಥ. ಇದೇ ರೀತಿಯಾಗಿ ಎಲ್ಲಾ ಪರ್ಯಾಯಗಳಿಗೂ ತಿಳಿಯಬೇಕು. **ಸೋಮ**ನೆಂಬುವನು ಉಮಾಸಹಿತನಾದ ರುದ್ರನು. **ಸವಿತಾ** ಎಂದರೆ ಎಲ್ಲರನ್ನೂ ಪ್ರಸವಿಸುವವನು ಬ್ರಹ್ಮನು. ಆತನ ಶಕ್ತಿಯೇ ಸರಸ್ವತಿಯು. ಸ್ತ್ರೀಪುಂವಾಚಕವಾಗಿರುವ ಎಲ್ಲಾ ಶಬ್ದಗಳೂ ಪರಬ್ರಹ್ಮವಾಚಕವೇ ಆಗಿರುತ್ತವೆ–ಎಂದು ತಿಳಿಯಬೇಕು. ಸಕಲದೇವತೆಗಳನ್ನೂ ಪೋಷಣೆ ಮಾಡುತ್ತಿರುವ ಅಹಂಕಾರತತ್ತ್ವವೇ **ಪೂಷನು**. ಬುದ್ಧಿಗೆ ಅಧಿಷ್ಠಾತೃವಾದ ಆ ಇಂದ್ರನೇ ಬೃಹಸ್ಪತಿಯು. ಮೃತ್ಯುವಿನಿಂದ ನಮ್ಮನ್ನು ಕಾಪಾಡುವ ಇಂದ್ರನೇ **ಮಿತ್ರನು**. ಈತನು ಮನಸ್ಸಿಗೆ ಒಡೆಯನು. ಮನಸ್ಸು ಧೈರ್ಯದಿಂದಿದ್ದರೆ ಆರೋಗ್ಯವೂ ಆಯುಷ್ಯವೂ ಸಿದ್ಧಿಸುವದು. ಭಯಗೊಂಡರೆ ರೋಗವೂ ಮೃತ್ಯುವೂ ಸಂಭವಿಸುತ್ತವೆ. ಆದ್ದರಿಂದ ಮಿತ್ರನನ್ನು ಮನಸಸ್ಪತಿಯೆಂದು ಕರೆಯಲಾಗಿದೆ. ಇಂದ್ರನೇ ಚಿದ್ರೂಪದಿಂದ **ವರುಣ**ನೆನಿಸುವನು. ತ್ರಿಕಾಲದರ್ಶಿಯಾದ ಆತನು ಜ್ಯೋತಿರ್ವಿದ್ಯಾಧಿಪತಿಯು. ಇಲ್ಲಿ ಬುದ್ಧಿ ಮನಸ್ಸು, ಚಿತ್ತಗಳಿಗೆ ಕ್ರಮವಾಗಿ ಬೃಹಸ್ಪತಿ, ಮಿತ್ರ, ವರುಣ–ಎಂಬ ದೇವತೆಗಳನ್ನು ಹೇಳುವದರ ಮೂಲಕ ಬ್ರಹ್ಮವಿದ್ಯೆ, ಆಯುರ್ವೇದ. ಜ್ಯೋತಿರ್ವಿದ್ಯೆ (ಜ್ಯೌತಿಷ) ಗಳನ್ನು ಪ್ರಾರ್ಥಿಸಿದಂತಾಗಿದೆ. ಈ ಮೂರು ವಿದ್ಯೆಗಳಿಗೆ ಉಪವಿದ್ಯೆಗಳಾಗಿ ಇನ್ನೂ ಐದನ್ನು ಮುಂದೆ ಹೇಳಲಿದ್ದಾರೆ. ಕೇಳಿರಿ.

**ತ್ವಷ್ಟಾ**–ಎಂಬ ದೇವತೆಯೂ ಇಂದ್ರನೇ. ಆತನು ಚಕ್ಷುರ್ವಿದ್ಯಾಧಿ ಪತಿಯು. ಬಹುದೂರದಲ್ಲಿರುವ ವಸ್ತುವೂ ಅಡ್ಡಿಗಳಿದ್ದರೂ ಕಾಣಬೇಕಾದರೆ

ಈತನ ಅನುಗ್ರಹವು ಬೇಕು. ಹಾಗೆಯೇ ಧಾತಾ ಎಂಬುವನು ದೂರಶ್ರವಣ ವಿದ್ಯಾಧಿಪತಿಯು. ಈತನು ಕಿವಿಯನ್ನಾಶ್ರಯಿಸಿರುವನು. ವಿಷ್ಣುವೆಂಬುವನು ರಸನೇಂದ್ರಿಯಾಧಿಪತಿಯು. ಈತನ ಅನುಗ್ರಹವಾದರೆ ಯಾವದೇ ಲೋಕದ ವಸ್ತುಗಳ ರುಚಿಯನ್ನಾದರೂ ಸವಿಯಬಹುದು. ಅಶ್ವಿನರೆಂಬ ಜೋಡಿಯ ದೇವತೆಗಳು ಗಂಧಗ್ರಹಣಕ್ಕೆ ಅಧಿಪತಿಗಳು. ದೂರದಲ್ಲಿರುವ ಗಂಧವೂ ಇವರ ಬಲದಿಂದ ಲಭ್ಯವಾಗುತ್ತದೆ. ಮರುತ್ ಎಂಬ ದೇವತೆಯು ಪ್ರಾಣಾಶ್ರಯನಾಗಿರುತ್ತಾನೆ. ಇವನು ದೂರದಲ್ಲಿರುವ ಸ್ಪರ್ಶಜ್ಞಾನಕ್ಕೆ ಕಾರಣನಾಗಿರುತ್ತಾನೆ. ಹೀಗೆ ದೂರಶ್ರವಣ, ದರ್ಶನ, ಆಸ್ವಾದನ, ಗಂಧಾಘ್ರಾಣ, ಸ್ಪರ್ಶವೇ– ಮುಂತಾದ ವಿದ್ಯೆಗಳಿಗೆ ಅನುಗ್ರಾಹಕರೂ ಉತ್ಕೃಷ್ಟ ವಾದ ಈ ಶಬ್ದಸ್ಪರ್ಶ ರೂಪಾದಿಗಳ ದಾತೃಗಳೂ ಆದ ದೇವತೆಗಳೆಲ್ಲರೂ ಇಂದ್ರನೇ ಆಗಿರುತ್ತಾರೆ. ಇಂಥ ಇಂದ್ರನು ಯಾವಾಗಲೂ ನನ್ನನ್ನು ಅನುಗ್ರಹಿಸಲಿ–ಎಂದು ಅಭಿಪ್ರಾಯ.

ಈಗ ಇನ್ನುಳಿದ ದೇವತೆಗಳನ್ನೆಲ್ಲ ಒಟ್ಟುಗೂಡಿಸಿ ವಿಶ್ವೇದೇವಾಃ ಎಂದ ತಿಳಿಸಲಾಗಿದೆ. ಎಲ್ಲಾ ದೇವತೆಗಳೂ ನನಗೆ ಶ್ರೇಯಃಪ್ರದರಾಗಲಿ, ಎಂದಭಿಪ್ರಾಯ. ಅವರುಗಳಲ್ಲಿ ಮನುಷ್ಯನಿಗೆ ಹೆಚ್ಚು ಸಂಬಂಧಿಸಿದಂಥ ಕೆಲವು ದೇವತೆಗಳನ್ನು ಮತ್ತೆ ಹೆಸರಿಸಲಾಗಿದೆ. ಹೇಗೆಂದರೆ: ಪೃಥಿವಿಯು. ಈ ದೇವತೆಯೂ ಇಂದ್ರಾತ್ಮಕಳೇ ಆಗಿರುತ್ತಾಳೆ. ಅಂತರಿಕ್ಷವು; ಇದು ಪ್ರಸಿದ್ಧವಾಗಿದೆ. ದ್ಯುಲೋಕವೆಂಬುದು ಸ್ವರ್ಗದ ಹೆಸರು. ಈ ಮೂರು ಲೋಕಾಭಿಮಾನಿದೇವತೆಗಳೂ ತಮ್ಮ ಅಂತರ್ಯಾಮಿಯಾದ ಇಂದ್ರನ ಆಳ್ವಿಕೆಗೆ ಒಳಪಟ್ಟವರಾದ್ದರಿಂದ ಆ ಇಂದ್ರನ ದಯೆಯು ನಮ್ಮ ಮೇಲೆ ಇರಲಿ–ಎಂದು ಇಲ್ಲಿ ಪ್ರಾರ್ಥಿಸಲಾಗಿದೆ.

ಇನ್ನು ದಿಗ್ದೇವತೆಗಳು. ವೈದಿಕರು ಸಂಧ್ಯಾವಂದನೆಯ ಕಾಲದಲ್ಲಿ ಹೇಳುವ ಮಂತ್ರವೊಂದು ಹೀಗಿದೆ: 'ನಮಃ ಪ್ರಾಚ್ಯೈ ದಿಶೇ ಯಾಶ್ಚ ದೇವತಾ ಏತಸ್ಯಾಂ ಪ್ರತಿವಸಂತಿ ಏತಾಭ್ಯಶ್ಚ ನಮಃ......' (ಪೂರ್ವ ದಿಕ್ಕಿಗೆ

ನಮಸ್ಕಾರ. ಮತ್ತು ಈ ದಿಕ್ಕಿನಲ್ಲಿ ವಾಸಮಾಡುತ್ತಿರುವ ದೇವತೆಗಳಿಗೂ ನಮಸ್ಕಾರ)–ಎಂಬೀ ಮಂತ್ರದಲ್ಲಿ ಎಲ್ಲಾ ದಿಗ್ದೇವತೆಗಳಿಗೂ ವಂದನೆಗಳನ್ನು ಅರ್ಪಿಸಲಾಗಿದೆ. ಇವರೆಲ್ಲರೂ ಇಂದ್ರರೇ ಎಂಬ ಭಾವನೆಯುಂಟಾದರೆ ಭಗವದ್ಗೀತೆಯಲ್ಲಿ ಹೇಳಿರುವ **'ನಮಃ ಪುರಸ್ತಾದಥ ಪೃಷ್ಠತಸ್ತೇ ......'**(ಮುಂದಿರುವ ನಿನಗೆ ನಮಸ್ಕಾರ, ಹಿಂದಿರುವ ನಿನಗೆ ನಮಸ್ಕಾರ) ಎಂಬ ವಿಶ್ವರೂಪೋಪಾಸನೆಯೇ ಆದೀತು. ಆದ್ದರಿಂದ **'ದಿಶಶ್ಚ ಮೇ'**– ಎಂಬ ಪ್ರಾರ್ಥನೆಯು ಬಹಳ ಮಹತ್ತ್ವವುಳ್ಳದ್ದಾಗಿದೆ. **ಮೂರ್ಧಾ**–ಎಂದರೆ ಬ್ರಹ್ಮಲೋಕವೆಂದರ್ಥ. ಛಾಂದೋಗ್ಯಾದಿ ಉಪನಿಷತ್ತುಗಳಲ್ಲಿ ಇದಕ್ಕೆ ಆಧಾರವಿದೆ. ಈ ಬ್ರಹ್ಮಲೋಕವೂ ಇಂದ್ರನೇ. ಹಾಗೆಯೇ **ಪ್ರಜಾಪತಿ** ಎಂಬ ದೇವತೆಯೂ ಇಂದ್ರನೇ. ಈತನ ವಿಷಯವಾಗಿ ಹೆಚ್ಚಿನ ಸ್ತೋತ್ರಗಳು ವೇದಗಳಲ್ಲಿವೆ. ಅಂತೂ ಇಂದ್ರಾತ್ಮಕವಾದ ಎಲ್ಲಾ ದೇವತೆಗಳೂ ನನಗೆ ಶ್ರೇಯಃಪ್ರದರಾಗಲಿ–ಎಂಬಿದು ಈ ಅನುವಾಕದ ಸಾರವು.

ಈಗ ದೇವತೆಗಳಿಗೂ ಪರಲೋಕದಲ್ಲಿ ಪಡೆಯಬೇಕಾಗಿರುವ ಸುಖಗಳಿಗೂ ಇರುವ ಸಂಬಂಧವನ್ನು ತಿಳಿಯಬಹುದಾಗಿದೆ. ಮನುಷ್ಯ ಲೋಕದಲ್ಲಿರುವಂತೆಯೇ ಪರಲೋಕದಲ್ಲಿಯೂ ಒಂದಾನೊಂದು ಸರ್ಕಾರವು ಅಸ್ತಿತ್ವದಲ್ಲಿರುವದು. ಇಲ್ಲಿ ನಾವು ಏನಾದರೂ ಪ್ರಯೋಜನಗಳನ್ನು ಎಂದರೆ ಮನೆ (ಸೈಟು), ದೀಪ, ನಲ್ಲಿ, ಆಸ್ಪತ್ರೆ, ರಸ್ತೆ ವಾಹನಸೌಕರ್ಯ, ಅಂಚೆವ್ಯವಸ್ಥೆಗಳನ್ನು ಹೊಂದಲು ಸರ್ಕಾರಕ್ಕೆ ಮನವಿಮಾಡಿಕೊಳ್ಳುವಂತೆ ಪರಲೋಕದಲ್ಲಿ ಪಡೆಯಬೇಕಾಗಿರುವ ಭೋಗಭಾಗ್ಯಗಳಿಗೂ ಪ್ರಾರ್ಥನೆಯನ್ನು ಸಂಬಂಧಪಟ್ಟವರಿಗೆ ಸಲ್ಲಿಸಲೇಬೇಕು. ನಾವು ಯಜ್ಞಾದಿಗಳ ರೂಪದಲ್ಲಿ ಇವುಗಳನ್ನು ಮಾಡುತ್ತಿದೇವಾದರೂ ಅರ್ಥವು ತಿಳಿಯದೆ ಮೂಢರಾಗಿದ್ದು ಅಶ್ರದ್ಧೆಯನ್ನು ಬೆಳೆಯಿಸಿಕೊಳ್ಳುತ್ತಿರುವೆವು. ಇದು ಸರಿಯಲ್ಲ. ದೇವತೆಗಳ ಪೂಜೆಯು ಅಂಧಶ್ರದ್ಧೆಯಂತೂ ಅಲ್ಲ. ಏಕೆಂದರೆ ದೇವತೆಗಳೆಲ್ಲ ಇಂದ್ರಾತ್ಮಕರು. ಇಂದ್ರನು ಪರಮಾತ್ಮನೇ. ಹೀಗಿರುವಲ್ಲಿ ದೇವತಾರಾಧನೆಯ

ಬೆಂಬಲವಿಲ್ಲದೆ ಮನುಷ್ಯನು ಇಹದಲ್ಲಾಗಲಿ ಪರದಲ್ಲಾಗಲಿ ಬದುಕಿರಲು ಹೇಗೆ ಸಾಧ್ಯ? ಕೆಲವು ದೇವತೆಗಳಂತೂ ಪ್ರತ್ಯಕ್ಷಗೋಚರರೇ ಆಗಿದ್ದಾರೆ. ಆದ್ದರಿಂದ ನಾವು ದೇವತೆಗಳನ್ನು ಅಗಲಿ ಒಂದು ಕ್ಷಣವೂ ಬದುಕಿರಲಾರೆವು. ಅಜ್ಞಾನದಿಂದ ಅಗಲಿದಂತೆ ಈಗ ಭಾಸವಾದರೂ ಅದು ನಿಜವಲ್ಲ. ಕೂಡಲೆ ನಾವು ದೇವತೆಗಳನ್ನು ಗುರುತಿಸಿ ಆ ಮೂಲಕ ಇಂದ್ರನ ತಾದಾತ್ಮ್ಯವನ್ನು ದೇವತೆಗಳಂತೆಯೇ ಪಡೆದು ಕೃತಕೃತ್ಯರಾಗಬೇಕು.

---

## 13. ಅಗ್ಂಶುಶ್ಚ ಮೇ ರಶ್ಮಿಶ್ಚ ಮೇ

ಚಮಕಾಧ್ಯಾಯದ ಏಳನೆಯ ಅನುವಾಕದ ಅಭಿಪ್ರಾಯವನ್ನು ಈಗ ವಿಚಾರಮಾಡಬೇಕಾಗಿದೆ.

**ಅಗ್ಂಶುಶ್ಚ ಮೇ ರಶ್ಮಿಶ್ಚ ಮೇಽದಾಭ್ಯಶ್ಚ ಮೇಽಧಿಪತಿಶ್ಚ ಮ ಉಪಾಗ್ಂಶುಶ್ಚ ಮೇಽನ್ತರ್ಯಾಮಶ್ಚ ಮ ಐಂದ್ರವಾಯವಶ್ಚ ಮೇ ಮೈತ್ರಾವರುಣಶ್ಚ ಮ ಆಶ್ವಿನಶ್ಚ ಮೇ ಪ್ರತಿಪ್ರಸ್ಥಾನಶ್ಚ ಮೇ ಶುಕ್ರಶ್ಚ ಮೇ ಮಂಥೀ ಚ ಮ ಆಗ್ರಯಣಶ್ಚ ಮೇ ವೈಶ್ವದೇವಶ್ಚ ಮೇ ಧ್ರುವಶ್ಚ ಮೇ ವೈಶ್ವಾನರಶ್ಚ ಮ ಋತುಗ್ರಹಾಶ್ಚ॥**

'ಅಂಶುವೂ, ರಶ್ಮಿಯೂ, ಅದಾಭ್ಯವೂ, ಅಧಿಪತಿಯೂ, ಉಪಾಂಶುವೂ, ಅಂತರ್ಯಾಮಿಯೂ, ಐಂದ್ರವಾಯವನೂ, ಮೈತ್ರಾವರುಣನೂ, ಅಶ್ವಿನವೂ, ಪ್ರತಿಪ್ರಸ್ಥಾನವೂ, ಶುಕ್ರನೂ, ಮಂಥಿಯೂ, ಆಗ್ರಯಣನೂ, ವೈಶ್ವದೇವನೂ, ಧ್ರುವನೂ, ವೈಶ್ವಾನರನೂ, ಋತುಗ್ರಹಣನೂ ಯಜ್ಞಕ್ಕಾಗಿ ನನಗೆ ಉಂಟಾಗಲಿ!'

ಈ ಅನುವಾಕದಲ್ಲಿ ಉಪಾಸಕನಿಗೆ ದೊರಕುವ ಬ್ರಹ್ಮಲೋಕಾದಿಗಳ ಪ್ರಾಪ್ತಿಯನ್ನೂ ಮತ್ತು ಆತನು ಚಿಂತಿಸಬೇಕಾದ ಮಾರ್ಗವನ್ನೂ ಆತಿವಾಹಿಕ

ರಾದ ದೇವತೆಗಳನ್ನೂ ಕುರಿತು ಹೇಳಿದೆ. ಇಲ್ಲಿರುವ ವಿಷಯಗಳೆಲ್ಲವೂ ಶಾಸ್ತ್ರಪ್ರಸಿದ್ಧವಾದವುಗಳು. ಸಗುಣಬ್ರಹ್ಮವನ್ನು ಉಪಾಸನೆಮಾಡಿದವನಿಗೆ ಪ್ರಾಣೋತ್ಕ್ರಮಣ ಕಾಲದಲ್ಲಿಮಾರ್ಗಚಿಂತನೆಯನ್ನೂ ಶಾಸ್ತ್ರದಲ್ಲಿ ತಿಳಿಸಿರುತ್ತದೆ. ಬ್ರಹ್ಮಜ್ಞಾನಿಗಾದರೆ ಪ್ರಾಣಗಳು ಉತ್ಕ್ರಮಣವಾಗುವದಿಲ್ಲವೆಂದೂ ಅವು ಇಲ್ಲಿಯೇ ಮಹಾಭೂತಗಳಲ್ಲಿ ಒಂದಾಗಿಬಿಡುವವೆಂದೂ ಉಪಾಸಕ ಹಾಗೂ ಕರ್ಮಿಗಳಿಬ್ಬರಿಗೂ ಪ್ರಾಣೋತ್ಕ್ರಮಣವುಂಟೆಂದೂ ಅದರಲ್ಲಿಯೂ ಉಪಾಸಕನಿಗೆ ಸುಷುಮ್ನಾನಾಡಿಯ ಮೂಲಕ ಉತ್ಕ್ರಮಣವುಂಟಾಗಿ ಅವನು ಸೂರ್ಯಮಂಡಲದ್ವಾರದಿಂದ ಬ್ರಹ್ಮಲೋಕವನ್ನು ಸೇರಿ ಕ್ರಮಮುಕ್ತಿಯನ್ನು ಪಡೆಯುತ್ತಾನೆಂದೂ ಮುಕ್ತನಾಗುವವರೆಗೂ ಹಿರಣ್ಯಗರ್ಭನ ಲೋಕದಲ್ಲಿದ್ದು ಕೊಂಡು ಬೇಕಾದ ಭೋಗಗಳನ್ನು ಸಂಕಲ್ಪಮಾತ್ರದಿಂದಲೇ ಪಡೆದುಕೊಂಡು ಅನುಭವಿಸುತ್ತಿರುವನೆಂದೂ ಶಾಸ್ತ್ರಗಳು ತಿಳಿಸಿರುತ್ತವೆ. ಇಂಥ ಉಪಾಸಕನ ದೃಷ್ಟಿಯಿಂದ ಇಲ್ಲಿ ಕೆಲವು ಪ್ರಾರ್ಥನೆಗಳನ್ನು ತಿಳಿಸಲಾಗಿದೆ. ಸಾಮಾನ್ಯರಿಗೆ ಈ ವರ್ಣನೆಯಿಂದ ಉಪಯೋಗವೇನೂ ಕಂಡುಬಾರದೆ ಇದ್ದರೂ ವೇದಾಂತದರ್ಶನದಂತೆ ಉಪಾಸಕನ ಮಹಿಮೆಯನ್ನೂ ಅವನಿಗೆ ದೊರಕುವ ಅಮಾನುಷವಾದ ಆಮುಷ್ಮಿಕಸುಖಗಳನ್ನೂ ತಿಳಿಯಲು ಇದು ಉಪಯುಕ್ತ ವಾಗಿದೆ.

**ಅಂಶು**ವೆಂದರೆ ಸುಷುಮ್ನಾನಾಡಿಯೆಂದೂ **ರಶ್ಮಿ** ಎಂದರೆ ಅದರ ಸಂಬಂಧವಾದ ಕಿರಣಗಳೆಂದೂ ತಿಳಿಯಬೇಕು. ಸುಷುಮ್ನಾನಾಡಿಯ ಮೂಲಕ ಉತ್ಕ್ರಮಣವಾದರೆ ಅಮೃತತತ್ವಪ್ರಾಪ್ತಿಯಾಗುವದು. ಇದರ ವಿಚಾರವಾಗಿ ಯೋಗಶಾಸ್ತ್ರಗಳಲ್ಲಿ ಹೆಚ್ಚಿನ ಪರಿಚಯವನ್ನು ಕೊಡಲಾಗಿರುತ್ತದೆ. ಬ್ರಹ್ಮ ಲೋಕಕ್ಕೆ ಹೋಗಬೇಕಾದರೆ ಇದೇ ಮುಖ್ಯದ್ವಾರವು. ಉಪಾಸಕನು ಈ ಮಾರ್ಗದಿಂದ ಹೋಗುವಾಗ ತನ್ನ ವಿದ್ಯಾಬಲದಿಂದ **ಅದಾಭ್ಯ**ನು–ಎಂದರೆ ಅಕ್ಷೋಭ್ಯ (ಅಳ್ಳಾಡದವ)ನಾಗಿರುವನು. ಹಾಗೂ ಅಣಿಮಾದಿಸರ್ವಸಿದ್ಧಿ ಗಳಿಗೂ **ಅಧಿಪತಿ**ಯಾಗಿಯೂ ಇರುವನು. ಸುಷುಮ್ನೆಯಲ್ಲದೆ ಇಡಾ–ಪಿಂಗಳಾ–ಎಂಬ ಮತ್ತೆರಡು ನಾಡಿಗಳೂ ಶಾಸ್ತ್ರಪ್ರಸಿದ್ಧವಾಗಿರುವವು.

ಇವೆರಡನ್ನೂ ಸೇರಿಸಿ ಉಪಾಂಶುವೆಂದು ಇಲ್ಲಿ ಕರೆದಿದೆ. ಉಪಾಸಕನು ಬ್ರಹ್ಮಲೋಕದಿಂದ ಮರ್ತ್ಯಲೋಕಕ್ಕಾಗಲಿ, ಸ್ವರ್ಗಲೋಕಕ್ಕಾಗಲಿ ಹೋಗಬಯಸಿದಾಗ ಈ ನಾಡೀದ್ವಾರಗಳು ಪ್ರಯೋಜನಕ್ಕೆ ಬರುವವು. ಇಡೆಯಿಂದ ಮನುಷ್ಯಲೋಕಕ್ಕೂ ಪಿಂಗಳೆಯಿಂದ ಸ್ವರ್ಗಲೋಕಕ್ಕೂ ಹೋಗಬಹುದಾಗಿದೆ. ಎಲ್ಲೆಲ್ಲಿ ಉಪಾಸಕನು ಮನಸ್ಸನ್ನಿಡುವನೋ ಅಲ್ಲಲ್ಲಿ ಅಂತರ್ಯಾಮಿಯು (ಪರಮಾತ್ಮ) ಇದ್ದುಕೊಂಡಿರಲೆಂದೂ ಬೇಡಿ ಕೊಂಡಿರುತ್ತಾನೆ.

ಇನ್ನು ಐಂದ್ರವಾಯವ, ಮೈತ್ರಾವರುಣ, ಅಶ್ವಿನ–ಎಂಬ ಮೂರು ಶಬ್ದಗಳಿಂದ ಕ್ರಮವಾಗಿ ಪ್ರಾಜ್ಞ, ತೈಜಸ, ವಿಶ್ವರೆಂಬ ಆತ್ಮರುಗಳನ್ನು ಗ್ರಹಿಸಬೇಕು. ಸುಷುಪ್ತಿಗೆ ಸಾಕ್ಷಿಯಾದ ಆತ್ಮನನ್ನು ಇಂದ್ರ ಎನ್ನುವರು. 'ಇದಿ ಪರಮೈಶ್ವರ್ಯೇ' ಎಂಬ ಧಾತುವಿನ ಅರ್ಥಕ್ಕೆ ಅನುಗುಣವಾಗಿ ಪ್ರಾಜ್ಞನು ಪರಮೇಶ್ವರನಾದ ಇಂದ್ರನೇ ಆಗಿರುವನು. ವ್ಯವಹಾರದೃಷ್ಟಿಯಿಂದ ನೋಡಿದಾಗ ಸುಷುಪ್ತಿಕಾಲದಲ್ಲಿಯೂ ಉಸಿರಾಡುತ್ತಿರುವೆವಾದ್ದರಿಂದ ಪ್ರಾಣ–ಎಂದರೆ ವಾಯುವಿನ ವ್ಯಾಪಾರವಿದ್ದೇ ಇರುತ್ತದೆ. ಆದ್ದರಿಂದ ಪ್ರಾಜ್ಞಾತ್ಮನನ್ನು ಐಂದ್ರವಾಯವನೆಂದೇ ಇಲ್ಲಿ ಹೆಸರಿಸಲಾಗಿದೆ. ಮಿತ್ರನೆಂದರೆ ತೇಜೋರೂಪನು; ವರುಣನು ಜಲರೂಪನು. ಸ್ವಪ್ನಾವಸ್ಥೆಯ ಆತ್ಮನು ತೈಜಸನಾಗಿರುವದಿರಂದ ಮಿತ್ರಾವರುಣ ರೂಪನೇ ಆಗಿದ್ದಾನೆ. ಸ್ವಪ್ನವನ್ನು ಸೃಷ್ಟಿಸಿರುವವರು ಮಿತ್ರ–ವರುಣರೆಂದೇ ಪ್ರಸಿದ್ಧಿ ಇದೆ. ಹೀಗೆ ಮೈತ್ರಾವರುಣ ನೆನಿಸಿರುವ ತೈಜಸನು ಸ್ವಪ್ನಾತ್ಮನಾಗಿರುವನು. ಇನ್ನು ಅಶ್ವಿನನೆಂದರೆ ಜಾಗ್ರದಾತ್ಮನು. ಅಶ್ವಿನೀದೇವತೆಗಳು ಗಂಧೋಪಲಕ್ಷಿತವಾದ ಸ್ಥೂಲದೇಹ ವನ್ನು ಆಶ್ರಯಿಸಿರುತ್ತಾರೆ. ಆದ್ದರಿಂದ ಜಾಗ್ರದಾತ್ಮನನ್ನು ಅಶ್ವಿನನೆಂದ ಕರೆಯಲಾಗಿದೆ. ಹೀಗೆ ಅವಸ್ಥಾತ್ರಯೋಪಲಕ್ಷಿತರಾದ ಆತ್ಮರುಗಳನ್ನು ಸಮಷ್ಟಿಯಾಗಿ ಕಂಡುಕೊಂಡಾಗ ಈ ಮೂವರು ಆತ್ಮರುಗಳಲ್ಲಿಯೇ ಬ್ರಹ್ಮಲೋಕಸಮೇತವಾದ ಎಲ್ಲಾ ಗತಿಗಳೂ ಅಡಕವಾಗಿರುತ್ತವೆ–ಎಂದು

ಸಿದ್ಧವಾಗುತ್ತದೆ. ಇವರೆಲ್ಲರೂ ನನಗೆ ಗತಿಪ್ರದರಾಗಲಿ ಎಂದು ಪ್ರಾರ್ಥಿಸಲಾಗಿದೆ. ಮತ್ತು ಈಗಲೇ ನನಗೆ ಬ್ರಹ್ಮಲೋಕವನ್ನು ಕುರಿತು ಹೊರಡಲು ಪ್ರತಿಪ್ರಸ್ಥಾನವು (ಗಮನವು) ಆಗಲಿ ಎಂದು ಕೇಳಲಾಗಿದೆ.

ಈಗ ಬ್ರಹ್ಮಲೋಕದ ವೈಭವವನ್ನೂ ವರ್ಣನೆಯನ್ನೂ ಕೇಳಿರಿ. ಆ ಕಮಲಾಸನಲೋಕವು ಕೇವಲ ಸಂಕಲ್ಪಮಯವಾದದ್ದು. ಅಲ್ಲಿ ಮಾಡಿದ ಸಂಕಲ್ಪಗಳೆಲ್ಲವೂ ಸತ್ಯವೇ ಆಗುವವು. ಆದ್ದರಿಂದ ಅದನ್ನು ಸತ್ಯ ಲೋಕವೆಂದೂ ಕರೆಯುತ್ತಾರೆ. ಇಂಥ ಸತ್ಯಲೋಕದಲ್ಲಿ **ಶುಕ್ರ**ವೆಂಬ ಪ್ರಸಿದ್ಧವಾದ ಒಂದು ವಿರಜಸ್ಕವಾದ ನದಿಯಿರುವದು. ಮತ್ತು ಸಮುದ್ರದಷ್ಟು ವಿಸ್ತಾರವಾಗಿರುವ **ಅರ** ಮತ್ತು **ಣ್ಯ** ಎಂಬ ಹೆಸರಿನ ಎರಡು ಸರೋವರಗಳಿರುವವು. ಇವುಗಳನ್ನೇ **ಮಂಥೀ–ಆಗ್ರಯಣ**ಗಳೆಂದು ಇಲ್ಲಿ ಕರೆಯಲಾಗಿದೆ. ಮತ್ತು ಅಲ್ಲಿ ಸೋಮಸವನವೆಂಬ ಒಂಧು ಅಶ್ವತ್ಥ ವೃಕ್ಷವಿರುವದು. ಅದು ಎಲ್ಲಾ ದೇವತೆಗಳಿಗೂ ನಿವಾಸಸ್ಥಾನವಾಗಿರುವದರಿಂದ **ವೈಶ್ವದೇವ**ವೆಂದು ಕರೆಯಲಾಗಿದೆ. ಇವುಗಳೆಲ್ಲವೂ ಉಪಾಸಕನಿಗೆ ಬೇಕಾದ ಭೋಗಗಳನ್ನೂ ಆನಂದವನ್ನೂ ಉಂಟುಮಾಡುತ್ತವೆ. ಇಂಥ ಪರಿಶುದ್ಧವಾದ ಅಪ್ರಾಕೃತಭೋಗಗಳೂ ಸುಖಸಾಮಗ್ರಿಗಳೂ ಉಳ್ಳ ಹಿರಣ್ಯಗರ್ಭಲೋಕಕ್ಕೆ ಚಿರಾಯುವಾದ **ಧ್ರುವ**ನೆಂಬ ಬ್ರಹ್ಮನು ಒಡೆಯನಾಗಿರುವವನು. ಆತನ ಮಂತ್ರಿಯ ಹೆಸರು **ವೈಶ್ವಾನರನು**. ಆ ಬ್ರಹ್ಮನ ಪರಿವಾರದಲ್ಲಿ ಆರು ಋತುದೇವತೆಗಳು ಇರುವರು. ಮತ್ತು ನವಗ್ರಹಗಳೂ ಇರುವರು. ಇವರಿಬ್ಬರನ್ನೂ ಸೇರಿಸಿ **ಋತುಗ್ರಹ**ರೆಂದು ಹೆಸರಿಸಲಾಗಿದೆ. ಇವರೆಲ್ಲರೂ ನನಗೆ ಅನುಕೂಲರಾಗಿ ಒದಗಲಿ–ಎಂದು ಒಟ್ಟಾಗಿ ಪ್ರಾರ್ಥಿಸಿದೆ. ಈ ಬ್ರಹ್ಮಲೋಕದ ವಿಚಾರವಾಗಿ ಛಾಂಗೋಗ್ಯೋಪನಿಷತ್ತಿನಲ್ಲಿಯೂ ಉಪಾಸಕರಿಗೆ ಗತಿಗಾಗಿ ಹೇಳಿರುವ ಅರ್ಚಿರಾದಿದೇವತೆಗಳ ವಿಚಾರವಾಗಿ ಬ್ರಹ್ಮಸೂತ್ರಗಳಲ್ಲಿಯೂ ಹೆಚ್ಚಿನ ವಿವರಗಳನ್ನು ಕೊಟ್ಟಿರುತ್ತದೆ. ಕುತೂಹಲವುಳ್ಳವರು ಅವುಗಳನ್ನೂ ಅಭ್ಯಾಸಮಾಡಬೇಕು.

ವೇದೋಕ್ತವಾದ ಉಪಾಸನಾಕಾಂಡವು ರಹಸ್ಯವಾದದ್ದಾಗಿದೆ. ಏಕೆಂದರೆ ಇದು ಶ್ರದ್ಧಾಮಾತ್ರಗಮ್ಯವಾಗಿರುವದು. ಈಗಿನ ಜನರಿಗೆ ಶ್ರದ್ಧೆಯ ಅಭಾವವೇ ಹೆಚ್ಚಾಗಿರುವದರಿಂದ ಉಪಾಸನಾಕಾಂಡದಲ್ಲಿ ಪ್ರತಿಪಾದಿಸ ಲ್ಪಟ್ಟಿರುವ ವಿಷಯಗಳನ್ನು ತಿಳಿಯುವದು ದುಸ್ಸಾಧ್ಯವಾಗಿದೆ. ಮತ್ತು ಇಂಥ ಉಪಾಸನೆಗಳನ್ನು ಮಾಡಿ ನುರಿತಿರುವಂಥ ಮಾರ್ಗದರ್ಶಕರೂ ಆಚಾರ್ಯರೂ ಈಗ ದುರ್ಲಭರೇ ಆಗಿರುತ್ತಾರೆ. ಆದ್ದರಿಂದ ಕಲಿಯುಗದ ವರಿಗೆ 'ನಾಮೋಪಾಸನೆ' ಯಂಥ ಸುಲಭವಾದ ಮಾರ್ಗವನ್ನೇ ಸಾಧುಸಂತರು ತಿಳಿಸಿಕೊಟ್ಟಿರುತ್ತಾರೆ. ಇರಲಿ. ವೇದದಲ್ಲಿ ಮಾತ್ರ ಕರ್ಮ, ಉಪಾಸನೆ ಮತ್ತು ತತ್ತ್ವಜ್ಞಾನಗಳನ್ನು ಉತ್ತಮರೀತಿಯಿಂದ ಅಪೂರ್ವ ವಾಗಿಯೇ ಪ್ರತಿಪಾದಿಸಿರುತ್ತದೆ. ಈ ಚಮಕಾಧ್ಯಾಯವೂ ವೇದದ ಭಾಗವಾದ್ದರಿಂದ ಐಹಿಕಾಮುಷ್ಮಿಕಫಲಗಳನ್ನು ಕೊಡುವ ಕರ್ಮೋಪಾಸನೆಗಳ ವಿವರವನ್ನು ಇದು ಒಳಗೊಂಡಿರುವದು ಸೂಕ್ತವೇ ಆಗಿದೆ. ಅಧಿ ಕಾರಿಯಾದವನು ಈಗಲೂ ಇಂಥ ಉಪಾಸನೆಗಳನ್ನು ಕೈಗೊಳ್ಳಬಹುದು. ಮತ್ತು ಅವುಗಳ ಫಲವನ್ನೂ ಪಡೆದುಕೊಳ್ಳಬಹುದು.

ಪರಮೇಶ್ವರನ ನಾನಾವಿಧವಾದ ಉಪಾಸನಾಕ್ರಮಗಳನ್ನು ಅರಿತುಕೊಳ್ಳಲು ಯೋಗಶಾಸ್ತ್ರದ ಸಹಾಯವೂ ಮುಖ್ಯವಾದದ್ದೇ ಆಗಿದೆ. ವೈದಿಕವಾದ ಸಾಂಖ್ಯಯೋಗಗಳು ಪರಮಪುರುಷಾರ್ಥಸಾಧಕಗಳೆಂಬುದನ್ನು ಬೇರೆ ಹೇಳಬೇಕಾಗಿಲ್ಲ. ಆದ್ದರಿಂದ ವೈದಿಕವಾದ ಉಪಾಸನಾಕ್ರಮಗಳನ್ನು ಪೂರ್ಣವಾಗಿ ಅಳವಡಿಸಿಕೊಳ್ಳಲು ಶ್ರದ್ಧಾಪೂರ್ವಕವಾದ ಸತತ ಪ್ರಯತ್ನವು ಅಗತ್ಯವಾಗಿದೆ. ಇಲ್ಲಿ ಪ್ರಸ್ತಾಪಿಸಲ್ಪಟ್ಟಿರುವ ವಿಷಯಗಳ ಬಗ್ಗೆ ಹೆಚ್ಚಿನ ವಿವರಗಳನ್ನು ವಾಚಕರು ಯೋಗಾಭ್ಯಾಸಾದಿಗಳಲ್ಲಿ ವಿಶೇಷಪರಿಶ್ರಮವುಳ್ಳವ ರಿಂದ ತಿಳಿದು ಕೃತಾರ್ಥರಾಗಬೇಕು.

## 14. ಅತಿಗ್ರಾಹ್ಯಾಶ್ಚ ಮ ಐಂದ್ರಾಗ್ನಶ್ಚ ಮೇ

ಚಮಕಾಧ್ಯಾಯದ ಏಳನೆಯ ಅನುವಾಕದ ಉತ್ತರಾರ್ಧವನ್ನು ಈಗ ವಿಚಾರಮಾಡಬೇಕಾಗಿದೆ.

**ಮೇಽತಿಗ್ರಾಹ್ಯಾಶ್ಚ ಮ ಐಂದ್ರಾಗ್ನಶ್ಚ ಮೇ ವೈಶ್ವದೇವಶ್ಚ ಮೇ ಮರುತ್ವತೀಯಾಶ್ಚ ಮೇ ಮಾಹೇಂದ್ರಶ್ಚಮ ಆದಿತ್ಯಶ್ಚ ಮೇ ಸಾವಿತ್ರಶ್ಚ ಮೇ ಸಾರಸ್ವತಶ್ಚ ಮೇ ಪೌಷ್ಣಶ್ಚ ಮೇ ಪಾತ್ನೀವತಶ್ಚ ಮೇ ಹಾರಿಯೋಜನಶ್ಚ ಮೇ ॥**

"ಅತಿಗ್ರಾಹ್ಯಗಳೂ ಐಂದ್ರಾಗ್ನವೂ ವೈಶ್ವದೇವವೂ ಮರುತ್ವತೀಯವೂ ಮಾಹೇಂದ್ರವೂ ಆದಿತ್ಯವೂ ಸಾವಿತ್ರವೂ ಸಾರಸ್ವತವೂ ಪೌಷ್ಣವೂ ಪಾತ್ನೀವತವೂ ಹಾರಿಯೋಜನವೂ ಯಜ್ಞಕ್ಕಾಗಿ ನನಗೆ ಉಂಟಾಗಲಿ!"

ಹಿಂದೆ ತಿಳಿಸಿರುವಂತೆ ಬ್ರಹ್ಮಲೋಕದಲ್ಲಿ ಉಪಾಸಕನು ಪಡೆಯಬಹುದಾದ ಭೋಗಗಳನ್ನು ಕುರಿತು ವಿಚಾರಮಾಡಿದ ಅನಂತರ ಈಗ ಕೆಲವು ವಿದ್ಯೆಗಳು ತನಗೆ ಸಿದ್ಧಿಸಲೆಂದು ಉಪಾಸಕನು ಇಲ್ಲಿ ಪ್ರಾರ್ಥಿಸುತ್ತಿದ್ದಾನೆ. ಹೇಗೆಂದರೆ: **ಅತಿಗ್ರಾಹ್ಯ**ಗಳು ನನಗೆ ಸಿದ್ಧಿಸಲಿ–ಎಂಬುದು. ಅತಿಶಯವಾದ ಯಮನಿಯಮಾದಿ ಪ್ರಯತ್ನಗಳಿಂದ ಮಾತ್ರವೇ ದಕ್ಕಬಹುದಾದ ವೇದಗಳು ಅತಿಗ್ರಾಹ್ಯಗಳು. ಮುನಿಗಳು ವೇದದ್ರಷ್ಟೃಗಳೆಂದು ಪ್ರಸಿದ್ಧವರಾಗಿದ್ದಾರೆ. ಆದರೆ ಅವರಿಗೆ ಮಾತ್ರವೇ ವೇದಗಳು ಹೇಗೆ ಹೊಳೆದವು? ಉಳಿದವರಿಗೇಕೆ ಹೊಳೆಯಲಿಲ್ಲ? ಎಂದರೆ ಋಷಿಗಳು ಮಹಾ ತಪೋನಿಷ್ಠರು. ಅವರ ಇಂದ್ರಿಯ ಜಯ, ಏಕಾಗ್ರತೆ, ಧ್ಯಾನಧಾರಣಾದಿಗಳು ಲೋಕೋತ್ತರವಾದವುಗಳು. ಆದ್ದರಿಂದಲೇ ಅತಿಗ್ರಾಹ್ಯಗಳಾದ ವೇದಗಳೂ ಅವರಿಗೆ ಹೊಳೆದವು. ಎಂದಭಿಪ್ರಾಯ. **ಐಂದ್ರಾಗ್ನ**ಗಳೆಂದರೆ ಇಂದ್ರ ಮತ್ತು ಅಗ್ನಿ ಎಂಬ ದೇವತೆಗಳನ್ನು ಕುರಿತು ಮಾಡುವ ಉಪಾಸನೆ ಮತ್ತು ಕರ್ಮಗಳು ಎಂದರ್ಥ.

ಅಗ್ನಿಯು ದೇವತೆಗಳಲ್ಲಿ ಕಿರಿಯನು. ಇಂದ್ರನು ಹಿರಿಯನು. ಇವರಿಬ್ಬರನ್ನೂ ಗ್ರಹಣಮಾಡುವದರಿಂದ ಉಳಿದ ಎಲ್ಲಾ ದೇವತೆಗಳ ಉಪಾಸನೆಗಳನ್ನೂ ಆಯಾ ದೇವತೆಗಳನ್ನು ಕುರಿತು ಮಾಡುವ ಕರ್ಮಗಳನ್ನೂ ಇಲ್ಲಿ ಸ್ವೀಕರಿಸಿ ದಂತೆಯೇ ಆಗಿದೆ. ಹೀಗೆ ಎಲ್ಲಾ ಕರ್ಮೋಪಾಸನೆಗಳೂ ತನಗೆ ದಕ್ಕಲಿ! ಎಂದು ಕೇಳಲಾಗಿದೆ. ಮತ್ತು ವೈಶ್ವದೇವವೂ ನನಗೆ ದೊರಕಲಿ–ಎಂಬ ಪ್ರಾರ್ಥನೆಯಲ್ಲಿ ವಿಶೇಷವಾಗಿ ಪಂಚಮಹಾಯಜ್ಞಗಳನ್ನು ಪರಾಮರ್ಶಿಸ ಲಾಗಿದೆ. ಅವು ಯಾವವೆಂದರೆ: ದೇವಯಜ್ಞ, ಪಿತೃಯಜ್ಞ, ಭೂತಯಜ್ಞ, ಮನುಷ್ಯಯಜ್ಞ ಮತ್ತು ಬ್ರಹ್ಮಯಜ್ಞಗಳೆಂಬಿವು. ದೇವಯಜ್ಞಗಳೆಂದರೆ ಯಾಗಾದಿಗಳು. ಶ್ರಾದ್ಧಾದಿಗಳೇ ಪಿತೃಯಜ್ಞವು. ಕಾಗೆ ಮುಂತಾದ ಪ್ರಾಣಿಗಳಿಗೆ ಅನ್ನವನ್ನು ಕೊಡುವದೇ ಭೂತಯಜ್ಞವು. ವೇದಗಳನ್ನು ಅಧ್ಯಯನ ಮಾಡುವದೇ ಬ್ರಹ್ಮಯಜ್ಞವು. ಅತಿಥಿಗಳಿಗೆ ಸತ್ಕಾರಮಾಡುವದೇ ಮನುಷ್ಯ ಯಜ್ಞವು. ಹೀಗೆ ವೈಶ್ವದೇವವೆಂಬ ಶಬ್ದವು ಉಪಲಕ್ಷಣವಾಗಿದ್ದು ಪಂಚಮಹಾ ಯಜ್ಞಗಳನ್ನು ಸೂಚಿಸುತ್ತದೆ.

ಈಗ ಮರುತ್ವತೀಯವೇ ಮುಂತಾದ ಐದು ವಿದ್ಯೆಗಳನ್ನು ಕುರಿತು ವಿಚಾರಮಾಡಲಾಗಿದೆ. ಮರುತ್ವತೀಯವೆಂದರೆ ಸ್ಥಾಪತ್ಯವಿದ್ಯೆ ಅಥವಾ ಶಿಲ್ಪವಿದ್ಯೆ ಎಂದರ್ಥ. ಇದು ಕೂಡ ತಪೋಬಲದಿಂದಲೆ ಲಭ್ಯವಾಗಬೇಕು. ವಿಗ್ರಹಗಳ ಶಿಲ್ಪ, ಗೃಹ–ಗೋಪುರ–ಅಣೆಕಟ್ಟು–ಗ್ರಾಮ–ನಗರಗಳ ನಿರ್ಮಾಣಶಿಲ್ಪವು ಬಹಳ ಗಹನವಾದದ್ದು. ಈಗಲೂ ಈ ಎಂಜಿನಿಯರಿಂಗ್ ಕಲಾಕೌಶಲಕ್ಕೆ ಬಹಳ ಅಗ್ರಸ್ಥಾನವಿದೆ. ಇದನ್ನು ಸಂಪಾದಿಸುವವನು ಇಲ್ಲಿ ತಿಳಿಸಿರುವ ಪ್ರಕಾರ ಮಾತ್ಸರ್ಯವೆಂಬ ದೋಷವನ್ನು ಜಯಿಸಿರಬೇಕು. ಮಾತ್ಸರ್ಯವು ಹೃದಯದಲ್ಲಿ ತುಂಬಿರುವವನಿಗೆ ಶಿಲ್ಪವಿದ್ಯೆಯು ಸಿದ್ಧಿಸುವದಿಲ್ಲ–ಎಂದೇ ತಿಳಿಸಲಾಗಿದೆ. ಮಾಹೇಂದ್ರ ಎಂಬುದು ಪರ್ಜನ್ಯವಿದ್ಯೆಯನ್ನು ಸೂಚಿಸುತ್ತದೆ. ಇದು ಮೋಹವನ್ನು ಜಯಿಸುವದರಿಂದ ದೊರಕುತ್ತದೆಯಂತೆ. ಬೇಕಾದಾಗ ಮಳೆಯನ್ನು ತರಿಸುವಂಥ ಈ ವಿದ್ಯೆಯು

ಋಷ್ಯಶೃಂಗರಿಗೆ ಸಿದ್ಧಿಸಿತ್ತು. ಅದಕ್ಕೆ ತಕ್ಕಂತೆ ಅವರು ಮೋಹವನ್ನು ಜಯಿಸಿದ್ದರು. ಹೇಗೆಂದರೆ: ಅವರಿಗೆ ಅಂಗರಾಜ್ಯಕ್ಕೆ ಬರುವವರೆಗೂ ಪ್ರಪಂಚದಲ್ಲಿ ಗಂಡು–ಹೆಣ್ಣು ಎಂಬ ಎರಡು ಜಾತಿಗಳಿವೆಯೆಂಬುದೇ ತಿಳಿದಿರಲಿಲ್ಲವಂತೆ. ಅಂಥ ಮಹನೀಯರವರು. ಆದಿತ್ಯವೆಂದರೆ ಜ್ಯೋತಿರ್ವಿದ್ಯೆಯೆಂದು ತಿಳಿಸಿದ್ದಾರೆ. ಜ್ಯೋತಿರ್ವಿದ್ಯೆಯು ಲೋಭವನ್ನು ಜಯಿಸುವದರಿಂದ ಸಿದ್ಧಿಸುತ್ತದೆ. ಜ್ಯೋತಿಷ್ಯಶಾಸ್ತ್ರವನ್ನೇ ಈ ವಿದ್ಯೆಯೆಂದು ತಿಳಿದರೆ ತಪ್ಪಾಗಲಾರದು. ಭವಿಷ್ಯವನ್ನು ಹೇಳುವವನು ಧನದ ಆಶೆಗೂ ಲೋಭಕ್ಕೂ ವಶನಾದಾಗ ಅವನು ಹೇಳಿದ್ದೆಲ್ಲವೂ ಸುಳ್ಳಾಗುವದು. ಆದರೆ ಋಷಿಗಳು ಭವಿಷ್ಯವನ್ನು ನುಡಿದಾಗ ಅವರ ಮಾತಿನಂತೆಯೇ ನಡೆಯುತ್ತಿದ್ದುದರ ರಹಸ್ಯವೇನೆಂದರೆ ಅವರು ಲೋಭವನ್ನು ದಾಟಿರುವವರಾಗಿದ್ದರು. ಅದೇ ಅವರ ತಪಃಶಕ್ತಿಯಾಗಿತ್ತು. ಇರಲಿ. ಸಾವಿತ್ರವೆಂದರೆ ಆಯುರ್ವಿದ್ಯೆಯೆಂದು ತಿಳಿಯಬೇಕು. ಇದು ಕ್ರೋಧವನ್ನು ಜಯಿಸುವದರಿಂದ ಸಿದ್ಧಿಸುವದು. ಕ್ರೋಧವು ಮನುಷ್ಯನಲ್ಲಿ ನೆಲೆಸಿರುವ ಕೆಟ್ಟ ಗುಣಗಳಲ್ಲಿ ಒಂದಾದರೂ ನರಕದ್ವಾರವೆಂದೇ ಗೀತೆಯಲ್ಲಿ ತಿಳಿಸಲಾಗಿದೆ. ಕಾಮವನ್ನು ಗೆದ್ದವರೂ ಸಹ ಕ್ರೋಧವನ್ನು ಜಯಿಸಲಾರದೆ ಸೋತುಹೋಗಿರುವದುಂಟು. ಆದರೆ ಅದನ್ನು ಗೆದ್ದಾಗ ಆಯುರ್ವಿದ್ಯೆಯು ನಮ್ಮ ಕೈವಶವಾಗುವದು. ಆಯುಃ ಎಂದರೆ ಕಾಲವೆಂದರ್ಥ. ಆಯುರ್ವೇದ ಎಂಬಲ್ಲಿಯೂ ಕಾಲವರಿತೇ ಚಿಕಿತ್ಸೆಗಳನ್ನು ಮಾಡುವದು. ಅಥವಾ ಕಾಲನಿಯಮಕ್ಕೆ ತಕ್ಕಂತೆ ನಡೆದುಕೊಳ್ಳುವುದರಿಂದ ಮೃತ್ಯುವನ್ನು ಹಿಮ್ಮೆಟ್ಟಿಸುವದು ಎಂದಭಿಪ್ರಾಯವಿದೆ.

ಇನ್ನು ಸಾರಸ್ವತವೆಂದರೆ ಬ್ರಹ್ಮವಿದ್ಯೆಯು. ಸರಸ್ವತೀ ಎಂಬ ಶಬ್ದದಿಂದ ಸಿದ್ಧವಾಗಿರುವ ಈ ಪದವು ಇಲ್ಲಿ ಆತ್ಮವಿದ್ಯೆಯನ್ನು ಪ್ರತಿನಿಧಿಸುತ್ತದೆ. ಇದು ಕಾಮವನ್ನು ಜಯಿಸುವದರಿಂದ ದೊರಕುತ್ತದೆ. ಅಕಾಮಹತನಾದ ವಿದ್ವಾಂಸನಾದ ಶ್ರೋತ್ರಿಯನಿಗೆ ಮಾತ್ರವೇ ಬ್ರಹ್ಮಾನಂದದವರೆಗಿನ ಎಲ್ಲಾ ಆನಂದಗಳೂ ದೊರಕುವವೆಂದು ತೈತ್ತಿರೀಯೋಪನಿಷತ್ತಿನಲ್ಲಿ ತಿಳಿಸಿರುತ್ತದೆ.

ಕಾಮಜಯವೆಂಬುದು ಬಹಳ ಕಷ್ಟಸಾಧ್ಯವಾದ ಕೆಲಸ. ಇದು ತಪಸ್ಸಿನಿಂದ ಮಾತ್ರವೇ ದಕ್ಕುವದು. ಕಾಮನಿಗೆ ನಾನಾರೂಪಗಳಿರುವದರಿಂದ ಒಂದು ರೂಪದಿಂದ ಜಯಿಸಿದರೆ ಮತ್ತೊಂದು ರೂಪದಿಂದ ಅವನು ನಮ್ಮಲ್ಲಿ ಸೇರಿಕೊಳ್ಳುವನು. ಉದಾಹರಣೆಗೆ ಸ್ತ್ರೀಸಂಬಂಧವಾದ ಕಾಮವನ್ನು ಜಯಿಸಿದವನಿಗೆ ಕೀರ್ತಿಯೆಂಬ ಕಾಮನೋ, ಧನವೆಂಬ ಕಾಮನೋ ಗಂಟುಬೀಳಬಹುದು. ಸರ್ವಕಾಮಗಳನ್ನೂ ಜಯಿಸುವದೆಂಬುದು ಸರ್ವಕಾಮಗಳನ್ನೂ ಪಡೆದುಕೊಳ್ಳುವದರಿಂದ ಆದೀತು. ಅದು ಸಾರಸ್ವತ ವೆಂಬ ಬ್ರಹ್ಮವಿದ್ಯೆಯ ಫಲವೇ ಆಗಿರುವದು.

ಇನ್ನು **ಪೌಷ್ಣ, ಪಾತ್ನೀವತ, ಹಾರಿಯೋಜನ**–ಶಬ್ದಗಳ ಅರ್ಥವನ್ನು ತಿಳಿಯೋಣ. **ಪೌಷ್ಣ**ವೆಂದರೆ ತಪಃಪ್ರಭಾವವನ್ನು (ಪುಷ್ಣಾತಿ) ಬೆಳೆಯಿಸುವ ಆಶ್ರಮ ಎಂದರ್ಥ ಮಾಡಲಾಗಿದೆ. ಇದೇ ಬ್ರಹ್ಮಚರ್ಯವು. ಈ ಆಶ್ರಮದಲ್ಲಿ ತಪಸ್ಸು ಚೆನ್ನಾಗಿ ವೃದ್ಧಿಯಾಗುವದು. ಬ್ರಹ್ಮವಿದ್ಯೆಯನ್ನು ಬಯಸುವವರು ಈ ಬ್ರಹ್ಮಚರ್ಯವನ್ನಾಶ್ರಯಿಸಿಯೇ ಅದನ್ನು ಪಡೆದುಕೊಳ್ಳಬೇಕು. ಹಾಗೆಯೇ **ಪಾತ್ನೀವತ**ವೆಂದರೆ ಪತ್ನಿಯುಳ್ಳಂಥ ಆಶ್ರಮ–ಗೃಹಸ್ಥಾಶ್ರಮ–ಎಂದು ಅರ್ಥಮಾಡಲಾಗಿದೆ. ಯಜಮಾನ, ಪತ್ನಿ– ಇಬ್ಬರೂ ಕೂಡಿಯೇ ಗೃಹಸ್ಥ ಕರ್ಮಗಳನ್ನು ಅನುಷ್ಠಾನಮಾಡಬೇಕಾಗಿದೆ. ಇದರಿಂದ ಸಿದ್ಧವಾಗುವ ದೇನೆಂದರೆ: ಆಶ್ರಮಸಮುಚ್ಚಯವೂ ಶ್ರುತಿವಿಹಿತವೇ ಎಂದಾಗುತ್ತದೆ. ಸಮುಚ್ಚಯ ಎಂದರೆ ಒಬ್ಬ ವ್ಯಕ್ತಿಯು ಕ್ರಮವಾಗಿ ಮೊದಲು ಬ್ರಹ್ಮಚಾರಿ ಯಾಗಿದ್ದು ಅನಂತರ ಗಾರ್ಹಸ್ಥ್ಯ–ವಾನಪ್ರಸ್ಥಾಶ್ರಮಗಳನ್ನು ಸ್ವೀಕರಿಸಿ ಕಡೆಯಲ್ಲಿ ಸಂನ್ಯಾಸಿಯಾಗುವದು. ಇದು ಮೋಕ್ಷಕ್ಕೆ ಸುಲಭವಾದ ಮಾರ್ಗವು. ಕಡೆಯಲ್ಲಿ **ಹಾರಿಯೋಜನ**ವೆಂಬ ಶಬ್ದದಿಂದ ಸಂನ್ಯಾಸಾಶ್ರಮವನ್ನು ಹೇಳಿದೆ. 'ಹರಿಣಾ–ಯೋಜಯತೀತಿ ಹಾರಿಯೋ ಜನಃ' ಎಂದು ವ್ಯುತ್ಪತ್ತಿಮಾಡಿ ಶ್ರೀ ಹರಿಯೊಡನೆ ನಮ್ಮನ್ನು ಕೂಡಿಸುವ ಪರಮಶ್ರೇಷ್ಠವಾದ ಆಶ್ರಮವೇ ಸಂನ್ಯಾಸವು. ಇದೂ ಕಟ್ಟಕಡೆಯಲ್ಲಿ ಬಯಸತಕ್ಕದ್ದೇ ಆಗಿದೆ. ಏಕೆಂದರೆ

ಸಂನ್ಯಾಸಪೂರ್ವಕವಾಗಿ ದೇಹತ್ಯಾಗ ಮಾಡಿದರೆ ಪ್ರೇತತ್ವವಾಗಲಿ ಪುನರ್ಜನ್ಮವಾಗಲಿ ಇರುವದಿಲ್ಲವೆಂತ ಶಾಸ್ತ್ರಗಳ ಹೇಳಿಕೆಯಿದೆ. ವಿದ್ವತ್ ಸಂನ್ಯಾಸವೇ ಇಲ್ಲಿ ವಿವಕ್ಷಿತವೆಂಬುದನ್ನು ಮಾತ್ರ ಹೇಳಬೇಕಾಗಿಲ್ಲವಷ್ಟೆ!

ಹೀಗೆ ಚಮಕಾಧ್ಯಾಯವು ಪಾಠಕರಿಗೆ ನಾನಾವಿಧವಾದ ಸತ್ಕಾಮಗಳ ಪರಿಚಯವನ್ನೂ ಅವುಗಳ ವಿವರವನ್ನೂ ಪಡೆದುಕೊಳ್ಳುವ ವಿಧಾನವನ್ನೂ ಪ್ರಯೋಜನಗಳನ್ನೂ ತಿಳಿಸುತ್ತಾ ಪರಮಪುರುಷಾರ್ಥದ ಕಡೆಗೆ ಮಾನವನನ್ನು ಒಯ್ಯುವ ದಾರಿದೀಪವಾಗಿರುವದು.

---

## 15. ಇಧ್ಮಶ್ಚ ಮೇ ಬರ್ಹಿಶ್ಚ ಮೇ

ಚಮಕಾಧ್ಯಾಯದ ಎಂಟನೆಯ ಅನುವಾಕದ ಅರ್ಥವನ್ನು ಈಗ ವಿಚಾರಮಾಡಬೇಕಾಗಿದೆ.

**ಇಧ್ಮಶ್ಚ ಮೇ ಬರ್ಹಿಶ್ಚ ಮೇ ವೇದಿಶ್ಚ ಮೇ ಧಿಷ್ಣಿಯಾಶ್ಚ ಮೇ ಸ್ರುಚಶ್ಚ ಮೇ ಚಮಸಾಶ್ಚ ಮೇ ಗ್ರಾವಾಣಶ್ಚ ಮೇ ಸ್ವರವಶ್ಚ ಮ ಉಪರವಾಶ್ಚ ಮೇಽಧಿಷವಣೇ ಚ ಮೇ ದ್ರೋಣಕಲಶಶ್ಚ ಮೇ ವಾಯವ್ಯಾನಿ ಚ ಮೇ ಪೂತಭೃಚ್ಚ ಮ ಆಧವನೀಯಶ್ಚ ಮ ಆಗ್ನೀಧ್ರಂ ಚ ಮೇ ಹವಿರ್ಧಾನಂ ಚ ಮೇ ಗೃಹಾಶ್ಚ ಮೇ ಸದಶ್ಚ ಮೇ ಪುರೋಡಾಶಾಶ್ಚ ಮೇ ಪಚತಾಶ್ಚ ಮೇಽವಭೃಥಶ್ಚ ಮೇ ಸ್ವಗಾಕಾರಶ್ಚ ಮೇ ॥**

"ಇಧ್ಮವೂ, ಬರ್ಹಿಯೂ, ವೇದಿಯೂ, ಧಿಷ್ಣಿಯಗಳೂ, ಸ್ರುಕ್ಕುಗಳೂ, ಚಮಸಗಳೂ, ಗ್ರಾವಾಣಗಳೂ, ಸ್ವರವಗಳೂ, ಉಪರವಗಳೂ, ಅಧಿಷವಣಗಳೂ, ದ್ರೋಣಕಲಶವೂ, ವಾಯವ್ಯವೂ, ಪೂತಭೃತ್ತೂ, ಆಧವನೀಯವೂ, ಅಗ್ನೀಧ್ರವೂ,

ಹವಿರ್ಧಾನವೂ, ಗೃಹಗಳೂ, ಸದಗಳೂ, ಪುರೋಡಾಶಗಳೂ, ಪಚತಗಳೂ, ಅವಭೃಥವೂ, ಸ್ವಗಾಕಾರವೂ, ಯಜ್ಞಕ್ಕಾಗಿ ನನಗೆ ಉಂಟಾಗಲಿ!''

ಈ ಅನುವಾಕದಲ್ಲಿ ಸದ್ಯೋಮುಕ್ತಿಯನ್ನು ಬಯಸುವವನು ತನ್ನ ಶರೀರವನ್ನು ಹೇಗೆ ಯಜ್ಞಸಾಧನವಾಗಿ ಮಾಡಿಕೊಂಡು ಅದರ ಪ್ರತಿಯೊಂದು ಅವಯವಗಳಲ್ಲಿಯೂ ಯಜ್ಞಸಂಭಾರವಿಶೇಷಗಳನ್ನು ಚಿಂತಿಸಿ ಭಾವಿಸುತ್ತಾ ಸಾರ್ಥಕಗೊಳಿಸಿಕೊಳ್ಳಬೇಕೆಂಬುದನ್ನು ತಿಳಿಸಿದೆ. ದೇಹವನ್ನು ಬಿಡುವದರಲ್ಲಿಯೂ ಅಜ್ಞಾನಿಗೂ ಜ್ಞಾನಿಗೂ ವ್ಯತ್ಯಾಸವಿದೆ. ಅಜ್ಞಾನಿಗೆ ದೇಹಾಭಿಮಾನವೂ ಹೋಗಿರುವದಿಲ್ಲವಾದ್ದರಿಂದ ಆತನು ಬಹಳ ಕಷ್ಟದಿಂದ ಬಿಡಲಾರದೆ ದೇಹವನ್ನು ಬಿಡುತ್ತಾನೆ. ಅನಂತರವೂ "ಇದು ನನ್ನ ದೇಹ"–ಎಂಬ ಅಭಿಮಾನವಿರಬಹುದು. ದೇಹವನ್ನು ಸುಟ್ಟುಬೂದಿಮಾಡಿದರೂ "ಈ ಬೂದಿಯು ನನ್ನ ದೇಹವನ್ನು ಸುಟ್ಟದ್ದರಿಂದ ಬಂದದ್ದು; ಆದ್ದರಿಂದ ನನ್ನದೇ"–ಎಂದೂ ಎನ್ನಬಹುದು; ಎಂದರೆ ಅವನ ದೇಹವು ಸುಟ್ಟರೂ ಅಭಿಮಾನವು ಮಾತ್ರ ಸುಟ್ಟಿರುವದಿಲ್ಲ. ಆದರೆ ಜ್ಞಾನಿಗಾದರೊ, ಬದುಕಿರುವಾಗಲೇ 'ಈ ದೇಹವು ನನ್ನದಲ್ಲ' ಎಂಬ ತಿಳಿವಳಿಕೆಯಿರುವದರಿಂದ ದೇಹನಿಮಿತ್ತವಾದ ಯಾವ ಸುಖದುಃಖಗಳೂ ಅವನಿಗೆ ಆಗುವಂತಿಲ್ಲ. ಆದ್ದರಿಂದ ಬದುಕಿರುವಾಗಲೇ ಮುಕ್ತನಾಗಿರುವವನು ಪ್ರಾರಬ್ಧವಶದಿಂದ ದೇಹವು ತಾನಾಗಿಯೇ ಬಿದ್ದು ಹೋಗುವ ಸಮಯವು ಬಂದಾಗ ಅದನ್ನು ಯಜ್ಞವನ್ನಾಗಿ ಪರಿವರ್ತಿಸಿಕೊಂಡು ಬಿಡುವನು. ಯಜ್ಞರೂಪವಾದ ಈ ಕರ್ಮವು ಮಾತ್ರ ದೇಹಾಂತರವನ್ನುಂಟು ಮಾಡುವದಿಲ್ಲ. ಹೀಗೆ ಜೀವನ್ಮುಕ್ತನೇ ಆಗಿದ್ದವನು ದೇಹಪಾತಾನಂತರ ವಿದೇಹಮುಕ್ತನಾಗಿಬಿಡುತ್ತಾನೆ. ಇಂಥ ಮಹನೀಯನ ದೃಷ್ಟಿಯಿಂದ ಇಲ್ಲಿ ಶರೀರದಲ್ಲೆಲ್ಲ ಯಜ್ಞಭಾವನೆಯನ್ನು ತಂದುಕೊಳ್ಳುವದಕ್ಕಾಗಿ ಎಲ್ಲಾ ಅವಯವಗಳಿಗೂ ಯಜ್ಞಸಾಮಗ್ರಿಗಳ ರೂಪಕವನ್ನು ಜೋಡಿಸಲಾಗಿದೆ. ಇದರ ವಿವರವನ್ನು ನೋಡೋಣ.

ಈ ಅನುವಾಕದಲ್ಲಿ ಉದಾಹರಿಸಿರುವ ಸಾಮಗ್ರಿಗಳೆಲ್ಲವೂ ಯಜ್ಞವೆಂಬ ವೈದಿಕಕರ್ಮಕ್ಕೆ ಸೇರಿದವುಗಳು. ಆದ್ದರಿಂದ ಯಜ್ಞಮಾಡಿದವರಿಗೆ ಅಥವಾ ಯಜ್ಞಾಧ್ಯಯನ ಮಾಡಿರುವಂಥ ವಿದ್ಯಾಂಸರಿಗೆ ಇವು ಸುಲಭವಾಗಿ ಅರ್ಥವಾಗುತ್ತದೆ. ಉಳಿದವರು ಯಜ್ಞಸಾಮಗ್ರಿಗಳ ಪರಿಚಯದ ಅನಂತರ ಶರೀರಕ್ಕೂ ಹೊಂದಿಸಿಕೊಳ್ಳಬೇಕು. ಯಜ್ಞದಲ್ಲಿ ಪ್ರಧಾನವಾದ ದೇವತೆಗೆ ಹೋಮವನ್ನು ಮಾಡುವ ಮುಂಚೆ ಸಮಿತ್ತುಗಳೆಂಬ ಕಡ್ಡಿಗಳ ಒಂದು ಕಟ್ಟನ್ನು ಅಗ್ನಿಗೆ ಅರ್ಪಿಸುತ್ತಾರೆ. ಇದಕ್ಕೆ 'ಇಧ್ಮಾಧಾನ' ವೆಂದು ಹೆಸರು. ಉಪಾಸಕನು ಈ ಶರೀರವನ್ನೇ ಇಧ್ಮವೆಂದು ಭಾವಿಸಿಕೊಳ್ಳಬೇಕು. ಹೀಗೆಯೇ ಉಳಿದವುಗಳನ್ನೂ ತಿಳಿಯಬೇಕು. ಬರ್ಹಿ ಎಂದರೆ ತುಪ್ಪದ ಪಾತ್ರೆಯನ್ನಿಡಲು ಹಾಸುವ ತುಂಡುದರ್ಭೆಗಳು. ನಮ್ಮ ಶರೀರದಲ್ಲಿರುವ ಕೂದಲುಗಳನ್ನೇ ಬರ್ಹಿಯೆಂದು ಚಿಂತಿಸಬೇಕು. ಎದೆಯೇ ವೇದಿಯು ಎಂದರೆ ಅಗ್ನಿಯನ್ನು ಸ್ಥಾಪಿಸುವ ಕಟ್ಟೆಯು. ಪ್ರಾಣಗಳೇ ಧಿಷ್ಣಿಯಗಳೆಂಬಿವು. ಎಂದರೆ ಸ್ಥಾನಗಳು. ಜ್ಞಾನೇಂದ್ರಿಯಗಳೆಂಬಿವೇ ಸ್ರುಕ್ಕುಗಳು. ಕರ್ಮೇಂದ್ರಿಯಗಳು ಚಮಸಗಳು. ಅಸ್ಥಿಗಳೇ ಗ್ರಾವಾಣಗಳೆಂಬಿವು. ಇವೆಲ್ಲ ಯಜ್ಞಕ್ಕೆ ಬೇಕಾದ ಸಾಮಗ್ರಿಗಳೇ ಆಗಿವೆ. ದೇಹದಲ್ಲಿರುವ ಸಂದುಗಳೇ ಸ್ವರವಗಳೆಂಬಿವು. ತಲೆಯ ಕಪಾಲಗಳೇ ಉಪರವಗಳು. ನಾಡೀಶಾಸ್ತ್ರಪ್ರಸಿದ್ಧವಾದ ಸೂರ್ಯ–ಚಂದ್ರನಾಡಿಗಳೆಂಬಿವೇ ಅಧಿಷವಣಗಳು. ಇವೂ ಮನುಷ್ಯನ ಶರೀರದಲ್ಲಿಯೇ ಇವೆ. ಇನ್ನು ದ್ರೋಣಕಲಶವೆಂದರೆ ಯೋಗ ಶಾಸ್ತ್ರಪ್ರಸಿದ್ಧವಾದ ಕಂಠಕೂಪವು. ಕಂಠವೆಂದರೆ ಕುತ್ತಿಗೆಯು. ಅದರಲ್ಲಿರುವ ನಾಳವೇ ಕೂಪವು. ನಾವು ಆಹಾರವನ್ನು ಗಂಟಲಿನ ಮೂಲಕವೇ ನುಂಗುತ್ತೇವಷ್ಟೆ? ಯೋಗಿಗಳು ಸಾಧನಬಲದಿಂದ ಈ ಕಂಠಕೂಪವನ್ನು ವಶಮಾಡಿಕೊಂಡಲ್ಲಿ ಹಸಿವು ಬಾಯಾರಿಕೆಗಳೇ ಆಗುವದಿಲ್ಲವಂತೆ! ಇದೊಂದು ಸಿದ್ಧಿಯು. ಇರಲಿ; ವಾಯವ್ಯಗಳೆಂದರೆ ಹತ್ತು ಸ್ವರಗಳು. ಧ್ವನಿಗಳು ಎಂದರ್ಥ. ಇವು ಹಂಸೋಪನಿಷತ್ತಿನಲ್ಲಿ ವಿವರವಾಗಿ ತಿಳಿಸಲ್ಪಟ್ಟಿವೆ. ಋತಂಭರಾ ಎಂಬ

ಯೋಗಶಾಸ್ತ್ರಪ್ರಸಿದ್ಧವಾದ ಪ್ರಜ್ಞೆ (ತಿಳಿವಳಿಕೆ)ಯೇ **ಪೂತಭೃತ್** ಎನಿಸುವದು. ಇನ್ನು ಓಜಸ್ಸೆಂಬ ಹೆಸರಿನ ಮನೋಧಾತುವನ್ನು **ಆಧವನೀಯ**ವೆಂದು ಭಾವಿಸಬೇಕು. ಹೀಗೆ ಸ್ಥೂಲಶರೀರದ ಜೊತೆಗೆ ಲಿಂಗ(ಸೂಕ್ಷ್ಮ) ಶರೀರವನ್ನೂ ಗಣನೆಗೆ ತೆಗೆದುಕೊಂಡು ಅದರ ಅವಯವಗಳಲ್ಲಿಯೂ ಯಜ್ಞಸಾಮಗ್ರಿಗಳ ರೂಪಕವನ್ನು ಕಲ್ಪಿಸುತ್ತಾ ಹೋಗಬೇಕೆಂದು ಅಭಿಪ್ರಾಯ.

ಈಗ ಮುಂದುವರೆದು ವಿಚಾರಮಾಡೋಣ. ಚಿತ್‌ಪ್ರಕಾಶ ರೂಪನಾದ ಅಗ್ನಿಯನ್ನು ಧರಿಸಿರುವದರಿಂದ ಶುಕ್ಲ ಎಂಬ ಹೆಸರಿನ ಬುದ್ಧಿತತ್ತ್ವವನ್ನು **ಆಗ್ನೀಧ್ರ** ಎಂದು ಚಿಂತಿಸಬೇಕು. ಚಿತ್ತವೆಂಬ ಧಾತುವೇ **ಹವಿರ್ಧಾನವು**. ಹವಿಸ್ಸನ್ನು ಇಡುವ ಪಾತ್ರೆಯನ್ನು ಹವಿರ್ಧಾನವೆನ್ನುವರು. ಚಿತ್ತದಲ್ಲಿ ಎಲ್ಲಾ ಆಲೋಚನೆಗಳೂ ಇಡಲ್ಪಡುವದರಿಂದ ಅದನ್ನು ಹೀಗೆ ಚಿಂತಿಸಬೇಕು. ಶಬ್ದವೇ ಮುಂತಾದ ವಿಷಯಗಳನ್ನು **ಗೃಹ**ಗಳೆಂದು ಧ್ಯಾನಿಸಬೇಕು. ಹೃದಯಸ್ಥಾನವು ಸದಸ್ಸೆನಿಸುವದು. ನಾನಾವಿಧವಾದ ಆಶೆಗಳ ರೂಪವಾದ ಕಾಮಗಳನ್ನೆಲ್ಲ ಪುರೋಡಾಶಗಳೆಂದು ಚಿಂತಿಸಬೇಕು. **ಪುರೋಡಾಶ**ವೆಂಬುದು ಯಜ್ಞದಲ್ಲಿ ದೇವತೆಗಳಿಗೆ ಅರ್ಪಿಸುವದಕ್ಕಾಗಿ ಸಿದ್ಧಮಾಡಿರುವ ದ್ರವ್ಯವು. ತಮಸ್ಸೇ—ಮುಂತಾದ ಐದು ಮನೋವೃತ್ತಿಗಳನ್ನು **ಪಚತ**ಗಳೆಂದು ಭಾವಿಸಬೇಕು. ಕೊನೆಯದಾಗಿ **ಅವಭೃಥವು**. ಇದು ಯಜ್ಞದ ಪರಿಸಮಾಪ್ತಿಯನ್ನು ಸೂಚಿಸುವದು. ಯೋಗಶಾಸ್ತ್ರದವರು ತಿಳಿಸುವಂತೆ ಇಡಾ, ಪಿಂಗಳಾ, ಸುಷುಮ್ನಾ ಎಂಬ ಮೂರು ನಾಡಿಗಳು ಮನುಷ್ಯದೇಹದಲ್ಲಿ ಪ್ರಸಿದ್ಧವಾಗಿವೆ. ಇವುಗಳಲ್ಲಿ ಸುಷುಮ್ನಾನಾಡಿಯು ಊರ್ಧ್ವಮುಖವಾಗಿರುವದು. ಇಡಾ, ಪಿಂಗಳೆಗಳು ಈ ಸುಷುಮ್ನೆಯೊಡನೆ ಸಮಾಗಮವಾದಾಗ ಗಂಗಾ, ಯಮುನಾ, ಸರಸ್ವತೀ— ಎಂಬ ತ್ರಿವೇಣೀ ಸಂಗಮದಂತೆ ಪವಿತ್ರ ತೀರ್ಥವಾಗುವದು. ಯೋಗಿಗಳು ಈ ತ್ರಿವೇಣಿಯಲ್ಲಿ ಸ್ನಾನಮಾಡಿ (ಆತ್ಮ) ಯಜ್ಞದ ಅವಭೃಥವನ್ನಾಚರಿಸುವರು. ಇಡೆಯನ್ನು ಯಮುನೆಯೆಂದೂ ಪಿಂಗಳೆಯನ್ನು ಸರಸ್ವತಿಯೆಂದೂ ಸುಷುಮ್ನೆಯನ್ನು ಗಂಗೆಯೆಂದೂ

ಹರದೀಪಿಕೆ–ಎಂಬ ಗ್ರಂಥದಲ್ಲಿ ಹೇಳಿದೆ. ಇವುಗಳ ಸಂಗಮದಲ್ಲಿ ಮಾಡುವ ಸ್ನಾನವೇ ತ್ರಿವೇಣಿಸ್ನಾನವು. ಇದು ಸಾಮಾನ್ಯ ಯೋಗಿಗಳಿಗೂ ದುರ್ಲಭವೇ–ಎಂದೂ ಅಲ್ಲಿ ಹೇಳಿದೆ. ಆದ್ದರಿಂದ ಈ ಶರೀರಯಜ್ಞದ ಅವಭೃಥವು ಹೀಗೆ ಸೂಕ್ಷ್ಮವಾದ ತ್ರಿವೇಣಿಗಳ ಸಂಗಮದಲ್ಲಿ ನೆರವೇರಿ ಯಜ್ಞಕರ್ಮವೂ ಪೂರೈಸುತ್ತದೆ. ಹೀಗೆಂದು ಚಿಂತಿಸಬೇಕೆಂದು–ಶ್ರುತಿಯ ಅಭಿಪ್ರಾಯವಾಗಿದೆ.

ಕೊನೆಯದಾಗಿ ಸ್ವಗಾಕಾರವೆಂದರೆ ಸಮರ್ಪಣವು 'ಸ್ವಗಾಕೃತಾ ವೈ ಪಶವಃ' ಎಂಬ ವಾಕ್ಯದಲ್ಲಿ ಈ ಅಭಿಪ್ರಾಯವು ಸ್ಪಷ್ಟವಾಗಿದೆ. ಒಟ್ಟಿನಲ್ಲಿ ದೇಹವೇ ಮುಂತಾದ ಸಕಲಪದಾರ್ಥಗಳೂ ಪ್ರತ್ಯಗಾತ್ಮನಾದ ಪರಮಾನಂದ ಬ್ರಹ್ಮನಲ್ಲಿಯೇ ಒಂದಾಗಿಬಿಡಲಿ! ಎಂಬಿದು ಈ ಅನುವಾಕದ ಸಾರವಾಗಿದೆ. "ಮೇ" ಎಂದು ಪ್ರತಿಯೊಂದು ಪದಾರ್ಥದ ಜೊತೆಗೂ ಹೇಳಿರುವದರ ಅಭಿಪ್ರಾಯವೇನೆಂದರೆ: ಚಿದ್ರೂಪವಾದ ಪರಬ್ರಹ್ಮಕ್ಕೂ ಜಡವಾಗಿ ತೋರುತ್ತಿರುವ ಹೊರಗಿನ ಪದಾರ್ಥಗಳಿಗೂ ಸಂಬಂಧವನ್ನು ಹೆಚ್ಚುಹೆಚ್ಚು ದೃಢಗೊಳಿಸುವದಕ್ಕಾಗಿ–ಎಂದು ತಿಳಿಯಬೇಕು.

ಈ ಮಂತ್ರಭಾಗದ ಅರ್ಥವು ಸಾಮಾನ್ಯರಿಗೆ ಒಮ್ಮೆಗೇ ತಿಳಿಯುವಂತಿಲ್ಲ. ಆದರೂ ವೇದದಲ್ಲಿ ಎಂಥೆಂಥ ಮಹದ್ವಿಚಾರಗಳು ಅಡಕವಾಗಿವೆ–ಎಂಬಿದನ್ನು ಮನಗಾಣುವಮಟ್ಟಿಗೆ ಈ ವಿವರಣೆಯು ಉಪಯೋಗವಾದೀತು. ಜೊತೆಗೆ ಯೋಗಶಾಸ್ತ್ರದ ಪರಿಚಯವೂ ವೇದಾಂತೋಕ್ತ ತತ್ತ್ವಜ್ಞಾನಕ್ಕೆ ಬಹಳ ಅಗತ್ಯವೆಂದೂ ಕಂಡುಬರುತ್ತದೆ. ವೇದದಲ್ಲಿ ವಿಧಿಸಿರುವ ಕರ್ಮಗಳ ಅನುಷ್ಠಾನಕ್ಕೆ ಪೂರ್ವಮೀಮಾಂಸಾ ಶಾಸ್ತ್ರದ ಪರಿಚಯವು ಅಗತ್ಯವಾಗಿರುವಂತೆಯೇ ಉಪಾಸನೆಗಳಿಗೆ ಯೋಗಶಾಸ್ತ್ರದ ಪ್ರಕ್ರಿಯೆಗಳ ಪರಿಚಯವು ಬೇಕಾಗಿದೆ. ಹೀಗೆ ವೇದವು ಎಲ್ಲಾ ದರ್ಶನಗಳ ಸಾರವಾಗಿದೆ. ಈಗಿನ ಕಾಲಕ್ಕೆ ವೇದಾಧ್ಯಯನವೇ ದುರ್ಲಭವಾಗಿರುವದರಿಂದ ಇನ್ನು ಅದರ ಅರ್ಥವಿಚಾರ–ವೇದೋಕ್ತ

ಕರ್ಮೋಪಾಸನೆಗಳ ಅನುಷ್ಠಾನ, ಅದರಿಂದ ಚಿತ್ತಶುದ್ಧಿಯ ಮೂಲಕ ಆತ್ಮಜ್ಞಾನ, ಮುಕ್ತಿ– ಇವುಗಳು ಕಲಿಯುಗದವರಿಗೆ ಹಗಲುಗನಸೆಂದೇ ಭಾವಿಸಬಹುದು. ಅಂತೂ ನಮ್ಮ ಪೂರ್ವಜರ ತಿಳಿವಳಿಕೆ ಹಾಗೂ ಕ್ರಿಯಾಶೀಲತೆಯು ಯಾವ ಕಾಲಕ್ಕೂ ಆದರ್ಶವಾಗಿಯೇ ಉಳಿದಿರುತ್ತದೆ– ಎಂಬಿದು ಸತ್ಯ. ಅಂಥವರ ಸ್ಮರಣೆಯಿಂದಲಾದರೂ ನಾವು ಮೇಲಕ್ಕೆ ಏರಲು ಯತ್ನಿಸೋಣ.

---

## 16. ಅಗ್ನಿಶ್ಚ ಮೇ ಘರ್ಮಶ್ಚ ಮೇ

ಚಮಕಾಧ್ಯಾಯದ ಒಂಭತ್ತನೆಯ ಅನುವಾಕವನ್ನು ಈಗ ವಿಚಾರ ಮಾಡಬೇಕಾಗಿದೆ.

**ಅಗ್ನಿಶ್ಚ ಮೇ ಘರ್ಮಶ್ಚ ಮೇಽರ್ಕಶ್ಚ ಮೇ ಸೂರ್ಯಶ್ಚ ಮೇ ಪ್ರಾಣಶ್ಚ ಮೇಽಶ್ವಮೇಧಶ್ಚ ಮೇ ಪೃಥಿವೀ ಚ ಮೇ ದಿತಿಶ್ಚ ಮೇಽದಿತಿಶ್ಚ ಮೇ ದ್ಯೌಶ್ಚ ಮೇ ಶಕ್ವರೀರಂಗುಲಯೋ ದಿಶಶ್ಚ ಮೇ ಯಜ್ಞೇನ ಕಲ್ಪಂತಾಮೃಕ್ ಚ ಮೇ ಸಾಮ ಚ ಮೇ ಸ್ತೋಮಶ್ಚ ಮೇ ಯಜುಶ್ಚ ಮೇ ದೀಕ್ಷಾ ಚ ಮೇ ತಪಶ್ಚ ಮ ಋತುಶ್ಚ ಮೇ ವ್ರತಂ ಚ ಮೇಽಹೋ ರಾತ್ರಯೋರ್ವೃಷ್ಟ್ಯಾ ಬೃಹದ್ರಥಂತರೇ ಚ ಮೇ ಯಜ್ಞೇನ ಕಲ್ಪೇತಾಮ್॥**

"ಅಗ್ನಿಯೂ, ಘರ್ಮವೂ, ಅರ್ಕವೂ, ಸೂರ್ಯನೂ, ಪ್ರಾಣವೂ, ಅಶ್ವಮೇಧವೂ, ಪೃಥಿವಿಯೂ, ದಿತಿಯೂ, ಆದಿತಿಯೂ, ದ್ಯುಲೋಕವೂ, ಶಕ್ವರಿಗಳು, ಅಂಗುಲಿಗಳೂ, ದಿಕ್ಕುಗಳೂ ಯಜ್ಞಕ್ಕಾಗಿ ಉಂಟಾಗಲಿ! ಮತ್ತು ಋಕ್ಕು, ಸಾಮ, ಸ್ತೋಮ, ಯಜುಸ್ಸು, ದೀಕ್ಷೆ, ತಪಸ್ಸು, ಋತುಗಳು, ವ್ರತಗಳು, ಹಗಲೂ ರಾತ್ರಿಯೂ,

ಸಮೃದ್ಧಿಯುಂಟಾಗಲು ಬೃಹತ್ತು- ರಥಂತರ ಸಾಮಗಳೂ ನನಗೆ ಯಜ್ಞಕ್ಕಾಗಿ ಒದಗಲಿ."

ಈ ಅನುವಾಕದಲ್ಲಿ ಸಮಷ್ಟಿದೇಹಾಭಿಮಾನಿಯಾದ ವಿರಾಟ್ ಪುರುಷನು ತನ್ನ ಪ್ರತ್ಯಗಾತ್ಮನಾಗಿರುವ ಪರಮಾತ್ಮನಲ್ಲಿ ಲಯವಾಗಲೆಂದು ಬೇಡಿಕೊಳ್ಳಲಾಗಿದೆ. ಆದರೆ ವಿರಾಟ್‌ಪುರುಷನು ಜೀವನಿಗಿಂತ ದೊಡ್ಡವನು. ಅವನನ್ನು ಜೀವನಲ್ಲಿ ಒಂದಾಗುವಂತೆ ಪ್ರಾರ್ಥಿಸುವದು ವಿರುದ್ಧವಲ್ಲವೆ? ಎಂದು ಆಕ್ಷೇಪಿಸಬಹುದು. ಇದಕ್ಕೆ ಉತ್ತರವೇನೆಂದರೆ: ಜೀವನೆಂಬುವನೂ ನಿಜವಾಗಿ ಪರಬ್ರಹ್ಮವೇ ಆಗಿರುವನಷ್ಟೆ? ಆದ್ದರಿಂದ ಎಲ್ಲಾ ಅಧ್ಯಾರೋಪಗಳೂ ಎಂದರೆ, ಜೀವ, ವಿರಾಟ್, ಹಿರಣ್ಯಗರ್ಭ ಮುಂತಾದ ಎಲ್ಲಾ ಸಮಷ್ಟಿವ್ಯಷ್ಟಿ ಜೀವರುಗಳೂ ಪರಮಾತ್ಮನಲ್ಲಿಯೇ ಕಲ್ಪಿತವಾಗಿರುವದ ರಿಂದ ಜೀವನೆಂದು ನಾವು ವ್ಯವಹಾರದಲ್ಲಿ ಭಾವಿಸಿರುವ ಆತ್ಮನೂ ಪರಬ್ರಹ್ಮವೇ–ಎಂಬಿದೇ ನಿಜವಾಗಿರುವದರಿಂದ ಹೀಗೆ ಹೇಳುವದರಲ್ಲಿ ದೋಷವಿಲ್ಲ. ಈ ಲಯಚಿಂತನೆಯು ಎಲ್ಲಾ ದ್ವೈತಪ್ರಪಂಚವನ್ನೂ ತನ್ನ ಸ್ವರೂಪದಲ್ಲಿಯೇ ಅಡಗಿಸಿಕೊಂಡು ತನ್ನ ನಿಜವಾದ ಪ್ರತ್ಯಗಾತ್ಮನಲ್ಲಿ ನೆಲೆನಿಲ್ಲಲು ಸಹಾಯಕವಾಗಿದೆ.

ಈಗ ವಿರಾಟ್ ಪುರುಷನ ಶರೀರಾವಯವಗಳ ವಿವರವನ್ನು ನೋಡೋಣ. ಅಗ್ನಿ ಎಂದರೆ ನಾನಾ ವಿಷಯಗಳು 'ಅದ್ಯಂತೇ' ಭೋಗಿಸಲ್ಪಡುವದರಿಂದ ಅಗ್ನಿ ಎಂಬುದು ಸ್ವರ್ಗಲೋಕವು. ಹಾಗೆಯೇ ಘರ್ಮವೆಂದರೆ ಸೆಕೆಯಂತೆ ಸಂತಾಪಕರವಾಗಿರುವದರಿಂದ ನರಕಲೋಕ ವೆಂದರ್ಥ. ಅರ್ಕ ಎಂದರೆ ಬ್ರಹ್ಮಲೋಕವು. ಅರ–ಎಂದರೆ ಶೀಘ್ರವಾಗಿ ಕ–ಸುಖವನ್ನು ನೀಡುವದರಿಂದ ಬ್ರಹ್ಮಲೋಕವು ಅರ್ಕವೆನಿಸಿದೆ. ಸೂರ್ಯನೆಂಬುವನು ಪ್ರಸಿದ್ಧನಾಗಿಯೇ ಇರುತ್ತಾನೆ. ಪ್ರಾಣನೆಂಬುವನು ಜಗದ್ವ್ಯಾಪಕನಾದ ವಾಯುವು. ಇವರುಗಳೆಲ್ಲರೂ ವಿರಾಟ್‌ಪುರುಷನ ಶರೀರದ ಪ್ರಧಾನವಾದ ಭಾಗಗಳಾಗಿರುವರು. ಈ ಎಲ್ಲವನ್ನೂ ಯಜ್ಞಕ್ಕಾಗಿ

ಎಂದರೆ ಭಗವಂತನೊಡನೆ ಒಂದಾಗುವ ಜ್ಞಾನಕ್ಕೆ ಸಹಾಯಕವಾಗಿ ಬಯಸಲಾಗಿದೆ. ಜ್ಞಾನವೆಂಬುದು ಎಲ್ಲಕ್ಕಿಂತಲೂ ಮಿಗಿಲಾದುದು. ಅದನ್ನು ಸಂಪಾದಿಸಲು ಎಲ್ಲಾ ದೇವತೆಗಳ ಪ್ರಸಾದವೂ ಎಲ್ಲಾ ಲೋಕಗಳ ಜಯವೂ ಅಗತ್ಯವೆಂಬುದನ್ನು ಹೇಳಬೇಕಾದದ್ದಿಲ್ಲ–ಎಂದಭಿಪ್ರಾಯ.

ಈಗ ಅಶ್ವಮೇಧ ಶಬ್ದಾರ್ಥವನ್ನು ತಿಳಿಸಲಾಗುವದು. ಅಶ್ವ ಎಂದರೆ ಕುದುರೆಯಂತೆ ಚುರುಕಾಗಿ ಎಲ್ಲೆಲ್ಲಿಯೂ ಹರಿದಾಡುವ ಕಾಮವು. ಅದರ ಮೇಧ ಎಂದರೆ ಜಯವು. ಈ ಕಾಮಜಯವೂ ನನಗೆ ಸಹಾಯಕವಾಗಲಿ! ಎಂದರ್ಥ. ಅನಂತರ ದಿತಿ, ಅದಿತಿ–ರೂಪವಾದ ಪೃಥಿವಿಯೂ ಯಜ್ಞಕ್ಕಾಗಿ ಒದಗಲಿ–ಎಂದು ಕೇಳಿಕೊಳ್ಳಲಾಗಿದೆ. ದಿತಿ ಎಂದರೆ ದೈತ್ಯರ ವಾಸಸ್ಥಾನರೂಪವಾದದ್ದು. ಅನಾರ್ಯರಾದ ಜನರು ವಾಸಮಾಡುವ ಭಾಗ ಎಂದರ್ಥ ಮಾಡಬಹುದು. ಈಗಿನ ಭೂಗೋಳದಂತೆ ಪಾಶ್ಚಾತ್ಯದೇಶಗಳು ಎಂದು ಹೇಳಬಹುದಾಗಿದೆ. ಅದಿತಿ ಎಂದರೆ ದೇವತೆಗಳು ವಾಸಮಾಡುವಂಥ ಭೂಭಾಗವು. ಭರತಖಂಡ ಎಂದು ಹೇಳಬಹುದು. ಈ ಎರಡು ವಿಭಾಗವಾದ ಭೂಮಿಯು ನನಗೆ ಯಜ್ಞಕ್ಕೆ ಒದಗಲಿ ಎಂದರ್ಥ. ನಾವು ಅದಿತಿ ದೇಶದಲ್ಲಿರುತ್ತೇವೆ–ಎಂಬಿದು ಒಂದು ಹೆಚ್ಚುಗಾರಿಕೆಯೇ ಸರಿ. ಅದಕ್ಕೆ ತಕ್ಕಂತೆ ನಮ್ಮ ಇಡಿಯ ಭರತಖಂಡದಲ್ಲೆಲ್ಲ ಪ್ರತಿಯೊಂದು ಭಾಗದಲ್ಲಿಯೂ ಸಾಮಾನ್ಯವಾಗಿ ಎಲ್ಲಾ ಊರುಗಳಲ್ಲಿಯೂ ದೇವಾಲಯಗಳಿವೆ. ವರ್ಣಾಶ್ರಮಧರ್ಮನಿಷ್ಠರಾದ ಆಚಾರವಂತರೂ ಸಜ್ಜನರೂ ಪತಿವ್ರತೆಯರೂ ಇದ್ದಾರೆ. ಆದರೆ ಇತರ ಯೂರೋಪ್, ಅಮೆರಿಕಾ ಮುಂತಾದ ದೇಶಗಳಲ್ಲಿ ಈ ಸಂಸ್ಕೃತಿಯನ್ನು ನಾವು ಕಾಣಲಾಗುವದಿಲ್ಲ. ಆದ್ದರಿಂದ ಅದಿತಿಪೃಥಿವಿಯು ನಮ್ಮ ವಾಸಸ್ಥಾನವಾಗಿದೆ. ಇದನ್ನು ಎಂದರೆ ಈ ದೇಶದಲ್ಲಿ ನಾವು ಹುಟ್ಟಿರುವಂಥ ಸುಯೋಗವನ್ನು ಸಾರ್ಥಕಪಡಿಸಿ ಕೊಳ್ಳಬೇಕು. ಇರಲಿ. ದ್ಯೌಃ ಎಂದರೆ ಅಂತರಿಕ್ಷ ಲೋಕವು. ಶಕ್ವರಿಗಳು, ಅಂಗುಲಿಗಳು, ದಿಕ್ಕುಗಳು–ಇವು ಕ್ರಮವಾಗಿ ನಕ್ಷತ್ರಮಾರ್ಗಗಳಾದ ಅಜವೀಥಿ, ನಾಗವೀಥಿ, ಗಜವೀಥಿ–ಎಂಬ ಭಾಗಗಳನ್ನು ತಿಳಿಸುವವು.

ಅಂತರಿಕ್ಷದಲ್ಲಿ ಅನೇಕ ಮಾರ್ಗಗಳಿರುವದು ಪ್ರಸಿದ್ಧವಾಗಿದೆ. ಮನುಷ್ಯರು ಸಂಚಾರ ಮಾಡುವ ವಾಯುಮಾರ್ಗವು ತೀರ ಕೆಳಮಟ್ಟದ್ದು. ಅದನ್ನು ಮೀರಿ, ಚಂದ್ರಪಥ, ಶನಿಪಥ–ಇತ್ಯಾದಿಗಳೂ ಧ್ರುವಾದಿಸ್ಥಾನಗಳಿಗೆ ಹೋಗುವ ಮಾರ್ಗಗಳೂ ಇದ್ದುಕೊಂಡಿವೆಯಷ್ಟೆ! ಇವುಗಳಲ್ಲಿ ಮೂರನ್ನು ಉದಾಹರಣೆಯಾಗಿ ಮೇಲೆ ಕಂಡಂತೆ ತಿಳಿಸಲಾಗಿದೆ. ಇವೆಲ್ಲವೂ ಯಜ್ಞಕ್ಕಾಗಿ ನನಗೆ ಉಂಟಾಗಲಿ! ಎಂಬಿದು ಪ್ರಾರ್ಥನೆಯಾಗಿದೆ.

ಈಗ ಋಕ್ಕು–ಮುಂತಾದವುಗಳನ್ನು ಕುರಿತು ಪ್ರಾರ್ಥಿಸಲಾಗುವದು. ವಿರಾಟ್‌ಪುರುಷನ ಸ್ಥೂಲಾವಯವಗಳಾದ ಪೃಥಿವ್ಯಾದಿಗಳನ್ನೂ ಸೂಕ್ಷ್ಮಾವಯವಗಳಾದ ಬ್ರಹ್ಮಲೋಕಾದಿಗಳನ್ನೂ ಹೇಳಿದ ಅನಂತರ ಈಗ ಆತನ ಆಧ್ಯಾತ್ಮಿಕವಾದ ಶರೀರಾವಯವಗಳನ್ನೂ ಕುರಿತು ತಿಳಿಸಲಾಗುವದು. ಮನೋಮಯನಾದ ಆತನಿಗೆ ಋಕ್ ಎಂಬುದೇ ಬಲಭಾಗ, ಸಾಮವೆಂಬುದೇ ಎಡಭಾಗವು, ಯಜುಸ್ಸೇ ತಲೆ–ಎಂಬ ವರ್ಣನೆಯು ಉಪನಿಷತ್ತಿನಲ್ಲಿದೆ. ಅದಕ್ಕೆ ತಕ್ಕಂತೆ ಇಲ್ಲಿಯೂ **ಋಕ್** ಎಂದರೆ ಪ್ರಸಿದ್ಧವಾದ ಋಗ್ವೇದ. **ಸಾಮ** ಎಂದರೆ ಸಾಮವೇದ. **ಸ್ತೋಮ**ವೆಂದರೆ ಮಂತ್ರಗಳ ಗುಂಪಾದ ಅಥರ್ವವೇದ. **ಯಜುಸ್ಸೆಂ**ದರೆ ಯಜುರ್ವೇದ; ಇವುಗಳು ಯಜ್ಞಕ್ಕಾಗಿ ಉಂಟಾಗಲಿ! ಆಯಾ ದೇವತೆಗಳು ನನ್ನನ್ನು ಪ್ರವೇಶಿಸಲಿ–ಎಂದರ್ಥ. **ದೀಕ್ಷೆ**ಯೆಂದರೆ ವೇದಾಧ್ಯಯನಕ್ಕಾಗಿ ಸ್ವೀಕರಿಸುವ ಬ್ರಹ್ಮಚರ್ಯಾದಿ ನಿಯಮಗಳು. **ತಪಸ್ಸೆಂ**ದರೆ ಜ್ಞಾನಕ್ಕಾಗಿ ಮಾಡುವ ಇಂದ್ರಿಯಮನಸ್ಸುಗಳ ಐಕಾಗ್ರ್ಯರೂಪವಾದ ಚಿಂತನೆಯು. **ಋತು**ವೆಂದರೆ ಉಪಾಸನೆಗಾಗಿ ಮಾಡಬಹುದಾದ ವೇದಾಂತ ಶ್ರವಣಾದಿಗಳು. ಯಾವದನ್ನೇ ಆಗಲಿ, ಮೊದಲು ಕೇಳಿ ತಿಳಿದುಕೊಳ್ಳದೆ ಉಪಾಸನೆಯನ್ನು ಮಾಡುವದು ಸಾಧ್ಯವಾಗುವದಿಲ್ಲವಷ್ಟೆ! ಆದ್ದರಿಂದ ಋತುಗಳೆಂಬ ಸಾಧನವೂ ನನಗೆ ಉಂಟಾಗಲಿ–ಎಂದು ಕೇಳಿಕೊಂಡಿದೆ. **ವ್ರತ**ವೆಂದರೆ ನಿಯಮಗಳು. ಅಗ್ನಿಹೋತ್ರವೇ ಮುಂತಾದ ವೈದಿಕ ಕರ್ಮಾನುಷ್ಠಾನಗಳಿಗಾಗಿ ಸ್ವೀಕರಿಸುವ ಕೆಲವು ನಿರ್ಬಂಧಗಳು. ಮತ್ತು

ಮೇಖಲಾದಿಸಾಧನಗಳು. ಮೇಖಲಾ ಎಂದರೆ ಸಾಮಾನ್ಯವಾಗಿ ಬ್ರಹ್ಮಚಾರಿಗೆ ಸೊಂಟಕ್ಕೆ ಬಿಗಿಯುವ ದರ್ಭೆಯ ಹಗ್ಗ ಎಂಬರ್ಥವಿದೆ. ಮೌಂಜೀ ಎಂದೂ ಇದನ್ನು ಕರೆಯುವರು. ಇಂಥ ಕೆಲವು ಸಾಮಗ್ರಿಗಳ ಉಪಯೋಗ, ಯಜ್ಞೋಪವೀತ, ಉತ್ತರೀಯ, ಶಿಖಾಧಾರಣಾದಿಗಳು ವ್ರತಗಳೆನಿಸಿರುವವು. ಇವುಗಳೆಲ್ಲವೂ ವಿರಾಟ್‌ಪುರುಷನ ಪವಿತ್ರವಾದ ಶರೀರದ ಭಾಗಗಳೇ ಆಗಿದ್ದು ಯಜ್ಞಕ್ಕಾಗಿ ವಿನಿಯೋಗವಾಗಲಿ! ಎಂದು ಪ್ರಾರ್ಥಿಸಿದೆ.

ಇನ್ನು ಬೃಹತ್–ರಥಂತರಗಳೆಂಬ ಹೆಸರಿನ ಸಾಮಗಳು. ಅಹೋ ರಾತ್ರಿಗಳಲ್ಲಿ–(ಹಗಲೂ ರಾತ್ರಿಗಳಲ್ಲಿ) ನನಗೆ ಮಳೆಗರೆಯುವದಕ್ಕಾಗಿ ಒದಗಲಿ–ಎಂಬ ಪ್ರಾರ್ಥನೆಯೊಂದಿದೆ. ಇಲ್ಲಿ ಮಳೆ ಎಂದರೆ ಪರ್ಜನ್ಯ ರೂಪವಾದ ವೃಷ್ಟಿಯೆಂಬುದು ಅಷ್ಟು ಚೆನ್ನಾಗಿ ಹೊಂದುವದಿಲ್ಲ. ಏಕೆಂದರೆ ಹಗಲೂ ರಾತ್ರೆಯೂ ಮಳೆಗರೆದರೆ ಅತಿವೃಷ್ಟಿಯಾಗಿ ಅನರ್ಥವಾಗಬಹುದು. ಆದ್ದರಿಂದ ಕಾಮಗಳು ಮಳೆಗರೆಯಲಿ ಎಂದರ್ಥಮಾಡಬೇಕು. ಎಲ್ಲಾ ಕಾಮಗಳೂ ಆತ್ಮನಲ್ಲಿಯೇ ಒಂದಾದರೆ ಪರಮಪುರುಷಾರ್ಥಪ್ರಾಪ್ತಿಯಾಗು ವದು. ಸಾಮಗಾನಗಳಿಂದ ಕಾಮಗಳ ಪ್ರಾಪ್ತಿಯಾಗುವದೆಂದು ಉಪನಿಷತ್ತಿನಲ್ಲಿ ಹೇಳಿದೆ. ಆದ್ದರಿಂದ ಕಾಮಗಳ ಪ್ರಾಪ್ತಿಯಾಗಿ ಅವು ಯಜ್ಞದಲ್ಲಿ ವಿನಿಯೋಗ ವಾಗುವ ಮೂಲಕ ನನಗೆ ವಿರಾಟ್‌ಪುರುಷನ ಅನುಗ್ರಹವಾಗಲಿ–ಎಂದು ಬೇಡಿಕೊಂಡಿದೆ.

ವಿರಾಟ್‌ಪುರುಷನನ್ನೇ ಪಶುವಾಗಿ ಮಾಡಿ ಅನುಷ್ಠಿಸಿದ ಯಜ್ಞದಿಂದ ಜಗತ್ತೆಲ್ಲವೂ ಹೊರಬಂದಿತೆಂದು ಪುರುಷಸೂಕ್ತದಲ್ಲಿ ತಿಳಿಸಿದೆ. ಅದೇ ಜಗತ್ತಿನಲ್ಲಿರುವ ಸಾಧಕನು ತನ್ನನ್ನು ವಿರಾಟ್‌ಪುರುಷನೊಡನೆ ಲಯಮಾಡಿ ಕೊಂಡಾಗಲಿ, ವಿರಾಟ್‌ಪುರುಷನನ್ನೇ ತನ್ನ ಪ್ರತ್ಯಗಾತ್ಮನಲ್ಲಿ ಲಯಮಾಡಿ ಕೊಂಡಾಗಲಿ– ಚಿಂತಿಸಿದಾಗ ಜೀವಭಾವವನ್ನು ತೊರೆದು ಅಮೃತನಾಗುವನು. ಯಾವನೇ ಆಗಲಿ, ಯಜ್ಞದ ನೆರವಿಲ್ಲದೆ ಅಮೃತತ್ವವನ್ನು ಪಡೆಯಲಾರನು. ಅಂಥ ಯಜ್ಞವು ದ್ರವ್ಯಯಜ್ಞವಾಗಿಯೋ ಯೋಗಯಜ್ಞವಾಗಿಯೋ ಜ್ಞಾನಯಜ್ಞ

ವಾಗಿಯೋ ಇರಬಹುದು. ಈ ಚಮಕಾಧ್ಯಾಯದಲ್ಲಿ ಮುಖ್ಯವಾಗಿ 'ಅಹಂ' ಎಂಬ ಜೀವನನ್ನು ಹಿಗ್ಗಿಸಿ ವಿರಾಟ್‌ರೂಪನನ್ನಾಗಿಯೂ ಅನಂತರ ಉಪಾಧಿ ರಹಿತವಾದ ಪರಬ್ರಹ್ಮನನ್ನಾಗಿಯೂ ಮಾಡುವ ಧ್ಯೇಯದಿಂದ ಅನೇಕ ರೀತಿಯ ಉಪಾಸನೆಗಳನ್ನು ಪ್ರಸ್ತಾಪಿಸಲಾಗಿದೆ. ಶ್ರದ್ಧಾವಂತರು ಇವುಗಳ ಪ್ರಯೋಜನ ವನ್ನು ಹೊಂದಬಹುದಾಗಿದೆ.

---

## 17. ಗರ್ಭಾಶ್ಚ ಮೇ ವತ್ಸಾಃ

ಚಮಕಾಧ್ಯಾಯದ ಹತ್ತನೆಯ ಅನುವಾಕವನ್ನು ಈಗ ನಾವು ವಿಚಾರ ಮಾಡಬೇಕಾಗಿದೆ.

**ಗರ್ಭಾಶ್ಚ ಮೇ ವತ್ಸಾಶ್ಚ ಮೇ ತ್ರ್ಯವಿಶ್ಚ ಮೇ ತ್ರ್ಯವೀ ಚ ಮೇ ದಿತ್ಯವಾಟ್ ಚ ಮೇ ದಿತ್ಯೌಹೀ ಚ ಮೇ ಪಂಚಾವಿಶ್ಚ ಮೇ ಪಂಚಾವೀ ಚ ಮೇ ತ್ರಿವತ್ಸಶ್ಚ ಮೇ ತ್ರಿವತ್ಸಾ ಚ ಮೇ ತುರ್ಯವಾಟ್ ಚ ಮೇ ತುರ್ಯೌಹೀ ಚ ಮೇ ಪಷ್ಠವಾಚ್ಚ ಮೇ ಪಷ್ಠೌಹೀ ಚ ಮ ಉಕ್ಷಾ ಚ ಮೇ ವಶಾ ಚ ಮ ಋಷಭಶ್ಚ ಮೇ ವೇಹಚ್ಚ ಮೇಽನಡ್ವಾಂ ಚ ಮೇ ಧೇನುಶ್ಚ ಮ ಆಯುರ್ಯಜ್ಞೇನ ಕಲ್ಪತಾಂ ಪ್ರಾಣೋ ಯಜ್ಞೇನ ಕಲ್ಪತಾಮಪಾನೋ ಯಜ್ಞೇನ ಕಲ್ಪತಾಂ ವ್ಯಾನೋ ಯಜ್ಞೇನ ಕಲ್ಪತಾಂ ಚಕ್ಷುರ್ಯಜ್ಞೇನ ಕಲ್ಪತಾಗ್ಂ ಶ್ರೋತ್ರಂ ಯಜ್ಞೇನ ಕಲ್ಪತಾಂ ಮನೋ ಯಜ್ಞೇನ ಕಲ್ಪತಾಂ ವಾಗ್ಯಜ್ಞೇನ ಕಲ್ಪತಾಮಾತ್ಮಾ ಯಜ್ಞೇನ ಕಲ್ಪತಾಂ ಯಜ್ಞೋ ಯಜ್ಞೇನ ಕಲ್ಪತಾಮ್ ।**

"ಗರ್ಭಗಳೂ ವತ್ಸಗಳೂ ತ್ರ್ಯವಿಯೂ ತ್ರ್ಯವೀ–ಎಂಬಿದೂ, ದಿತ್ಯವಾಟ್, ದಿತ್ಯೌಹಿಗಳೂ ಪಂಚಾವಿ ಮತ್ತು ಪಂಚಾವೀ–ಎಂಬಿವೂ ತ್ರಿವತ್ಸ ತ್ರಿವತ್ಸಾ–ಗಳೂ ತುರ್ಯವಾಟ್ ತುರ್ಯೌಹಿಗಳು,

ಪಷ್ಠವಾಟ್ ಪಷ್ಠೌಹಿಗಳು, ಉಕ್ಷೆ, ವಶೆಗಳೂ ಋಷಭ, ವೇಹಗಳೂ, ಅನಡ್ವಾಹ, ಧೇನುಗಳೂ ಆಯುಷ್ಯವೂ ಯಜ್ಞಕ್ಕಾಗಿ ನನಗೆ ಒದಗಲಿ! ಮತ್ತು ಪ್ರಾಣ, ಅಪಾನ, ವ್ಯಾನ, ಚಕ್ಷುಸ್ಸು, ಶ್ರೋತ್ರ, ಮನಸ್ಸು, ವಾಕ್ಕು, ಆತ್ಮ ಯಜ್ಞ–ಇವೆಲ್ಲವೂ ಯಜ್ಞಕ್ಕಾಗಿ ನನಗೆ ಉಂಟಾಗಲಿ!"

ಹಿಂದಿನ ಒಂಭತ್ತನೆಯ ಅನುವಾಕದಲ್ಲಿ ಸಮಷ್ಟಿದೇಹದಲ್ಲಿ ವ್ಯಷ್ಟಿ ದೇಹಗಳ ಪ್ರವಿಲಯವನ್ನು ಪ್ರಾರ್ಥಿಸಿದ ಅನಂತರ ಈಗ ರೋಗ–ಆರೋಗ್ಯ ದೇವತೆಗಳ ಪ್ರವಿಲಯವನ್ನು ಪ್ರಾರ್ಥಿಸಲಾಗಿದೆ. ಈ ಶರೀರವನ್ನು ಕ್ಷೇತ್ರವೆಂದೂ ಇದರೊಳಗೆ ಇರುವ ಆತ್ಮನು ಕ್ಷೇತ್ರಜ್ಞನೆಂದೂ ಅಧ್ಯಾತ್ಮ ಶಾಸ್ತ್ರಗಳಲ್ಲಿ ಕರೆದಿರುತ್ತದೆ. ಈ ಕ್ಷೇತ್ರದಲ್ಲಿಯೇ ರೋಗದೇವತೆಗಳೂ ಆರೋಗ್ಯದೇವತೆಗಳೂ ವಾಸವಾಗಿರುವರು. ಯಾವನು ಯಜ್ಞಯಾಗಾದಿ ಗಳಿಂದ ಈ ಆರೋಗ್ಯದೇವತೆಗಳನ್ನು ಆರಾಧಿಸುತ್ತಾನೋ ಅಂಥವನ ಶರೀರದಲ್ಲಿರುವ ಆ ದೇವತೆಗಳು ರೋಗದೇವತೆಗಳನ್ನೆಲ್ಲ ಹಿಮ್ಮೆಟ್ಟಿಸಿ ಅವರ ಶಕ್ತಿಯನ್ನು ಕುಂದಿಸಿಬಿಡುವರು. ಹಾಗೂ ತಮ್ಮ ಅಮೃತರೂಪವಾದ ರಸಗಳಿಂದ ಸಾಧಕನ ಶರೀರವನ್ನು ಅಮೃತಮಯವಾಗಿಮಾಡುವರು. ಅದಕ್ಕಾಗಿಯೇ ಶಾಸ್ತ್ರಗಳಲ್ಲಿ ರೋಗಪರಿಹಾರಕ್ಕಾಗಿ ಜಪ, ಹೋಮ, ದೇವತಾರ್ಚನೆ, ದಾನಧರ್ಮಾದಿಗಳನ್ನು ಹೇಳಲಾಗಿದೆ. ಔಷಧಿಗಳಿಂದ ಪರಿಹರಿಸಲು ದುಸ್ಸಾಧ್ಯವಾದ ರೋಗಗಳನ್ನು ಕೂಡ ಈ ಶಾಂತಿಕ–ಪೌಷ್ಟಿಕ ಯಜ್ಞಕರ್ಮ ಗಳಿಂದ ಪರಿಹರಿಸಿಕೊಳ್ಳಬಹುದಾಗಿದೆ. ಈಗ ಈ ದೇವತೆಗಳ ಪರಿಚಯವನ್ನು ಮಾಡಿಕೊಳ್ಳೋಣ.

ಗರ್ಭಗಳೆಂದರೆ ಪ್ರಸುಪ್ತ ರೋಗಗಳು–ಎಂದರ್ಥ. ಗರ್ಭದಂತೆ ಒಳಗೆ ಅಡಗಿ ಕುಳಿತಿರುವವಾದ್ದರಿಂದ ಈ ಬಚ್ಚಿಡಲ್ಪಟ್ಟಿರುವ ರೋಗಗಳಿಗೆ ಗರ್ಭಗಳೆಂದು ಸುಶ್ರುತಸಂಹಿತೆಯಲ್ಲಿ ಹೇಳಿದೆ. ವತ್ಸಗಳೆಂದರೆ ಪ್ರಬುದ್ಧ ರೋಗಗಳು–ಎಂದರೆ ದೇಹದಲ್ಲಿ ಎದ್ದು ಕಾಣಿಸಿಕೊಂಡಿರುವವುಗಳು.

ಇವೆರಡೂ ಸ್ಥೂಲಶರೀರವನ್ನಾಶ್ರಯಿಸಿರುವವು. ಹಾಗೆಯೇ ತ್ರ್ಯವಿ ಎಂದರೆ ಸ್ತ್ರೀರೂಪವಾದ ಆರೋಗ್ಯಪ್ರಕೃತಿಯೆಂದೂ ತ್ರ್ಯವೀ–(ಇದು ಪುಲ್ಲಿಂಗ) ಎಂಬಿದು ಪುಂರೂಪವಾದ ರೋಗದೇವತೆಯೆಂದೂ ತಿಳಿಯಬೇಕು. ದೇವತೆಗಳು, ಮನುಷ್ಯರು, ಪಿತೃಗಳೆಂಬ ಮೂರು ವಿಧವಾದ ಜೀವರುಗಳು ನೆಲಸಿರುವ ಪೃಥಿವಿಯು ತ್ರ್ಯವಿಯೆನಿಸಿರುವದು. ಹಾಗೆಯೇ ಅಸುರರು, ರಾಕ್ಷಸರು, ಪಿಶಾಚರು–ನೆಲೆಸಿರುವ ಭೂ ಭಾಗವು ತ್ರ್ಯವೀ–ಎನಿಸಿರುತ್ತದೆ. ಈ ಸ್ತ್ರೀಪುಂವಿಭಾಗವನ್ನು ಮುಂದೆಯೂ ಅಳವಡಿಸಿಕೊಳ್ಳಬೇಕು. ಸ್ತ್ರೀ ಪ್ರಕೃತಿಯೇ ಆರೋಗ್ಯದೇವತೆಯು. ಏಕೆಂದರೆ ಅದು ಹೆಂಗಸಿನಂತೆ ಸಸ್ಯವೇ ಮುಂತಾದವುಗಳನ್ನು ಜೀವರ ಪ್ರಯೋಜನಕ್ಕಾಗಿ ಹಡೆಯುತ್ತಿರುವದು. ತ್ರ್ಯವೀ ಎಂಬಿದು ಪುರುಷನಾದ್ದರಿಂದ ಅದು ಸೃಷ್ಟಿಸಲಾರದು. ಹೀಗೆ ಈ ಎಲ್ಲಾ ದೇವತೆಗಳೂ ನನಗೆ ಯಜ್ಞಕ್ಕೆ ಸಹಾಯಕರಾಗಲಿ! ಎಂದು ಪ್ರಾರ್ಥಿಸಿದೆ. ಇಲ್ಲಿ ರೋಗದೇವತೆಗಳು ಸಹಾಯಕರಾಗುವದೆಂದರೇನು? ಎಂಬ ಶಂಕೆ ಏಳಬಹುದು. ಆದರೆ ಆ ದೇವತೆಗಳು ವಿರಾಡ್ರೂಪದಲ್ಲಿ ಲಯವಾಗಿ ಬಿಡುವರಾದ್ದರಿಂದ ನಿರ್ವಿಘ್ನವಾಗಿ ರೋಗರುಜಿನಗಳ ಕಾಟವಿಲ್ಲದೆ ಯಜ್ಞಾದಿಪುಣ್ಯಕರ್ಮಗಳು ನೆರವೇರುವದೇ ಸಹಾಯವೆಂದು ಭಾವಿಸಬೇಕು.

ಈಗ **ದಿತ್ಯವಾಟ್–ದಿತ್ಯೌಹಿ**ಗಳನ್ನು ತಿಳಿಯೋಣ. ಇವು ಜಲಾಭಿಮಾನಿದೇವತೆಗಳು. ನಿಜವಾಗಿ ಈ ಶಬ್ದವು ಆದಿತ್ಯವಾಟ್ ಎಂದಿರಬೇಕು. ಆಕಾರವು ಲೋಪವಾಗಿದೆ. ಹೇಗೆ 'ಏಕಸ್ಮೈ ದೇವಾಯ' ಎಂಬಿದು 'ಕಸ್ಮೈ ದೇವಾಯ' ಎಂದಾಗಿದೆಯೋ ಹಾಗೆ ಎಂದು ತಿಳಿಯಬೇಕು. ಅದಿತಿ ಎಂದರೆ ಪುನರ್ವಸುನಕ್ಷತ್ರವು. ಅಲ್ಲಿಂದಾರಂಭಿಸಿ ಮಳೆಗಳು ಹೆಚ್ಚಾಗಿ ಸುರಿಯುವವಾದ್ದರಿಂದ ಮತ್ತು ಆ ಮೂಲಕ ಸಸ್ಯಸಮೃದ್ಧಿಯುಂಟಾಗುವದರಿಂದ ಜಲದೇವತೆಯನ್ನು ಆದಿತ್ಯವಾಟ್ ಎಂದಿದೆ. ಇದೇ ದೇವತೆಯ ಘೋರರೂಪವು ದಿತ್ಯೌಹಿಯು. ಮಳೆಯು ಸಿಡಿಲು, ಮಿಂಚು, ಅತಿವೃಷ್ಟಿಗಳ ರೂಪದಲ್ಲಿ ಅನಾಹುತವನ್ನುಂಟುಮಾಡುವದೂ ಪ್ರಸಿದ್ಧವಾಗಿದೆಯಷ್ಟೆ! ಅದೇ ದಿತ್ಯೌಹಿಯು. ಶಾಂತರೂಪವಾದದ್ದು ದಿತ್ಯವಾಟ್ ಎನಿಸುವದು. ಹಾಗೆಯೇ

ಬೆಂಕಿಯೂ ಶಾಂತ ಮತ್ತು ಘೋರರೂಪವಾಗಿರುವದು. ಅದನ್ನೂ ಇದೇ ಶಬ್ದಗಳಿಂದ ಗ್ರಹಿಸಬೇಕು. **ಪಂಚಾವಿಃ–ಪಂಚಾವೀ** ಎಂಬಿವು ವಾಯು ದೇವತೆಗಳು. ಪ್ರಾಣಾಪಾನಾದಿ ಐದು ರೂಪದಿಂದ ಶರಿರವನ್ನಾಶ್ರಯಿಸಿರುವ ಆಧ್ಯಾತ್ಮಿಕವಾಯುವು **ಪಂಚಾವಿಯು**. ದಡಗಳನ್ನು ಬೀಳಿಸುವ, ಮರಗಳನ್ನು ಕಿತ್ತೊಗೆಯುವ, ಸುಂಟರಗಾಳಿಯಾಗಿ ಚಕ್ರದಂತೆ ತಿರುಗುವ, ರೋಗಾದಿ ಗಳುಂಟಾಗುವಂತೆ ಕೆಟ್ಟದಾಗಿ ಬೀಸುವ, ಕಲ್ಲಿನ ಚೂರು, ಬೆಂಕಿಕಿಡಿಗಳನ್ನು ಒಯ್ದು ತರುವ–ಐದು ರೂಪವಾದ ಗಾಳಿಯೇ ಪಂಚಾವೀ– ಎಂಬಿದು. ಹಾಗೆಯೇ **ತ್ರಿವತ್ಸ** ಎಂದರೆ ಮೂರು ಲೋಕಗಳ ವತ್ಸ–ಎಂದರೆ ಎದೆಯಂತೆ ನಡುವೆ ಇರುವ ಸೂರ್ಯನು. ಅವನದೇ ಶಕ್ತಿರೂಪನಾದ ಚಂದ್ರನು **ತ್ರಿವತ್ಸಾ**–ಎಂದು ಕರೆಯಲ್ಪಡುವನು. **ತುರ್ಯವಾಟ್**–ಎಂದರೆ ತುರೀಯವೆಂದು ಉಪನಿಷತ್ ಪ್ರಸಿದ್ಧವಾಗಿರುವ ಯಾವ ಪರಬ್ರಹ್ಮವುಂಟೋ ಅದನ್ನು ಧರಿಸಿರುವ ಹಾರ್ದಾಕಾಶವು ತುರ್ಯವಾಟ್ ಎನಿಸಿರುವದು. ಭೂತಾಕಾಶವೇ ತುರ್ಯೌಹಿಯು. ಇನ್ನು **ಪಷ್ಠವಾಟ್** ಎಂದರೆ ಅಶುಭ ಮನಸ್ಸು ಎಂದರ್ಥ ಮಾಡಿದೆ. ಹೇಗೆಂದರೆ: ಪಷ್ಠವೆಂದರೆ ವಿಷಯಮವಾದ ವಿಷಯಗಳು. ಅವುಗಳಿಂದ ವಶಮಾಡಿಕೊಳ್ಳಲ್ಪಡುವ ಅಶುಭಚಿತ್ತವೇ ಪಷ್ಠವಾಟ್ ಎನಿಸುವದು. ಆದರೆ ಆ ಮನಸ್ಸೇ ವಿಷಯಗಳನ್ನು ಗೆದ್ದು ಶುಭವಾದ ಚಿಂತನೆಯಲ್ಲಿ ನಿರತವಾಗಿದ್ದರೆ ಪಷ್ಠೌಹೀ ಎನಿಸಲಿದೆ. ಮನುಷ್ಯನ ಬಂಧಮೋಕ್ಷಗಳಿಗೆ ಮನಸ್ಸೇ ಕಾರಣವೆಂಬುದು ಪ್ರಸಿದ್ಧವಾಗಿದೆಯಷ್ಟೆ? ಹೀಗೆ ಶುಭಾಶುಭರೂಪವಾಗಿರುವ ಹಾಗೂ ಬಂಧಮೋಕ್ಷಗಳಿಗೆ ಕಾರಣವಾಗಿರುವ ಆಧ್ಯಾತ್ಮಿಕಾಧಿಭೌತಿಕವಸ್ತುಗಳೆಲ್ಲವೂ ವಿರಾಟ್‌ರೂಪದಲ್ಲಿ ಲಯವಾಗುವದರ ಮೂಲಕ ಯಜ್ಞವಾಗಲಿ–ಎಂದು ಪ್ರಾರ್ಥಿಸಿದೆ.

ಈಗ **ಉಕ್ಷಾ** ಮುಂತಾದವುಗಳ ಅರ್ಥವನ್ನು ವಿಚಾರಿಸೋಣ. ಎತ್ತಿನಂತೆ ಅಜ್ಞವಾದ ಬುದ್ಧಿಯಲ್ಲಿ ಕಂಡುಬರುವ ಚಿದಾಭಾಸವೇ ಉಕ್ಷಾ ಎಂಬಿದು. ಆದ್ದರಿಂದಲೇ ಆ ಬುದ್ಧಿಯೆಂಬ ತತ್ತ್ವವೂ **ವಶಾ** ಎಂದರೆ ಬಂಜೆಯೆನಿಸಿರುತ್ತದೆ. ಏಕೆಂದರೆ ಈವರೆಗೂ ಅದು ಬ್ರಹ್ಮವಿದ್ಯೆಯನ್ನು ಹಡೆಯದಿರುವದೇ

ಬಂಜೆತನವೆಂದಭಿಪ್ರಾಯ. ಋಷಭವೆಂದರೆ ಅಹಂಕಾರವು. ಅದು ಎಳೆಯದಾದ ಹೋರಿಗರುವಿನಂತಿರುವದರಿಂದ ಹಾಗೆ ಕರೆಯಲಾಗಿದೆ. ವೇಹದ್ ಎಂದರೆ ಎಳೆಯ ಹೆಣ್ಣುಕರು ಎಂದರ್ಥ. ಅದರಂತಿರುವ ಬಾಲ್ಯ ಬುದ್ಧಿ(ಎಳೆಯ ಬುದ್ಧಿ) ಎಂದರ್ಥ. ಅನಡ್ವಾನ್ ಎಂದರೆ ಇಡಿಯ ಬ್ರಹ್ಮಾಂಡದ ಭಾರವನ್ನೇ ಹೊರಲು ಸಮರ್ಥವಾದ ಪ್ರತ್ಯಗಾತ್ಮನು ಎಂದರ್ಥ. ಧೇನು ಎಂದರೆ ಬ್ರಹ್ಮವಿದ್ಯೆಯು. ಹೀಗೆ ಸಮಸ್ತಸೃಷ್ಟಿಯೂ ಯಜ್ಞವೆಂಬ ಕಾರ್ಯಕ್ಕಾಗಿ ನನಗೆ ಒದಗಲಿ–ಎಂದು ಕೇಳಿಕೊಳ್ಳಲಾಗಿದೆ. ಸಾಧಕನ ಪ್ರತ್ಯಗಾತ್ಮಸ್ವರೂಪದಲ್ಲಿ ಎಲ್ಲವೂ ಲಯವಾದಾಗ ಅವನ ಆತ್ಮನೆಂದರೆ ಪರಮಾತ್ಮನೇ ಆಗಿರುವದರಿಂದ ಆ ಪರಮಾತ್ಮನೊಡನೆ ಎಲ್ಲಾ ವಸ್ತುಗಳಿಗೂ ಏಕತ್ವವು ಹೊಂದುತ್ತದೆ–ಎಂದಭಿಪ್ರಾಯ.

ಕಡೆಯದಾಗಿ ಸಾಧಕನ ಉಳಿದಿರಬಹುದಾದ ಆಯುಸ್ಸು, ಮತ್ತು ಪ್ರಾಣ, ಅಪಾನ, ವ್ಯಾನ, ಚಕ್ಷುಸ್ಸು, ಶ್ರೋತ್ರ, ಮನಸ್ಸು, ವಾಕ್, ಆತ್ಮಾ ಯಜ್ಞವೆಂಬ ಕ್ರಿಯೆ–ಈ ತತ್ತ್ವಾಭಿಮಾನಿಗಳಾದ ದೇವತೆಗಳೆಲ್ಲರೂ ವಿರಾಡ್ರೂಪದಲ್ಲಿ ಒಂದಾಗಿ ಯಜ್ಞವಾಗುವದರ ಮೂಲಕ ನನಗೆ ದೊರಕಲಿ! ಎಂದು ಪ್ರಾರ್ಥಿಸಲಾಗಿದೆ. ಹೀಗೆ ಸಕಲಸೃಷ್ಟಿಯನ್ನೂ ಎಂದರೆ ಸೃಷ್ಟ್ಯಂತರ್ಗತವಸ್ತುಗಳನ್ನೂ ಪ್ರತ್ಯಗಾತ್ಮನಲ್ಲಿ ಲಯಚಿಂತನೆಮಾಡುವ ಸಾಧಕನಿಗೆ ಆತ್ಮಯಜ್ಞದ ಫಲವು ದೊರಕಲಿದೆ. ಹೇಗೆಂದರೆ ಆತ್ಮನೊಬ್ಬನೇ ಪರಮಾರ್ಥನು, ಅವನೇ ನಾನು–ಎಂಬ ಅದ್ವಿತೀಯವಾದ ಜ್ಞಾನವೇ ನಾವು ಮುಟ್ಟಬೇಕಾದ ಪರಮಗುರಿಯಾಗಿರುವದು. ಆ ಪರಬ್ರಹ್ಮವನ್ನು ಮುಟ್ಟಲು ಯಜ್ಞವೊಂದು ಸಾಧನವು. ಯಜ್ಞವು ದ್ರವ್ಯಯಜ್ಞ, ತಪೋಯಜ್ಞ, ಯೋಗಯಜ್ಞ, ಜ್ಞಾನಯಜ್ಞಾದಿಗಳ ರೂಪದಿಂದ ನಾನಾವಿಧವಾಗಿದ್ದರೂ ಜ್ಞಾನಯಜ್ಞದಲ್ಲಿ ಉಳಿದವುಗಳೆಲ್ಲವೂ ಅಡಕವಾಗಿರುವವು. ಹೀಗೆ ತ್ವಂ ಪದಾರ್ಥವಾಚ್ಯನಾದ ಜೀವನು ಯಜ್ಞದ ಮೂಲಕ ತತ್ಪದಾರ್ಥವಾಚ್ಯನಾದ ಪ್ರತ್ಯಗಾತ್ಮನೊಡನೆ ಪಡೆಯುವ ಐಕ್ಯವೇ ಮೋಕ್ಷವು. ಅದನ್ನೇ ಇಲ್ಲಿ 'ಯಜ್ಞೇನ ಕಲ್ಪತಾಮ್' ಎಂದು ಪ್ರಾರ್ಥಿಸಲಾಗಿದೆ.

## 18. ಏಕಾ ಚ ಮೇ ತಿಸ್ರಃ

ಚಮಕಾಧ್ಯಾಯದ ಕೊನೆಯ ಅನುವಾಕವನ್ನು ಈಗ ವಿಚಾರ ಮಾಡಬೇಕಾಗಿದೆ.

**ಏಕಾ ಚ ಮೇ ತಿಸ್ರಶ್ಚ ಮೇ ಪಂಚ ಚ ಮೇ ಸಪ್ತ ಚ ಮೇ ನವ ಚ ಮ ಏಕಾದಶ ಚ ಮೇ ತ್ರಯೋದಶ ಚ ಮೇ ಪಂಚದಶ ಚ ಮೇ ಸಪ್ತದಶ ಚ ಮೇ ನವದಶ ಚ ಮ ಏಕವಿಗ್ಂಶತಿಶ್ಚ ಮೇ ತ್ರಯೋವಿಗ್ಂಶತಿಶ್ಚ ಮೇ ಪಂಚವಿಗ್ಂಶತಿಶ್ಚ ಮೇ ಸಪ್ತವಿಗ್ಂಶತಿಶ್ಚ ಮೇ ನವವಿಗ್ಂಶತಿಶ್ಚ ಮ ಏಕತ್ರಿಗ್ಂಶಚ್ಚ ಮೇ ತ್ರಯಸ್ತ್ರಿಗ್ಂಶಚ್ಚ॥**

"ಒಂದು, ಮೂರು, ಐದು, ಏಳು, ಒಂಬತ್ತು ಹನ್ನೊಂದು, ಹದಿಮೂರು, ಹದಿನೈದು, ಹದಿನೇಳು, ಹತ್ತೊಂಭತ್ತು ಇಪ್ಪತ್ತೊಂದು, ಇಪ್ಪತ್ತುಮೂರು, ಇಪ್ಪತ್ತೈದು, ಇಪ್ಪತ್ತೇಳು, ಇಪ್ಪತ್ತೊಂಭತ್ತು ಮೂವತ್ತೊಂದು, ಮೂವತ್ತುಮೂರು–ಇವುಗಳು ನನಗೆ ಯಜ್ಞಕ್ಕಾಗಿ ಉಂಟಾಗಲಿ!"

ಇಲ್ಲಿರುವ ಸಂಖ್ಯಾವಾಚಕಶಬ್ದಗಳಿಂದ ತಿಳಿಯಬೇಕಾದ ತತ್ತ್ವಗಳನ್ನು ಶ್ರೀ ವಿಷ್ಣುಸೂರಿಗಳು ಈ ರೀತಿಯಾಗಿ ವ್ಯಾಖ್ಯಾನಮಾಡಿರುತ್ತಾರೆ. ಒಂದು ಎಂಬುದೇ ಪ್ರಕೃತಿಯು. ಜಗತ್ತಿಗೆಲ್ಲ ಮೂಲಕಾರಣವಾಗಿರುವ ಈ ಪ್ರಕೃತಿಯು ಪ್ರಲಯದಲ್ಲಿ ತಾನೊಂದೇ ಇದ್ದುಕೊಂಡಿರುವದು. ಅದನ್ನೆ ಇಲ್ಲಿ 'ಏಕಾ' ಎಂಬ ಸ್ತ್ರೀಲಿಂಗಶಬ್ದದಿಂದ ಸೂಚಿಸಲಾಗಿದೆ. ಮೂರು ಎಂಬಿದು ಪ್ರಕೃತಿಯ ಮೂರು ಗುಣಗಳನ್ನು ಪರಾಮರ್ಶಿಸುತ್ತದೆ. ಸತ್ತ್ವ, ರಜಸ್ಸು, ತಮಸ್ಸು–ಎಂಬೀ ಮೂರುಗುಣಗಳು ಪ್ರಕೃತಿಯ ಅವಯವಗಳಾಗಿರುವವು. ಇವುಗಳ ವಿಕಾರವೇ ಐದು ಎಂದರೆ ಪಂಚಮಹಾಭೂತಗಳು. ಇವುಗಳನ್ನು ಅಪಂಚೀಕೃತವಾದ ತನ್ಮಾತ್ರೆಗಳ ರೂಪದಿಂದಲೇ ಗ್ರಹಿಸಬೇಕು. ಮುಂದೆ ಇವುಗಳಿಂದ ಹುಟ್ಟುವ

ಐದು ಜ್ಞಾನೇಂದ್ರಿಯಗಳು ಮತ್ತುಮನಸ್ಸು, ಬುದ್ಧಿ–ಎಂಬಿವೆರಡೂ ಸೇರಿದರೆ ಏಳು ಆಗುವವು. ಇವುಗಳೊಡನೆ ಸ್ಥೂಲಶರೀರವು ಸೃಷ್ಟಿಯಾಗಿದೆ. ಇದಕ್ಕೆ ಒಂಭತ್ತುಬಾಗಿಲುಗಳಿರುವದರಿಂದ ಮನುಷ್ಯ ಶರೀರವನ್ನು ಒಂಭತ್ತುಎಂದು ಹೆಸರಿಸಲಾಗಿದೆ. ಇದೇ ಶರೀರದಲ್ಲಿ ಹತ್ತು ಪ್ರಾಣಗಳಿವೆ. ಸುಷುಮ್ನೆಯೆಂಬ ನಾಡಿಯನ್ನೂ ಸೇರಿಸಿಕೊಂಡರೆ ಹನ್ನೊಂದಾಗುವದು. ಇದನ್ನೇ ಏಕಾದಶ ಚ ಮೇ–ಎಂದಿದೆ. ಅನಂತರ ಹದಿಮೂರು ಎಂಬಿದು ಹದಿಮೂರು ದೇವತೆಗಳನ್ನು ತಿಳಿಸುತ್ತದೆ. ಈ ದೇವತೆಗಳು ಯಾರು? ಎಂಬಿದನ್ನು ವ್ಯಾಖ್ಯಾನಮಾಡುವಾಗ ಕರಣಾಭಿಮಾನಿಗಳಾದ ದೇವತೆಗಳಾದ ಪುಷ್ಯಾ, ಯುಗಂಧರಾ, ಶಂಖಿನೀ ಮುಂತಾಗಿರುವ ದೇವತೆಗಳು ಎಂದು ತಿಳಿಸಿರುವದರಿಂದ ಆ ದೇವತೆಗಳನ್ನೇ ಇಲ್ಲಿಯೂ ಗ್ರಹಿಸಬೇಕು. ಇನ್ನು ಹದಿನೈದು ಎಂದರೆ ಶ್ರೋತ್ರವೇ ಮುಂತಾದ ನಾಡಿಗಳೆಂದು ವ್ಯಾಖ್ಯಾನ ಮಾಡಿದೆ. ಸುಷುಮ್ನೆಯೂ ಸೇರಿ ಹದಿನೈದು ನಾಡಿಗಳೆಂದು ಲೆಕ್ಕಮಾಡಿದೆ. ಲಿಂಗಶರೀರ (ಸೂಕ್ಷ್ಮಶರೀರ)ದ ಅವಯವಗಳೇ ಹದಿನೇಳು ಎಂಬಿವು. ಹತ್ತೊಂಬತ್ತು ಎಂಬಿವು ಮಹೌಷಧಿಗಳು. ನಾಗಾರ್ಜುನ ಮಂತ್ರವೇ ಮುಂತಾದ ಗ್ರಂಥಗಳಲ್ಲಿ ತಿಳಿಸಿರುವ ಸಂಜೀವಿನೀ, ವ್ರಣವಿರೋಪಿಣೀ, ವ್ರಣಘ್ನೀ, ಸಹದೇವೀ, ಬ್ರಾಹ್ಮೀ, ಮುಂಡೀ–ಮುಂತಾದವುಗಳೆಂದು ವ್ಯಾಖ್ಯಾನದಲ್ಲಿ ವಿವರಿಸಿದೆ. ಇನ್ನು ವೈದ್ಯಶಾಸ್ತ್ರಪ್ರಸಿದ್ಧವಾಗಿರುವ ಮರ್ಮಸ್ಥಾನಗಳೇ ಇಪ್ಪತ್ತೊಂದು–ಎಂಬಿದರಿಂದ ಸೂಚಿತವಾಗಿರುವವು. ಜ್ವರ, ಅತಿಸಾರ–ಮುಂತಾದ ಮಹಾರೋಗಗಳು ಇಪ್ಪತ್ತುಮೂರು–ಎಂದು ತಿಳಿಸಲ್ಪಟ್ಟಿವೆ. ಊರ್ವಶಿ, ತಿಲೋತ್ತಮಾ, ಸುಕೇಶೀ, ಮಂಜುಘೋಷಾ–ಮುಂತಾದ ಅಪ್ಸರಸ್ತ್ರೀಯರುಗಳೇ ಇಪ್ಪತ್ತೈದು ಮಂದಿ–ಎಂದು ತಿಳಿಯಬೇಕು. ಈ ಸ್ತ್ರೀಯರು ಸ್ವರ್ಗಲೋಕದಲ್ಲಿರುವಂತೆಯೇ ಶರೀರದೊಳಗೂ ಇರುವರು. ಉದಾಹರಣೆಗೆ ಮನಸ್ಸೇ ಊರ್ವಶಿಯು, ಬುದ್ಧಿಯೇ ತಿಲೋತ್ತಮೆಯು, ನಾಲಗೆಯೇ ಸುಕೇಶಿಯು, ಕಿವಿಯೇ ಮಂಜುಘೋಷೆಯು; ಹೀಗೆ ತಿಳಿಯಬೇಕು.

ಮುಂದುವರೆದು ಚಿತ್ರಸೇನಾದಿಗಂಧರ್ವರೇ ಸಪ್ತವಿಂಶತಿ (ಇಪ್ಪತ್ತು ಏಳು) ಎಂಬ ಸಂಖ್ಯಾವಾಚ್ಯರಾಗಿರುತ್ತಾರೆ. ಜ್ಯೋತಿಷ್ಮತೀ ಮುಂತಾದ ವಿದ್ಯುದ್ದೇವತೆಗಳೇ ಇಪ್ಪತ್ತೊಂಭತ್ತು ಜನರು–ಎಂದು ತಿಳಿಯಬೇಕು. ಮೂವತ್ತೊಂದು ಎಂಬಿದು ಭೂರಾದಿಲೋಕಗಳನ್ನು ಸೂಚಿಸುವದು. ಹದಿನಾಲ್ಕು ಪ್ರಸಿದ್ಧ ಲೋಕಗಳ ಜೊತೆಗೆ ವೈಕುಂಠಲೋಕ, ಗೋಲೋಕ, ಮಣಿದ್ವೀಪ–ಮುಂತಾದವುಗಳನ್ನೂ ಸೇರಿಸಿ ಮೂವತ್ತೊಂದು ಎಂದು ತಿಳಿಯಬೇಕು; ಮೂವತ್ತುಮೂರು ಎಂಬಿದು ದೇವತೆಗಳನ್ನು ಸೂಚಿಸುವ ಸಂಖ್ಯೆಯಾಗಿರುವದು. ಎಂಟು ಜನರು ವಸುಗಳು, ಹನ್ನೊಂದು ಜನ ರುದ್ರರು. ಹನ್ನೆರಡು ಜನ ಆದಿತ್ಯರು, ಇಬ್ಬರು ಅಶ್ವಿನೀದೇವತೆಗಳು–ಹೀಗೆ ಮೂವತ್ತು ಮೂರು ದೇವತೆಗಳಾಗುವರು. ಈ ಎಲ್ಲಾ ವರ್ಗವೂ ಎಂದರೆ ಒಂದರಿಂದ ಮೂವತ್ತು ಮೂರರವರೆಗಿನ ಗುಂಪುಗಳೆಲ್ಲವೂ ನನಗೆ ಯಜ್ಞಕ್ಕಾಗಿ ಉಂಟಾಗಲಿ! ಎಂದು ಪ್ರಾರ್ಥಿಸಿದೆ. ಮುಖ್ಯವಾಗಿ ಇಲ್ಲಿ ನಾಡಿಗಳು, ಲೋಕಗಳು, ರೋಗಗಳು, ಅಪ್ಸರೆಯರು–ಮುಂತಾಗಿ ಯಾರನ್ನೇ ಹೇಳಿರಲಿ, ಎಲ್ಲರೂ ದೇವತೆಗಳೇ ಎಂದು ಗ್ರಹಿಸಿ ಸಮಸ್ತದೇವತೆಗಳ ಸಹಾಯವೂ ನಾನು ಮಾಡುವ ಯಜ್ಞಕ್ಕೆ ಒದಗಲಿ–ಎಂದು ಪ್ರಾರ್ಥಿಸಿಲಾಗಿದೆ. ಈ ಬೆಸಸಂಖ್ಯೆಗಳು ದೇವತೆಗಳ ಹಾಗೂ ಅವರಿಗೆ ಸಂಬಂಧಪಟ್ಟ ವಸ್ತುಗಳ ಮತ್ತು ಸ್ಥಾನಧರ್ಮಾದಿಗಳ ವಿವರವನ್ನು ಹೇಳುತ್ತವೆ. ಆಯಾ ದೇವತೆಗಳ ಸಾಯುಜ್ಯಪ್ರಾಪ್ತಿಯೆಂಬ ಕಾಮಗಳೂ ಇವುಗಳಿಂದ ಸೂಚಿತವಾಗಿವೆ. ಎಲ್ಲಾ ಕಾಮಗಳಿಗೂ ಆತ್ಮನೇ ಆಶ್ರಯನು. ಆತ್ಮನಲ್ಲಿಯೇ ಸಮಸ್ತ ಕಾಮಗಳೂ ನೆಲೆಸಿರುವವು; ಆದ್ದರಿಂದ ಆತ್ಮಯಜ್ಞದ ಮೂಲಕ ಎಲ್ಲಾ ಕಾಮಗಳನ್ನೂ ತನ್ನ ಆತ್ಮನಲ್ಲಿಯೇ ಲಯಮಾಡಿಕೊಂಡವನು ಸರ್ವಕಾಮಗಳನ್ನೂ ಪಡೆದು ಕೊಂಡವನಾಗಿ ಕಡೆಗೆ ಅಕಾಮನಾಗಿಬಿಡುವನು. ಅದೇ ಬ್ರಹ್ಮಪ್ರಾಪ್ತಿಯು; ಅದೇ ಅಮೃತತ್ವವು; ಅದೇ ಯಜ್ಞದ ಪರಮಾವಧಿಯು ಎಂದು ಅಭಿಪ್ರಾಯ.

## 19. ಮೇ ಚತಸ್ರಶ್ಚಮೇ

ಚಮಕಾಧ್ಯಾಯದ ಕೊನೆಯ ಅನುವಾಕದ ಕೊನೆಯ ಭಾಗವನ್ನು ಈಗ ವಿಚಾರಮಾಡಬೇಕಾಗಿದೆ.

**ಮೇ ಚತಸ್ರಶ್ಚ ಮೇಽಷ್ಟೌ ಚ ಮೇ ದ್ವಾದಶ ಚ ಮೇ ಷೋಡಶ ಚ ಮೇ ವಿಗ್‌ಂಶತಿಶ್ಚ ಮೇ ಚತುರ್ವಿಗ್‌ಂಶತಿಶ್ಚ ಮೇಽಷ್ಟಾವಿಗ್‌ಂಶತಿಶ್ಚ ಮೇ ದ್ವಾತ್ರಿಗ್‌ಂಶಚ್ಚ ಮೇ ಷಟ್‌ತ್ರಿಗ್‌ಂಶಚ್ಚ ಮೇ ಚತ್ವಾರಿಗ್‌ಂಶಚ್ಚ ಮೇ ಚತುಶ್ಚತ್ವಾರಿಗ್‌ಂಶಚ್ಚ ಮೇಽಷ್ಟಾಚತ್ವಾರಿಗ್‌ಂಶಚ್ಚ ಮೇ ವಾಜಶ್ಚಪ್ರಸವಶ್ಚಾಪಿಜಶ್ಚ ಕ್ರತುಶ್ಚ ಸುವಶ್ಚ ಮೂರ್ಧಾ ಚ ವ್ಯಶ್ನಿಯಶ್ಚಾನ್ತ್ಯಾಯನಶ್ಚಾನ್ತ್ಯಶ್ಚ ಭೌವನಶ್ಚ ಭುವನಶ್ಚಾಧಿಪತಿಶ್ಚ॥**

"ನಾಲ್ಕು, ಎಂಟು, ಹನ್ನೆರಡು, ಹದಿನಾರು, ಇಪ್ಪತ್ತು, ಇಪ್ಪತ್ತನಾಲ್ಕು, ಇಪ್ಪತ್ತೆಂಟು, ಮೂವತ್ತೆರಡು, ಮೂವತ್ತಾರು, ನಲವತ್ತು ನಲವತ್ತುನಾಲ್ಕು, ನಲವತ್ತೆಂಟು–ಮತ್ತು ವಾಜ, ಪ್ರಸವ, ಅಪಿಜ, ಕ್ರತು, ಸುವ, ಮೂರ್ಧಾ, ವ್ಯಶ್ನಿಯ, ಅಂತ್ಯಾಯನ, ಅಂತ್ಯ, ಭೌವನ, ಭುವನ ಮತ್ತು ಅಧಿಪತಿಗಳು ಯಜ್ಞಕ್ಕಾಗಿ ಉಂಟಾಗಲಿ!"

ಶ್ರೀ ವಿಷ್ಣುಸೂರಿಗಳ ಭಾಷ್ಯವನ್ನು ಅನುಸರಿಸಿ ಇಲ್ಲಿರುವ ಸಂಖ್ಯಾ ವಾಚಕಗಳಿಂದ ಸೂಚಿತವಾಗಿರುವ ಅರ್ಥವನ್ನು ವಿವರಣೆಮಾಡಲಾಗುವದು. ನಾಲ್ಕು ಎಂದರೆ ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ನಾಲ್ಕು ಪುರುಷಾರ್ಥಗಳು. ಪುರುಷನಾದವನು ಬಯಸತಕ್ಕವುಗಳೆಲ್ಲವೂ ಈ ನಾಲ್ಕರಲ್ಲೇ ಅಡಕವಾಗಿವೆ. ಈಗಿನ ಜನರು ಈ ನಾಲ್ಕರಲ್ಲಿಯೂ ಮೊದಲನೆಯ ಹಾಗೂ ಕೊನೆಯದನ್ನು ಕೈಬಿಟ್ಟು ಉಳಿದ ಎರಡನ್ನು ಮಾತ್ರ ಆರಿಸಿ ಕೊಂಡಿದ್ದಾರೆ. ಆದರೆ ಶಾಸ್ತ್ರದ ಅಭಿಪ್ರಾಯವು ಹೀಗಿದೆ. ಧರ್ಮಕ್ಕೆ ವಿರುದ್ಧವಲ್ಲದ ಅರ್ಥಕಾಮಗಳನ್ನು ಮಾತ್ರ ಮೋಕ್ಷಕ್ಕೆ ಸಾಧನವಾಗಿರುವಂತೆ

ಮಾನವನು ಬಯಸಬೇಕು. ಆದ್ದರಿಂದಲೇ ಧರ್ಮವನ್ನು ಮೊದಲಿಟ್ಟು ಅರ್ಥಕಾಮಗಳನ್ನು ನಡುವೆ ಸೇರಿಸಿ ಕೊನೆಯಲ್ಲಿ ಮೋಕ್ಷವನ್ನು ಅಳವಡಿಸ ಲಾಗಿದೆ. ಇದನ್ನು ಬದಲಾಯಿಸುವದು ಹಿತಕರವಲ್ಲ, ಇರಲಿ. ಎಂಟು ಎಂದರೆ ನಾಲ್ಕು ವೇದಗಳು ಮತ್ತು ನಾಲ್ಕು ಉಪವೇದಗಳು–ಎಂದರ್ಥ. ವೇದಗಳನ್ನು ಬಯಸುವದೆಂಬುದು ಪುಣ್ಯವಿಶೇಷದಿಂದಲೇ ದೊರೆಯಬೇಕಾಗಿದೆ. ಬ್ರಾಹ್ಮಣನಿಗಂತೂ ಕರ್ತವ್ಯವೆಂದೇ ವೇದಾಧ್ಯಯನವನ್ನು ವಿಧಿಸಲಾಗಿದೆ.

ಆರು ಅಂಗಗಳು ಆರು ಶಾಸ್ತ್ರ(ದರ್ಶನ)ಗಳನ್ನು ಸೇರಿಸಿದರೆ ದ್ವಾದಶ ಎಂಬ ಸಂಖ್ಯೆಯ ಅರ್ಥವಾಗುವದು. ಇವುಗಳು ಕೂಡ ಬ್ರಹ್ಮವಿಜ್ಞಾನಕ್ಕೆ ಸಾಧನಗಳಾಗಿವೆ ಎಂದು ಹೇಳಬೇಕಾಗಿಲ್ಲವಷ್ಟೆ! ಶಿಕ್ಷಾ, ವ್ಯಾಕರಣ, ಛಂದಸ್ಸು, ನಿರುಕ್ತ, ಜ್ಯೌತಿಷ, ಕಲ್ಪ–ಎಂಬ ಆರು ಅಂಗಗಳು; ಸಾಂಖ್ಯ ಮತ್ತು ಯೋಗ, ನ್ಯಾಯ, ವೈಶೇಷಿಕ, ಪೂರ್ವ ಮೀಮಾಂಸಾ, ಉತ್ತರಮೀಮಾಂಸಾ–ಎಂಬ ಆರು ದರ್ಶನಗಳು ಸೇರಿ ಹನ್ನೆರಡಾಗುವವು. ಇವುಗಳನ್ನು ರಚಿಸಿದವರ ಹಾಗೂ ಗ್ರಂಥಗಳ ಹೆಸರಿನ ಪರಿಚಯವನ್ನಾದರೂ ನಾವು ಮಾಡಿ ಕೊಂಡಿರಬೇಕು. ಇನ್ನು ಹದಿನಾರು ಎಂದರೆ ಮಹಾಸಿದ್ಧಿಗಳು. ಅವು ಯಾವವೆಂದರೆ: ದೂರಶ್ರವಣಾದಿ ಐದು ಜ್ಞಾನೇಂದ್ರಿಯಸಿದ್ಧಿಗಳು. ವಾಕ್ ಸಿದ್ಧಿಯೇ ಮೊದಲಾದ ಐದು ಕರ್ಮೇಂದ್ರಿಯಸಿದ್ಧಿಗಳು, ಸ್ಥಾಪತ್ಯ, ವರ್ಜನ್ಯ, ಜ್ಯೋತಿ, ಆಯು, ಪರೋಕ್ಷಬ್ರಹ್ಮವಿದ್ಯೆಗಳೆಂಬಿವು, ಐದು–ಮತ್ತು ಅಪರೋಕ್ಷ ಬ್ರಹ್ಮವಿದ್ಯೆಯೂ ಸೇರಿ ಹದಿನಾರಾಗುವವು. ಇವುಗಳೂ ನನಗೆ ಯಜ್ಞಕ್ಕಾಗಿ ಒದಗಲಿ–ಎಂದು ಪ್ರಾರ್ಥಿಸಿದೆ. ಇಪ್ಪತ್ತು ಎಂಬಿದು ಸ್ಥೂಲಸೂಕ್ಷ್ಮಭೇದಗಳಿಂದ ಪ್ರಸಿದ್ಧವಾಗಿರುವ ಐದು ಮಹಾಭೂತಗಳು–ಐದು ವಿಷಯಗಳು–ಅಪಂಚೀಕೃತ–ಭೇದದಿಂದಲೂ ಪಂಚೀಕೃತ ಮಹಾಭೂತಗಳು ಹತ್ತಾಗು ವವು. ಹೀಗೆ ಒಟ್ಟು ಇಪ್ಪತ್ತಾಗುವವು. ಹಾಗೆಯೇ ಸ್ಥೂಲಭೋಗ, ಪ್ರವಿವಿಕ್ತ ಭೋಗಗಳೆನಿಸುವ ಎಚ್ಚರ–ಕನಸುಗಳಲ್ಲಿ ಕಂಡುಬರುವ ವಿಷಯಗಳು ಹತ್ತೂ ಸೇರಿದರೆ ಒಟ್ಟು ಸಂಖ್ಯಾಪೂರ್ಣವಾಗಲಿದೆ. ಇಪ್ಪತ್ತನಾಲ್ಕು ಎಂಬಿವು

ಸಾಂಖ್ಯಶಾಸ್ತ್ರಪ್ರಸಿದ್ಧವಾದ 24 ತತ್ತ್ವಗಳು. ಅವು ಯಾವವೆಂದರೆ ಮೂಲಪ್ರಕೃತಿ, ಮಹತ್ತು ಅಹಂಕಾರ ತನ್ಮಾತ್ರೆಗಳು ಐದು, ಜ್ಞಾನೇಂದ್ರಿಯ-ಕರ್ಮೇಂದ್ರಿಯಗಳು, ಮಹಾಭೂತಗಳು ಒಟ್ಟು ಹದಿನೈದು-ಮನಸ್ಸು ಸೇರಿದರೆ 24 ಆಗುವವು. ಇವುಗಳೆಲ್ಲವೂ ಮಾನವನಿಗೆ ಅನುಕೂಲಕರವಾಗಿ ಪರಿಣಮಿಸಿದಲ್ಲಿ ಮೋಕ್ಷಸಾಧನವಾಗುವವು. ಇಪ್ಪತ್ತೆಂಟು ಎಂಬಿದು ತಿರ್ಯಕ್‌ಪ್ರಾಣಿಗಳಲ್ಲಿ ಕಂಡುಬರುವ 28 ಭೇದಗಳು ಎಂದರ್ಥ. ಗೋವು, ಆಡು, ಕೋಣ-ಮುಂತಾಗಿ ಈ ಇಪ್ಪತ್ತೆಂಟನ್ನು ಭಾಗವತಾದಿ ಪುರಾಣ ಗ್ರಂಥಗಳಲ್ಲಿ ವರ್ಣಿಸಿರುತ್ತದೆ. ಹೆಚ್ಚಿನ ವಿವರಗಳನ್ನು ಪುರಾಣಗಳಿಂದಲೇ ತಿಳಿಯಬಹುದು. ಮೂವತ್ತು ಎರಡು-ಎಂಬಿದು ಸೃಷ್ಟಿಪ್ರಭೇದಗಳನ್ನು ತಿಳಿಸುತ್ತದೆ. ಹೇಗೆಂದರೆ: ಎಂಟು ದೇವಸರ್ಗಗಳು, ಆರು ಸ್ಥಾವರಸರ್ಗಗಳು, ಕೌಮಾರಮಾನುಷ ಸರ್ಗಗಳೆರಡು, ಇಂದ್ರಿಯಸರ್ಗಗಳು ಜ್ಞಾನಕ್ರಿಯಾಭೇದ ಗಳಿಂದ ಹತ್ತು, ಮೂರು ಗುಣಸರ್ಗಗಳು, ಅಹಂಕಾರಸರ್ಗಗಳು ಮೂರು-ಹೀಗೆ ಮೂವತ್ತೆರಡು ಆಗುವವು.

ಅಥವಾ ಇಪ್ಪತ್ತುನಾಲ್ಕರಿಂದ ಮುಂದಿನ ಸಂಖ್ಯೆಗಳನ್ನು ಹೀಗೂ ವ್ಯಾಖ್ಯಾನಮಾಡಬಹುದಾಗಿದೆ. ಗಾಯತ್ರಿಯಿಂದಾರಂಭಿಸಿ ಜಗತೀ-ವರೆಗಿನ ಏಳು ಛಂದಸ್ಸುಗಳನ್ನು ತೆಗೆದುಕೊಂಡರೆ ಅವುಗಳಲ್ಲಿರುವ ಅಕ್ಷರಸಂಖ್ಯೆಯು ಕ್ರಮವಾಗಿ ಇಪ್ಪತ್ತನಾಲ್ಕರಿಂದ ನಲವತ್ತೆಂಟರ ಪೂರ ಆಗುವದು. ಹೇಗೆಂದರೆ ಗಾಯತ್ರಿಗೆ ಆರು ಅಕ್ಷರಗಳು; ನಾಲ್ಕು ಪಾದಗಳಿಂದ 24 ಅಕ್ಷರಗಳು ಆಗಲಿವೆ. ಇದೇ ರೀತಿಯಾಗಿ ಏಳಕ್ಷರದ ಛಂದಸ್ಸು 4 ಪಾದಗಳಿಂದ 28 ಅಕ್ಷರಗಳುಳ್ಳದ್ದಾಗುವದು. ಅನುಷ್ಟುಪ್‌ಗೆ ಎಂಟು ಅಕ್ಷರಗಳು; ನಾಲ್ಕು ಪಾದಗಳಿಂದ 32 ಆಗುವದು. ಬೃಹತೀ ಎಂಬಿದೇ 9x4 =36 ಆಗುವದು. ಪಂಕ್ತಿ ಎಂಬಿದು 10x4=40 ಆಗುವದು, ತ್ರಿಷ್ಟುಪ್ ಎಂಬಿದು 11x4=44, ಜಗತೀ ಎಂಬಿದು 12x4 =48. ಹೀಗೂ ಅರ್ಥಮಾಡಬಹುದು. ಇಲ್ಲಿಗೆ ದ್ವಾತ್ರಿಂಶತ್, ಷಟ್‌ತ್ರಿಂಶತ್, ಚತ್ವಾರಿಂಶತ್, ಚತುಶ್ಚರಿಂಶತ್,

ಅಷ್ಟಾಚತ್ವಾರಿಂಶತ್–ಎಂಬಿವುಗಳನ್ನು ವ್ಯಾಖ್ಯಾನಮಾಡಿದಂತಾಯಿತು. ಕೊನೆಯದಾಗಿ ವಾಜವೇ ಮುಂತಾದ ಹನ್ನೆರಡು ಹೆಸರುಗಳೂ ದ್ವಾದಶಾದಿತ್ಯರ ನಾಮಧೇಯಗಳು. ಇವುಗಳೆಲ್ಲವೂ ಯಜ್ಞಕ್ಕಾಗಿ ನನಗೆ ಒದಗಲಿ! ಎಂಬ ಪ್ರಾರ್ಥನೆಯೊಡನೆ ಚಮಕಾಧ್ಯಾಯವು ಪರಿಸಮಾಪ್ತಿಯಾಗಿದೆ.

---

## 20. ಇಡಾ ದೇವಹೂಃ

ಚಮಕಾಧ್ಯಾಯದ ಕೊನೆಯಲ್ಲಿ ವೈದಿಕರು ಪಠಿಸುವ 'ಇಡಾ ದೇವ ಹೂಃ' ಎಂದು ಪ್ರಾರಂಭವಾಗುವ ಮಂತ್ರವನ್ನು ಈಗ ವಿಚಾರ ಮಾಡಬೇಕಾಗಿದೆ.

**ಇಡಾ ದೇವಹೂರ್ಮನುರ್ಯಜ್ಞನೀರ್ಬೃಹಸ್ಪತಿರುಕ್ಥಾಮದಾನಿ ಶಗ್ಂಸಿಷದ್ ವಿಶ್ವೇದೇವಾಃ ಸೂಕ್ತವಾಚಃ ಪೃಥಿವಿ ಮಾತರ್ಮಾ ಮಾ ಹಿಗ್ಂಸೀರ್ಮಧು ಮನಿಷ್ಯೇ ಮಧು ಜನಿಷ್ಯೇ ಮಧು ವಕ್ಷ್ಯಾಮಿ ಮಧು ವದಿಷ್ಯಾಮಿ ಮಧು ಮತೀಂ ದೇವೇಭ್ಯೋ ವಾಚಮುದ್ಯಾಸಗ್ಂ ಶುಶ್ರೂಷೇಣ್ಯಾಂ ಮನುಷ್ಯೇಭ್ಯಸ್ತಂ ಮಾ ದೇವಾ ಅವನ್ತು ಶೋಭಾಯೈ ಪಿತರೋಽನುಮದನ್ತು||**

"ಇಡಾ ಎಂದರೆ ಗೋರೂಪಿಣಿಯಾದ ಬ್ರಹ್ಮವಿದ್ಯೆಯು ದೇವತೆಗಳನ್ನು ಆಹ್ವಾನಿಸತಕ್ಕದ್ದಾಗಿರುವದು. ಮಂತ್ರರೂಪವಾದ ಈ ವಾಗ್ದೇವತೆಯೇ ಯಜ್ಞನೀ–ಎನಿಸಿದೆ. ಬೃಹಸ್ಪತಿಯೆಂಬ ಕರ್ಮಸಾಕ್ಷಿಯಾದ ಈಶ್ವರನು ಕರ್ಮದಿಂದುಂಟಾದ ಸುಖಗಳನ್ನು ಪ್ರತಿಪಾದಿಸುತ್ತಿರುವವನು. ವಿಶ್ವೇದೇವತೆಗಳು ಶೋಭನವಾದ ವಾಕ್ಯಗಳಿಂದ ನಮಗೆ ಮಂಗಳವನ್ನುಂಟುಮಾಡಲಿ.

ಪೃಥಿವೀದೇವಿಯು ನಮ್ಮನ್ನು ಹಿಂಸಿಸದೆ ಇರಲಿ. ಏಕೆಂದರೆ (ದೇವತೆಗಳಾದ) ನಿಮಗೆಲ್ಲ ನಾನು ಮನಸ್ಸಿನಿಂದ ಮಧು (ಮಧುರವಾದದ್ದನ್ನು) ಚಿಂತಿಸುವೆನು. ಹಾಗೂ ಸ್ತೋತ್ರಮಾಡುವೆನು, ನಾನೂ ಮಧುವನ್ನೇ ಆಡುತ್ತಾ ಸ್ವಜನರ ವಿಷಯದಲ್ಲಿಯೂ ಮಧುವಾಗಿಯೇ ವ್ಯವಹರಿಸುವೆನು. ದೇವತೆಗಳಿಗೂ ಮಧುಮತಿಯನ್ನೇ (ಹವಿಸ್ಸಿನಿಂದ ಕೂಡಿದ ವಚನವನ್ನೇ) ನೀಡುವೆನು, ಮನುಷ್ಯರಿಗೆ ಯೋಗ್ಯರೀತಿಯ ಕೇಳಲು ಇಂಪಾದ (ಸತ್ಯವಚನರೂಪವಾದ) ಮಧುವನ್ನೇ ಕೊಡುವೆನು. ಹೀಗೆ ನಡೆದುಕೊಳ್ಳುವ ನನ್ನನ್ನು ದೇವತೆಗಳು ಕಾಪಾಡಲಿ! ನಾನು ಕೀರ್ತನೆಯಿಂದ ಶೋಭಿಸುವಂತೆ ಪಿತೃಗಳೂ ಅನುಗ್ರಹಿಸಲಿ!"

ಈ ಪ್ರಾರ್ಥನೆಯು ಎಷ್ಟು ಸುಂದರವಾಗಿದೆಯೆಂಬುದನ್ನು ವಾಚಕರು ಅನುಸಂಧಾನಮಾಡಬೇಕು. ವೇದವಿದ್ಯೆಯನ್ನು ಗೋವಿಗೆ ಇಲ್ಲಿ ಹೋಲಿಸಲಾಗಿದೆ. ಬೃಹದಾರಣ್ಯಕೋಪನಿಷತ್ತಿನಲ್ಲಿಯೂ ವಾಕ್ಕನ್ನು ಧೇನುವೆಂದು ಚಿಂತಿಸಬೇಕೆಂದೂ ಅದರ ನಾಲ್ಕು ಮೊಲೆಗಳಂತಿರುವ ಸ್ವಾಹಾ–ಸ್ವಧಾ–ವಷಟ್, ಹಂತ, ಎಂಬಿವುಗಳಲ್ಲಿ ಸ್ವಾಹಾ–ವಷಟ್ ಎಂಬೀ ಎರಡು ಮೊಲೆಗಳನ್ನು ದೇವತೆಗಳೂ ಹನ್ತ–ಎಂಬಿದನ್ನು ಮನುಷ್ಯರೂ ಸ್ವಧಾ ಎಂಬಿದನ್ನು ಪಿತೃಗಳೂ ಆಶ್ರಯಿಸಿರುತ್ತಾರೆಂದೂ ತಿಳಿಸಿರುತ್ತದೆ. ಇಡಾ–ಎಂಬ ಹೆಸರಿನ ಈ ವೇದವಾಕ್ಕು ದೇವಹೂಃ–ಎಂದರೆ ದೇವತೆಗಳನ್ನು ಕರೆಯತಕ್ಕಾದ್ದಾಗಿದೆ. ವೇದಮಂತ್ರಗಳ ಮೂಲಕವೇ ನಾವು ಯಜ್ಞಕ್ಕೆ ದೇವತೆಗಳನ್ನು ಕರೆಯಬೇಕಾಗಿರುವದು. ಆದ್ದರಿಂದ ವೇದಾಧ್ಯಯನವಿಲ್ಲದೆ ಯಜ್ಞವಿರುವದಿಲ್ಲ. ಮನು–ಎಂದರೆ ಮಂತ್ರರೂಪವಾಗಿರುವ ವೇದವು. ಮನನಮಾಡುವವರನ್ನು ಕಾಪಾಡತಕ್ಕದ್ದಾಗಿರುವದು. ಮತ್ತು ಯಜ್ಞನೀಃ ಎಂದರೆ ಕರ್ಮಮಾರ್ಗವನ್ನು ಉಪದೇಶಿಸಿ ನಮ್ಮನ್ನು ಯಜ್ಞವೆಂಬ ಸತ್ಕರ್ಮಕ್ಕೆ

ಕೊಂಡೊಯ್ದು ಬಿಡುವದರಿಂದ ವೇದವನ್ನು ಹೀಗೆ ಹೆಸರಿಸಿದೆ. ಇನ್ನು ಬೃಹಸ್ಪತಿಯೆಂದರೆ ಪರಮಾತ್ಮನೇ ಆಗಿರುವನು. ಅವನನ್ನು ಇಲ್ಲಿ ಕರ್ಮಗಳಿಗೆ ಸಾಕ್ಷಿಯಾಗಿರುವ ಈಶ್ವರನೆಂದು ಕರೆಯಲಾಗಿದೆ. ಈತನು ಉಕ್ಥಾಮದಾನಿ–ಎಂದರೆ ಕರ್ಮದಿಂದ ಲಭಿಸಬಹುದಾದ ಸುಖಗಳನ್ನು ಕೊಡಲಿ! ಅವುಗಳ ವೈಶಿಷ್ಟ್ಯವನ್ನು ತಿಳಿಸುತ್ತಾ ನಮ್ಮನ್ನು ಅನುಗ್ರಹಿಸಲಿ ಎಂದಭಿಪ್ರಾಯ.

ಇನ್ನು ಸೂಕ್ತವಾಚಃ–ಎಂದರೆ ಯಾವ ಶೋಭನವಾದ ಮಾತುಗಳುಂಟೋ ಅವು. ಉದಾಹರಣೆಗೆ 'ಶಾಂತೋ ಭವ; ಭದ್ರಂ ಭೂಯಾತ್; ಸ್ವಸ್ತ್ಯಸ್ತು' ಎಂಬೀ ಮುಂತಾದವುಗಳು. ಇವೇ ಸೂಕ್ತವಾಕ್ಕುಗಳು. ಇವುಗಳನ್ನು (ಶಂಸಿಷತ್) ಆಡುತ್ತಾ ದೇವತೆಗಳೂ (ವಿಶ್ವೇದೇವಾ) ನಮ್ಮನ್ನು ಕಾಪಾಡಲಿ! ಎಂದು ಪ್ರಾರ್ಥಿಸಲಾಗಿದೆ. ದೇವತೆಗಳೆಲ್ಲ ಅಂತರಿಕ್ಷ ಹಾಗೂ ಸ್ವರ್ಗಲೋಕನಿವಾಸಿಗಳೆಂಬುದು ಪ್ರಸಿದ್ಧವಾಗಿದೆ. ಆದರೆ ನಾವು ಸದಾಕಾಲವೂ ವಾಸಿಸುತ್ತಿರುವ ಪೃಥಿವೀಮಾತೆಯನ್ನೂ ದೇವತೆಯೆಂದೇ ತಿಳಿಯಬೇಕು. ಆದ್ದರಿಂದ ಎಲೈ ಪೃಥಿವೀತಾಯಿಯೆ, ನೀನು ನಮ್ಮನ್ನು ಮಾ ಹಿಂಸೀಃ–ಹಿಂಸಿಸಬೇಡ–ಎಂದು ಕೇಳಿಕೊಂಡಿದೆ. ಆದರೆ ಆಕೆಯು 'ನಿನ್ನನ್ನೇಕೆ ಹಿಂಸಿಸಬಾರದು? ಭೂಮಿಯಾದ ನನಗೆ ಭಾರವಾಗಿರುವ ನಿನ್ನಿಂದೇನು ಉಪಯೋಗ?' ಎಂದು ಕೇಳಬಹುದಲ್ಲವೆ? ಎಂದರೆ ಅದಕ್ಕೆ ಈ ಪ್ರಾರ್ಥನೆಯು ಉತ್ತರಿಸುತ್ತಿದೆ. ಹಾಗಲ್ಲ, ನಾನು ಜನ್ಮವನ್ನು ವ್ಯರ್ಥ ಮಾಡಿಕೊಳ್ಳುವದಿಲ್ಲ; ಹೇಗೆಂದರೆ: 'ದೇವತೆಗಳಾದ ನಿಮ್ಮೆಲ್ಲರ ಸ್ವರೂಪವನ್ನೂ ಮನಸ್ಸಿನಲ್ಲಿ ಮಧು (ಶೋಭನವಾಗಿ) (ಮನಿಷ್ಯೇ) ಚಿಂತಿಸುತ್ತೇನೆ. ಹಾಗೂ ಮಧುರವಾದ ಸ್ತೋತ್ರಗಳಿಂದ ಆರಾಧಿಸುವೆನು (ಜನಿಷ್ಯೇ). ನನ್ನ ಒಳ್ಳೆಯದಕ್ಕಾಗಿಯೇ (ವಕ್ಷ್ಯಾಮಿ ಮಧು) ಮಧುರವಾಗಿ ಮಾತನಾಡುವೆನು. ನನ್ನ ಸ್ವಜನರ ವಿಷಯದಲ್ಲಿಯೂ (ಮಧು ವದಿಷ್ಯಾಮಿ) ಹಿತವಾಗಿಯೇ ಮಾತುಗಳನ್ನು ಆಡುವೆನು; ಮತ್ತು ದೇವೇಭ್ಯಃ–ದೇವತೆಗಳಿಗೆ ಮಧುಮತಿಯಾದ (ಹವಿಸ್ಸಿನಿಂದ ಕೂಡಿದ) (ವಾಚಮ್) ಮಾತನ್ನೇ ಉದ್ಯಾಮ್

(ಸಮರ್ಪಿಸುವೆನು). ಬರಿಗೈಯಲ್ಲಿ ಅಥವಾ–ಮಾತಿನ ಉಪಚಾರದಲ್ಲಿಯೇ ನಾನು ಕಾಲಹಾಕುವದಿಲ್ಲ. ದೇವತೆಗಳಾದ ನಿನಗೆ ಯೋಗ್ಯವಾದ ಹವಿಸ್ಸನ್ನೂ ಸಮರ್ಪಿಸುವೆನು–ಎಂದರೆ ಕರ್ಮಾನುಷ್ಠಾನವನ್ನೂ ಮಾಡುವೆನು'– ಎಂದಭಿಪ್ರಾಯ. ಮನುಷ್ಯೇಭ್ಯಃ ಮನುಷ್ಯರಿಗೂ ಶುಶ್ರೂಷ್ಯೇಣ್ಯಾಂ–ಕೇಳಲು ಯೋಗ್ಯವಾದ ಮಾತುಗಳಿಂದಲೇ ತೃಪ್ತಿಗೊಳಿಸುವೆನು. ಇಲ್ಲಿಯೂ ಮಾತಿನ ಉಪಚಾರದೊಡನೆ ಉಳಿದ ಆತಿಥ್ಯವನ್ನೂ ಗ್ರಹಿಸಬೇಕು. ಅತಿಥಿಗಳ ವಿಷಯಕ್ಕೆ ನಾವು ನಡೆದುಕೊಳ್ಳಬೇಕಾದ ರೀತಿಯನ್ನು ಹೀಗೆ ಸೂಚಿಸಲಾಗಿದೆ.

ಕೊನೆಯದಾಗಿ 'ತಂ ಮಾ ದೇವಾ ಅವನ್ತು'– ಹೀಗೆ ಸರಿಯಗಿ ನಡೆದುಕೊಳ್ಳುವ ನನ್ನನ್ನು ದೇವತೆಗಳು ಕಾಪಾಡಲಿ! 'ಶೋಭಾಯ್ಯೆ ಪಿತರೋಽನುಮದಂತು'–ನಾನು ಕೀರ್ತ್ಯಾದಿಗಳಿಂದ ಜಗತ್ತಿನಲ್ಲಿ ಶೋಭಿಸುವದಕ್ಕಾಗಿ ಪಿತೃದೇವತೆಗಳು ಅನುಮತಿಯನ್ನು ನೀಡಲಿ! ಎಂದು ಪ್ರಾರ್ಥಿಸಿದೆ. ಮೂರು ಬಾರಿ ಶಾಂತಿಃ ಎಂದು ಹೇಳಿರುವದು ಆಧ್ಯಾತ್ಮಿಕ ಆಧಿಭೌತಿಕ ಆಧಿದೈವಿಕಗಳೆಂಬ ಮೂರು ವಿಧವಾದ ತಾಪಗಳೂ ಪರಿಹಾರವಾಗಲಿ! ಎಂಬ ಅಭಿಪ್ರಾಯದಿಂದ ಕೂಡಿದೆ. ಹೀಗೆ ಚಮಕಾಧ್ಯಾಯವು ಪರಿಸಮಾಪ್ತವಾಗಿದೆ. ವಾಚಕರಿಗೆ ಮಂಗಳವಾಗಲಿ!

**ಓಂ ಶಾಂತಿಃ ಶಾಂತಿಃ ಶಾಂತಿಃ**

13. ಭಗವನ್ನಾಮಚಂದ್ರಿಕೆ : (ಅಷ್ಟೋತ್ತರಗಳ ಸಂಗ್ರಹ) 52
14. ಸನತ್ಸುಜಾತೀಯಮ್ : (ಪ್ರಕರಣಗಳು , ಸಂಪುಟ 7)
(ಮಹಾಭಾರತಾಂತರ್ಗತ ಸನತ್ಸುಜಾತೀಯ ; ಶಾಂಕರ ಭಾಷ್ಯ ಅನುವಾದ ಸಹಿತ) 254
15. ಪ್ರಬೋಧ ಸುಧಾಕರ : (ಪ್ರಕರಣಗಳು, ಸಂಪುಟ 8) ಪ್ರಬೋದ ಸುಧಾಕರ, ಪ್ರಶ್ನೋತ್ತರ ರತ್ನಮಾಲಿಕಾ, ಶ್ರೀರಾಮಭುಜಂಗ ಪ್ರಯಾತ, ದತ್ತಲಹರಿ ಸಹಿತ ) 112
16. ದೇವೀಮಾಹಾತ್ಮ್ಯ : (ದುರ್ಗಾ ಸಪ್ತಶತೀ – ಮೂಲ, ಭಾವಾರ್ಥ ಸಹಿತ ) 128
17. ಗೀತಾಮನನ : (101 ಶ್ಲೋಕಗಳಲ್ಲಿ ಗೀತೆಯ ಸಂಗ್ರಹ – ವಿವರಣೆ ) 50
18. ಗೃಹ ಪ್ರವೇಶ :(ಹೊಸದಾಗಿ ಮನೆಯನ್ನು ಕಟ್ಟಿದವರು ಅನುಸರಿಸಬೇಕಾದ ಕ್ರಮಗಳ ಅರ್ಥವಿವರಣೆ, ಗೃಹಸ್ಥಧರ್ಮದ ಪ್ರಾಶಸ್ತ್ಯದೊಡನೆ– ಅಧ್ಯಾತ್ಮತತ್ತ್ವವಿಚಾರ ಸಹಿತ ) 46
19. ಸ್ತುತಿ ಪುಷ್ಪಾಂಜಲಿ : (ಭಕ್ತರೆಲ್ಲರೂ ಮತ್ತು ಮಕ್ಕಳು ಕಂಠಪಾಠಮಾಡಲು ಯೋಗ್ಯವಾದ ಶ್ಲೋಕಗಳು, ಪ್ರತಿಪದಾರ್ಥಗಳ ಸಹಿತ) 68


## III. ಅಧ್ಯಾತ್ಮಜಿಜ್ಞಾಸುಗಳಿಗೆ (ತತ್ತ್ವಪ್ರಧಾನವಾದ ಮುಮುಕ್ಷುಗಳಿಗೆ )

20. ಮಹಾನಾರಾಯಣೋಪನಿಷತ್ತು : (ಕನ್ನಡದಲ್ಲಿ ವಿಸ್ತಾರವಾದ ಅರ್ಥವಿವರಣೆ ) 219
21. ತೈತ್ತಿರೀಯೋಪನಿಷದ್ಭಾಷ್ಯವಾರ್ತಿಕ : (ಮೂಲ– ಅನುವಾದ ಸಹಿತ ) 200
22. ಆತ್ಮಪ್ರತಿಬೋಧಃ (ಕೇನೋಪನಿಷತ್ತಿನ ಕುರಿತ ಪ್ರಬಂಧ) 48
23. ಸರಸ್ವತೀರಹಸ್ಯೋಪನಿಷಚ್ಚಂದ್ರಿಕೆ : (ಈ ಹೆಸರಿನ ಉಪನಿಷತ್ತಿನ ಮೇಲೆ ಬರೆದಿರುವ ವಿವರಣೆ 74
24. ಬೃಹದಾರಣ್ಯಕೋಪನ್ಯಾಸಮಂಜರಿ : (ಶಾಂಕರ ಭಾಷ್ಯಾನುಸಾರವಾದ ಲಘು ವಿವರಣೆ 360
25. ಛಾಂದೋಗ್ಯೋಪನ್ಯಾಸಮಂಜರಿ : (ಶಾಂಕರ ಭಾಷ್ಯಾನುಸಾರವಾದ ಲಘು ವಿವರಣೆ 348
26. ಶ್ವೇತಾಶ್ವತರೋಪನ್ಯಾಸಮಂಜರಿ : ( ಉಪನಿಷತ್ತಿನ ಲಘು ವಿವರಣೆ) 354
27. ತೈತ್ತಿರೀಯೋಪನ್ಯಾಸಮಂಜರಿ : ( ಉಪನಿಷತ್ತಿನ ಲಘು ವಿವರಣೆ) 84
28. ಐತರೇಯೋಪನ್ಯಾಸಮಂಜರಿ : (ಈ ಉಪನಿಷತ್ತಿನ ಲಘು ವಿವರಣೆ) 36
29. ಗೀತಾ ಶಾಸ್ತ್ರಾರ್ಥ ವಿವೇಕ : (ಶ್ರೀ ಶ್ರೀಗಳವರ ಸಂಸ್ಕೃತ ಗ್ರಂಥದ ಕಿರುಪರಿಚಯ) 52

# ದಿ. ವೇ|| ಬ್ರ|| ಶ್ರೀ ಹೆಚ್. ಎಸ್. ಲಕ್ಷ್ಮೀನರಸಿಂಹಮೂರ್ತಿಗಳು
## (1928 - 2007)

ಅಧ್ಯಾತ್ಮ ವಿದ್ಯಾಪ್ರವೀಣ ವೇ|| ಬ್ರ|| ಶ್ರೀ ಹೆಚ್.ಎಸ್. ಲಕ್ಷ್ಮೀನರಸಿಂಹಮೂರ್ತಿಗಳು ತಾ|| 2-6-1928ರಂದು ನರಸಿಂಹರಾಜಪುರದಲ್ಲಿ ಜನಿಸಿದರು. ಇವರ ಪೂಜ್ಯ ತಂದೆಯವರು ಶೃಂಗೇರಿಯ ಕೃಷ್ಣಯಜುರ್ವೇದ ಸಲಕ್ಷಣ ಘನಾಂತ ಸ್ಮಾರ್ತಪ್ರಯೋಗ ವಿದ್ವಾಂಸರಾಗಿದ್ದ ವೇ|| ಶ್ರೀಕಂಠ ಘನಪಾಠಿಗಳವರು ಮತ್ತು ತಾಯಿಯವರು ಸೌ|| ಕಮಲಮ್ಮನವರು. ಶ್ರೀ ಮೂರ್ತಿಯವರು ಒಂಬತ್ತನೆಯ ವಯಸ್ಸಿನಲ್ಲಿಯೇ ಬ್ರಹ್ಮಚರ್ಯಾಶ್ರಮವನ್ನು ಸ್ವೀಕರಿಸಿ ತಂದೆಯವರಲ್ಲಿಯೇ ಉಪಯುಕ್ತವಾದ ವೇದಭಾಗವನ್ನು ಅಭ್ಯಾಸ ಮಾಡಿದರು. ಆದರೆ ತಮ್ಮ 14ನೇ ವಯಸ್ಸಿನಲ್ಲಿ ಪಿತೃವಿಯೋಗವಾದ್ದರಿಂದ ಮುಂದೆ ಬೇಲೂರಿನ ಸಂಸ್ಕೃತ ಪಾಠಶಾಲೆಯಲ್ಲಿ 4 ವರ್ಷ ವ್ಯಾಸಂಗ ಮಾಡಿ, ಚಂಪೂ ನಾಟಕ (ಸಾಹಿತ್ಯ) ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರು. ನಂತರ 1947ರಲ್ಲಿ ಹೊಳೆನರಸೀಪುರದಲ್ಲಿ ಶ್ರೀ ಶ್ರೀ ಸಚ್ಚಿದಾನಂದೇಂದ್ರ ಸರಸ್ವತೀಸ್ವಾಮಿಗಳಿಂದ ಸ್ಥಾಪಿತವಾಗಿದ್ದ "ಅಧ್ಯಾತ್ಮ ವಿದ್ಯಾನಿಲಯ"ದಲ್ಲಿ ಶ್ರೀಗಳಿಂದಲೇ 5 ವರ್ಷ ಕಾಲ ಶಾಂಕರಭಾಷ್ಯ ಪ್ರಸ್ಥಾನಗಳನ್ನು ಅಧ್ಯಯನ ಮಾಡಿ 1952ರಲ್ಲಿ "ಅಧ್ಯಾತ್ಮ ವಿದ್ಯಾಪ್ರವೀಣ" ಎಂಬ ಪ್ರಶಸ್ತಿಯನ್ನು ಪಡೆದರು. ನಂತರ ಕಾರ್ಯಾಲಯದಲ್ಲೇ ಪಂಡಿತರಾಗಿ ನೇಮಕಗೊಂಡು ಪಾಠ, ಪ್ರವಚನ, ವೇದಾಂತಪ್ರಚಾರ, ಗ್ರಂಥಪ್ರಕಾಶನ, ಗ್ರಂಥರಚನೆ ಮುಂತಾದ ಹಲವಾರು ಕಾರ್ಯಗಳನ್ನು ನಡೆಸಿಕೊಡುತ್ತಾ ಜಯಪ್ರಿಯರಾಗಿ ಶ್ರೀ ಶ್ರೀಗಳವರ ಶಿಷ್ಯರಲ್ಲಿ ಗಣ್ಯರಾಗಿದ್ದು ಕಾರ್ಯಾಲಯದ ಪುರೋಭಿವೃದ್ಧಿಗೆ ಬಹುಮುಖವಾಗಿ ಕಾರಣರಾದರು.

ಶ್ರೀ ಶ್ರೀಗಳು 1975ರಲ್ಲಿ ಬ್ರಹ್ಮೀಭೂತರಾದ ಮೇಲೆ ಶ್ರೀ ಮೂರ್ತಿಗಳೇ ಅಧ್ಯಾತ್ಮ ಪ್ರಕಾಶ ಮಾಸ ಪತ್ರಿಕೆಯ ಸಂಪಾದಕರಾದರು. 1997-98 ಮತ್ತು 2001-02 ಈ ಅವಧಿಯಲ್ಲಿ ಇವರು ನಡೆಸಿಕೊಟ್ಟ ಶಾಂಕರಭಾಷ್ಯಾನುಸಾರ "ಬ್ರಹ್ಮಸೂತ್ರಭಾಷ್ಯ" ಮತ್ತು "ಭಗವದ್ಗೀತಾ ಭಾಷ್ಯ"ಗಳ ವೇದಾಂತ ಶಿಬಿರಗಳು ಚಿರಸ್ಮರಣೀಯವಾಗಿವೆ. ಈ ಶಿಬಿರಗಳಲ್ಲಿನ ಪ್ರವಚನಗಳು ಸಿ.ಡಿ. (MP3) ರೂಪದಲ್ಲಿ ಈಗಲೂ ಕಾರ್ಯಾಲಯ ದಲ್ಲಿ ಲಭ್ಯವಿದೆ. ಇಷ್ಟಲ್ಲದೆ ಶ್ರೀ ಮೂರ್ತಿಗಳು ವೇದ, ವೇದಾಂತ, ಸಂಪ್ರದಾಯ, ಸ್ತೋತ್ರ ಇತ್ಯಾದಿ ವಿಷಯಗಳ ಸುಮಾರು 29 ಗ್ರಂಥಗಳನ್ನೂ ರಚಿಸಿರುತ್ತಾರೆ. ಈ ಗ್ರಂಥಗಳೆಲ್ಲವೂ ಕಾರ್ಯಾಲಯದಲ್ಲಿ ದೊರೆಯುತ್ತವೆ.

ಇಂತಹ ಪುಣ್ಯಜೀವಿಗಳು ತೀವ್ರ ಅನಾರೋಗ್ಯ ನಿಮಿತ್ತ ತಾ|| 4-2-2007 ರಂದು ತಮ್ಮ 79ನೇ ವಯಸ್ಸಿನಲ್ಲಿ ಹೊಳೆನರಸೀಪುರದಲ್ಲಿ ಕೀರ್ತಿಶೇಷರಾದರು. ಪೂಜ್ಯರ ಸುಮಾರು 55 ವರ್ಷಗಳ ಕಾಲದ ನಿಃಸ್ವಾರ್ಥಸೇವೆಯನ್ನು ಕಾರ್ಯಾಲಯವು ಸದಾ ಕಾಲವೂ ಅತ್ಯಂತ ಭಕ್ತಿಯಿಂದ ಸ್ಮರಿಸುತ್ತದೆ.